ಗುರುವಾರ, ಜೂನ್ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 159 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಖಾಲಿಯಿರುವ 8106 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಕೆ, ಪರೀಕ್ಷಾ ಸಿದ್ಧತೆಯ ಪ್ರಾಥಮಿಕ ಮಾಹಿತಿ ಇಲ್ಲಿದೆ.

ಆಳ-ಅಗಲ
ದೇಶದಲ್ಲಿ ರಾಜೀನಾಮೆ ಮಹಾಪರ್ವ

ಸಣ್ಣ ಹೂಡಿಕೆದಾರರಿಗೆ ಅವಕಾಶ 10

ಕ್ಯಾನ್ಸರ್: ಹೊಸ ಔಷಧ ಪ್ರಯೋಗ ಯಶಸ್ವಿ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,892 ▼	16,356 ▼	₹52,820 (ಬೆಂಗಳೂರು) ▲	₹ 63,800 (ಬೆಂಗಳೂರು) ▲	77.68 ▲

ಸಾಲ ದುಬಾರಿ • ಹಣದುಬ್ಬರ ನಿಯಂತ್ರಣದ ಬಗ್ಗೆ ತಜ್ಞರ ಅನುಮಾನ

ಆರ್‌ಬಿಐ: ರೆಪೊ ದರ ಮತ್ತೆ ಏರಿಕೆ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಬುಧವಾರ ಶೇಕಡ 0.50ರಷ್ಟು ಹೆಚ್ಚಿಸಿದ್ದು, ಗೃಹ, ವಾಹನ ಹಾಗೂ ಇತರ ಸಾಲಗಳ ಬಡ್ಡಿ ದರ ಇನ್ನಷ್ಟು ಜಾಸ್ತಿ ಆಗಲಿದೆ. ಹಣದುಬ್ಬರ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ ರೆಪೊ ದರವನ್ನು ಹೆಚ್ಚಿಸುತ್ತಿರುವುದು ಐದು ವಾರಗಳ ಅವಧಿಯಲ್ಲಿ ಇದು ಎರಡನೆಯ ಬಾರಿ.

ರೆಪೊ ದರದಲ್ಲಿ ಬುಧವಾರ ಆಗಿರುವ ಹೆಚ್ಚಳವು ಒಂದು ದಶಕಕ್ಕೂ ಹೆಚ್ಚಿನ ಅವಧಿಯಲ್ಲಿ ಒಂದೇ ಬಾರಿಗೆ ಮಾಡಿರುವ ಅತಿದೊಡ್ಡ ಏರಿಕೆ. ಈಗ ರೆಪೊ ದರವು ಶೇ 4.90ಕ್ಕೆ ತಲುಪಿದೆ. ಮೇ ತಿಂಗಳಲ್ಲಿ ಆರ್‌ಬಿಐ ರೆಪೊ ದರವನ್ನು ಶೇ 0.40ರಷ್ಟು ಜಾಸ್ತಿ ಮಾಡಿತ್ತು.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ತಾಳಿದ್ದ 'ಹೊಂದಾಣಿಕೆ' ಹಣಕಾಸಿನ ನಿಲುವನ್ನು ಆರ್‌ಬಿಐ ಕೈಬಿಟ್ಟಿದೆ. ಅಂದರೆ, ಮುಂದಿನ ದಿನಗಳಲ್ಲಿ ಹಣದುಬ್ಬರ ನಿಯಂತ್ರಿಸಲು ರೆಪೊ ದರವನ್ನು ಇನ್ನಷ್ಟು ಜಾಸ್ತಿ ಮಾಡುವ ಸಾಧ್ಯತೆ ಇದೆ. 'ಹಣದುಬ್ಬರ ಪ್ರಮಾಣವು ಗರಿಷ್ಠ ಮಟ್ಟಕ್ಕಿಂತ (ಶೇ 6) ಜಾಸ್ತಿ ಇದೆ' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯ ನಂತರ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಸತತವಾಗಿ ಮೂರು ತ್ರೈಮಾಸಿಕಗಳಲ್ಲಿ ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉಳಿದರೆ, ಹಣದುಬ್ಬರ ನಿಯಂತ್ರಿಸಲು ಸಾಧ್ಯವಾಗದಿರುವುದಕ್ಕೆ ಕಾರಣ ಏನು ಎಂಬುದನ್ನು ಆರ್‌ಬಿಐ, ಕೇಂದ್ರ ಸರ್ಕಾರಕ್ಕೆ ಲಿಖಿತವಾಗಿ ತಿಳಿಸಬೇಕಾಗುತ್ತದೆ.

ರೆಪೊ ದರ ಎಷ್ಟು ಹೆಚ್ಚಳ?



> ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪ್ರಮಾಣವನ್ನು ಮತ್ತಷ್ಟು ತಗ್ಗಿಸುವುದರಿಂದ ಹಣದುಬ್ಬರದ ಒತ್ತಡ ಇನ್ನಷ್ಟು ಕಡಿಮೆಯಾಗುವುದು ಖಚಿತ.
> **ಶಕ್ತಿಕಾಂತ ದಾಸ್**, ಆರ್‌ಬಿಐ ಗವರ್ನರ್

10ನೇ ಪುಟ ನೋಡಿ

ಯುಪಿಐಗೆ ಕ್ರೆಡಿಟ್ ಕಾರ್ಡ್: ಆರ್‌ಬಿಐ ಒಪ್ಪಿಗೆ

ಮುಂಬೈ (ಪಿಟಿಐ): ಏಕೀಕೃತ ಪಾವತಿ ವ್ಯವಸ್ಥೆಯ (ಯುಪಿಐ) ಜೊತೆ ಕ್ರೆಡಿಟ್ ಕಾರ್ಡ್ ಜೋಡಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಒಪ್ಪಿಗೆ ನೀಡಿದೆ. ಇದರಿಂದಾಗಿ ಗ್ರಾಹಕರಿಗೆ ಯುಪಿಐ ಮೂಲಕ ಪಾವತಿಗೆ ಹೆಚ್ಚಿನ ಆಯ್ಕೆಗಳು ದೊರೆಯಲಿವೆ.

ಆರಂಭದಲ್ಲಿ, 'ರೂಪೆ' ಕ್ರೆಡಿಟ್ ಕಾರ್ಡ್ ಅನ್ನು ಯುಪಿಐ ಜೊತೆ ಲಿಂಕ್ ಮಾಡಿಕೊಂಡು ಪಾವತಿ ಮಾಡಬಹುದು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ ಬಳಿಕ ಇದು ಜಾರಿಗೆ ಬರಲಿದೆ. ಈ ಕುರಿತು ಎನ್‌ಪಿಸಿಐಗೆ ಸೂಚನೆಗಳನ್ನು ನೀಡಲಾಗುವುದು ಎಂದು ದಾಸ್ ತಿಳಿಸಿದ್ದಾರೆ.

ಸದ್ಯ, ಉಳಿತಾಯ ಮತ್ತು ಚಾಲ್ತಿ ಖಾತೆಗಳನ್ನು ಡೆಬಿಟ್ ಕಾರ್ಡ್ ಮೂಲಕ ಯುಪಿಐಗೆ ಜೋಡಿಸಿಕೊಂಡು ಪಾವತಿ ಮಾಡಬಹುದು. ಯುಪಿಐ ಮೂಲಕ ನಡೆಸುವ ಪಾವತಿಯು ಉಚಿತವಾಗಿದೆ. ಕ್ರೆಡಿಟ್ ಕಾರ್ಡ್ ಕಂಪನಿಗಳು ವರಮಾನಕ್ಕಾಗಿ ಸಾಮಾನ್ಯವಾಗಿ ಮರ್ಚೆಂಟ್ ಡಿಸ್ಕೌಂಟ್ ರೇಟ್ (ಎಂಡಿಆರ್) ಮೇಲೆ ಅವಲಂಬಿತವಾಗಿರುತ್ತವೆ. ಪ್ರತಿ ಬಾರಿ ವರ್ತಕರಿಗೆ ಪಾವತಿ ಮಾಡಿದಾಗ ಶುಲ್ಕ ಪಡೆಯಲಾಗುತ್ತಿದೆ. 'ಯುಪಿಐ ಮೂಲಕ ಕ್ರೆಡಿಟ್ ಕಾರ್ಡ್ ಬಳಸುವುದಕ್ಕೆ ಶುಲ್ಕ ವಿಧಿಸುವ ಬಗ್ಗೆ ಬ್ಯಾಂಕ್‌ಗಳು ನಿರ್ಧಾರ ತೆಗೆದುಕೊಳ್ಳಲಿವೆ' ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಟಿ. ರವಿ ಶಂಕರ್ ಹೇಳಿದ್ದಾರೆ.

ದೇಶದಲ್ಲಿ ಯುಪಿಐ ಬಳಕೆ

26 ಕೋಟಿ — ಬಳಕೆದಾರರ ಸಂಖ್ಯೆ
5 ಕೋಟಿ — ವರ್ತಕರ ಸಂಖ್ಯೆ
₹ 10.40 ಲಕ್ಷ ಕೋಟಿ — ಯುಪಿಐ ಮೂಲಕ ಮೇನಲ್ಲಿ ಆಗಿರುವ ವರ್ಗಾವಣೆ ಮೊತ್ತ

ಮಿಥಾಲಿ ರಾಜ್ ವಿದಾಯ

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್‌ನ ದಂತಕಥೆ ಮಿಥಾಲಿ ರಾಜ್ ಅಂತರರಾಷ್ಟ್ರೀಯ ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ಬುಧವಾರ ನಿವೃತ್ತಿ ಪ್ರಕಟಿಸಿದರು. ಇದರೊಂದಿಗೆ 23 ವರ್ಷಗಳ ಅವರ ಸುದೀರ್ಘ ವೃತ್ತಿ ಜೀವನಕ್ಕೆ ತೆರೆಬಿದ್ದಿದೆ.

ಜನನ : 1982, ಡಿ.3, ರಾಜಸ್ಥಾನ
ವಯಸ್ಸು : 39 ವರ್ಷ
ಬ್ಯಾಟಿಂಗ್ ಶೈಲಿ : ಬಲಗೈ
ಪದಾರ್ಪಣೆ : ಜೂನ್ 26, 1999
ಕೊನೆಯ ಪಂದ್ಯ : ಮಾರ್ಚ್ 27, 2022

10,868 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿಹೆಚ್ಚು ರನ್

ಮಾದರಿ	ಪಂದ್ಯ	ರನ್	ಶ್ರೇಷ್ಠ	ಸರಾಸರಿ	ಶತಕ	ಅರ್ಧಶತಕ	ಕ್ಯಾಚ್
ಟೆಸ್ಟ್	12	699	214	43.68	1	4	12
ಏಕದಿನ	232	7,805	125*	50.68	7	64	64
ಟಿ20	89	2,364	97*	37.52	-	17	19

ದಾಖಲೆಗಳ ಒಡತಿ

1,321 ವಿಶ್ವಕಪ್‌ನಲ್ಲಿ ಭಾರತದ ಪರ ಹೆಚ್ಚು ರನ್
7,805 ಏಕದಿನ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್
214 ಟೆಸ್ಟ್ ಕ್ರಿಕೆಟ್‌ನಲ್ಲಿ ದ್ವಿಶತಕ ಗಳಿಸಿದ ಭಾರತದ ಏಕೈಕ ಆಟಗಾರ್ತಿ
ಎರಡು ಏಕದಿನ ವಿಶ್ವಕಪ್ ಟೂರ್ನಿಗಳಲ್ಲಿ (2005 ಮತ್ತು 2017) ಭಾರತ ತಂಡವನ್ನು ಫೈನಲ್‌ಗೆ ಮುನ್ನಡೆಸಿದ ಶ್ರೇಯ

ಪ್ರಜಾವಾಣಿ ಗ್ರಾಫಿಕ್ಸ್

ವಿವರ ಪುಟ–12

ಕೆನರಾ ಬ್ಯಾಂಕ್
Canara Bank
Government of India Undertaking
Together We Can
ಗೃಹ ಸಾಲ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

'ಸಂವಿಧಾನ ಶಿಲ್ಪಿ' ಪದಕ್ಕೆ ಕತ್ತರಿ: ಆಡಳಿತ ಪಕ್ಷದವರ ಸೆಡವು

ಪಠ್ಯ: ಬಿಜೆಪಿಯ ಇನ್ನಿಬ್ಬರು ಶಾಸಕರ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆಯ ಕೆಲವು ಅಂಶಗಳ ಬಗ್ಗೆ ಆಡಳಿತ ಪಕ್ಷದ ಸದಸ್ಯರಲ್ಲೇ ಅಸಮಾಧಾನ ವ್ಯಕ್ತವಾಗುತ್ತಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಹೆಸರಿನ ಮುಂದಿದ್ದ 'ಸಂವಿಧಾನ ಶಿಲ್ಪಿ' ಪದಕ್ಕೆ ಪಠ್ಯದಲ್ಲಿ ಕತ್ತರಿ ಹಾಕಿದ್ದಕ್ಕೆ ಸಂಸದ ವಿ.ಶ್ರೀನಿವಾಸ ಪ್ರಸಾದ್, ನಂಜನಗೂಡಿನ ಬಿಜೆಪಿ ಶಾಸಕ ಹರ್ಷವರ್ಧನ ಆಕ್ರೋಶ ವ್ಯಕ್ತಪಡಿಸಿದ ಬೆನ್ನಲ್ಲೇ, ಇನ್ನಿಬ್ಬರು ಶಾಸಕರು ಅಸಮಾಧಾನ ತೋಡಿಕೊಂಡಿದ್ದಾರೆ.

ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿ ಈ ಸಂಬಂಧ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಪತ್ರ ಬರೆದಿದ್ದಾರೆ. 'ಸಂವಿಧಾನಶಿಲ್ಪಿ' ಪದವನ್ನು ಪಠ್ಯದಲ್ಲಿ ಮತ್ತೆ ಹಾಕುವ ಮೂಲಕ ನಮ್ಮ ಸರ್ಕಾರ ಅಂಬೇಡ್ಕರ್ ಕುರಿತು ಹೊಂದಿರುವ ಗೌರವ ಮತ್ತು ಬದ್ಧತೆಯನ್ನು ಸಾಬೀತು ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

'9 ನೇ ತರಗತಿಯ ಸಮಾಜ ವಿಜ್ಞಾನ ಪುಸ್ತಕದ ನಮ್ಮ ಸಂವಿಧಾನ ಎಂಬ ಪಾಠದಲ್ಲಿ ಡಾ. ಅಂಬೇಡ್ಕರ್ ಅವರ ಆತ್ಮವೇ ಆಗಿರುವ ಸಂವಿಧಾನ ಶಿಲ್ಪಿ ಎಂಬ ನಾಮಾಂಕಿತವನ್ನು ಕೈಬಿಟ್ಟಿದ್ದು ವಿಕೃತ ನಡೆ. ಇದಕ್ಕೆ ಸಾರ್ವಜನಿಕ ವಲಯದಲ್ಲಿ ಭಾರೀ ವಿರೋಧ ವ್ಯಕ್ತವಾಗಿದೆ. ಈ ಪ್ರಮಾದವನ್ನು ಸರಿಪಡಿಸಿ ಮುದ್ರಿಸುವುದಾಗಿ ಶಿಕ್ಷಣ ಸಚಿವರು ಹೇಳಿರುವುದು ಅಭಿನಂದನೀಯ' ಎಂದು ಅವರು ಹೇಳಿದ್ದಾರೆ.

ಡಾ. ಅಂಬೇಡ್ಕರ್ ಅವರನ್ನು 'ಸಂವಿಧಾನ ಶಿಲ್ಪಿ' ಎಂದು ಏಕೆ ಸಂಬೋಧಿಸುತ್ತಾರೆ ಎಂಬುದನ್ನು ವಿದ್ಯಾರ್ಥಿಗಳಿಗೆ ಸರಿಯಾಗಿ ಅರ್ಥವಾಗಬೇಕು. ಅದಕ್ಕಾಗಿ ಸಂವಿಧಾನ ಕರಡು ರಚನಾ ಸಮಿತಿ ಸದಸ್ಯರಲ್ಲಿ ಒಬ್ಬರಾಗಿದ್ದ ಟಿ.ಟಿ. ಕೃಷ್ಣಮಾಚಾರಿ ಸಂವಿಧಾನ ಸಭೆಯಲ್ಲಿ ಅಧಿಕೃತವಾಗಿ ದಾಖಲು ಮಾಡಿರುವ ಹೇಳಿಕೆಯನ್ನು ತಿದ್ದುಪಡಿ ಮಾಡುತ್ತಿರುವ ಪಠ್ಯದಲ್ಲಿ ಸೇರಿಸಿ ಮುದ್ರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

5ನೇ ಪುಟ ನೋಡಿ

ಅಕ್ಕ, ಕನಕ–ಪುರಂದರ ಪರಿಚಯಕ್ಕೂ ಕತ್ತರಿ

ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪರಿಷ್ಕರಣಾ ಸಮಿತಿಯು 7 ನೇ ತರಗತಿ ಸಮಾಜ ವಿಜ್ಞಾನದ ಭಾಗ–1 ರಲ್ಲಿದ್ದ ಸಂತ ಶಿಶುನಾಳ ಶರೀಫರು, ಕನಕದಾಸರು, ಅಕ್ಕಮಹಾದೇವಿ ಮತ್ತು ಪುರಂದರ ದಾಸರ ವಿವರಗಳನ್ನು ತೆಗೆದುಹಾಕಿದೆ ಎಂಬ ಟೀಕೆಗಳು ವ್ಯಕ್ತವಾಗಿವೆ.

ಬರಗೂರು ರಾಮಚಂದ್ರಪ್ಪ ನೇತೃತ್ವದ ಪರಿಷ್ಕರಣಾ ಸಮಿತಿ ಇದರಲ್ಲಿ 'ಭಕ್ತಿಪಂಥ ಮತ್ತು ಸೂಫಿ ಪರಂಪರೆ' ಎಂಬ ಪಾಠವನ್ನು ಸೇರಿಸಿತ್ತು. ಚಕ್ರತೀರ್ಥ ಸಮಿತಿಯು 7ನೇ ತರಗತಿಯಲ್ಲಿದ್ದ ಇಡೀ ಪಾಠವನ್ನೇ ಕೈಬಿಟ್ಟಿದೆ. 6 ನೇ ತರಗತಿಯ ಸಮಾಜ ವಿಜ್ಞಾನ ಭಾಗ–2 ರಲ್ಲಿ ಚಕ್ರತೀರ್ಥ ಸಮಿತಿ ಭಕ್ತಿ ಪಂಥದ ಬಗ್ಗೆ ಪಾಠವೊಂದನ್ನು ಸೇರಿಸಿದ್ದರೂ ಅಲ್ಲಿ ಕರ್ನಾಟಕದವರಿಗೆ ಸ್ಥಾನವಿಲ್ಲ ಮತ್ತು ಇವರ ಬಗ್ಗೆ ಬರೆದಿಲ್ಲ.

9 ನೇ ತರಗತಿ ಸಮಾಜ ವಿಜ್ಞಾನ ಭಾಗ–2 ರಲ್ಲಿ ಎರಡೇ ವಾಕ್ಯದಲ್ಲಿ ಕನಕದಾಸರು ಮತ್ತು ಪುರಂದರದಾಸರ ಪ್ರಸ್ತಾಪವಿದೆ. ಬರಗೂರು ಪರಿಷ್ಕರಣೆಯ 9ನೇ ತರಗತಿ ಸಮಾಜ ವಿಜ್ಞಾನ ಭಾಗ– 2 ರಲ್ಲಿ ಕನಕದಾಸರು, ಪುರಂದರ ದಾಸರು ಮತ್ತು ಶಿಸುನಾಳ ಶರೀಫರ ಬಗ್ಗೆ ಆಸಕ್ತಿದಾಯಕ ವಿವರಗಳಿದ್ದವು. ಅದನ್ನು ತೆಗೆದು ಹಾಕಲಾಗಿದೆ. 6 ನೇ ತರಗತಿ ಮತ್ತು 9 ನೇ ತರಗತಿ ಪಠ್ಯಗಳಲ್ಲಿ ಉತ್ತರಭಾರತದ ಭಕ್ತಿ ಪಂಥದವರ ಬಗ್ಗೆ ಬರೆದು ಕರ್ನಾಟಕ ಭಕ್ತಿಪಂಥಕ್ಕೆ ಕತ್ತರಿ ಹಾಕಲಾಗಿದೆ.

ಔಷಧಕ್ಕಾಗಿ... ಕೊಪ್ಪಳ ಜಿಲ್ಲೆಯ ಕುಟಕನಹಳ್ಳಿ ಗ್ರಾಮದಲ್ಲಿ ಬುಧವಾರ ಸಂಜೆ ಮೃಗಶಿರ ಮಳೆ ಕೂಡುವ ಸಮಯದಲ್ಲಿ ಅಶೋಕರಾವ್ ವ್ಯಾಸರಾವ ಕುಲಕರ್ಣಿ ಎಂಬುವವರು ಉಚಿತವಾಗಿ ನೀಡಿದ ಅಸ್ತಮಾ ನಿವಾರಣೆ ಮಾತ್ರೆ ಸೇವಿಸಲು ಸೇರಿದ್ದ ಜನ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರು

ಪಿಯು ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯ

ಬೆಂಗಳೂರು: ಹಿಜಾಬ್ ವಿವಾದದಲ್ಲಿ ಹೈಕೋರ್ಟ್ ನೀಡಿದ ತೀರ್ಪಿನ ನಂತರ, 2022-23ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಪಿಯು ತರಗತಿಗಳು ಗುರುವಾರದಿಂದ ಆರಂಭವಾಗಲಿದ್ದು, ವಿದ್ಯಾರ್ಥಿಗಳು ಕಾಲೇಜು ಅಭಿವೃದ್ಧಿ ಸಮಿತಿ ಸೂಚಿಸಿದ ಸಮವಸ್ತ್ರ ಧರಿಸುವುದು ಕಡ್ಡಾಯ ಎಂದು ಇಲಾಖೆ ಸೂಚಿಸಿದೆ. 7

ಚಿಲ್ಲರೆ ಹಣದುಬ್ಬರ ಶೇ 6.7ಕ್ಕೆ ಏರಿಕೆ

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪರಿಷ್ಕರಿಸಿದೆ. ಹಣದುಬ್ಬರ ದರವು ಶೇಕಡ 6.7ಕ್ಕೆ ಏರಲಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. 10

ಬಿಹಾರ: ಬಸ್‌ನಲ್ಲೇ ಅತ್ಯಾಚಾರ

ಬೇತಿಯಾ (ಬಿಹಾರ): ಬಿಹಾರದಲ್ಲಿ ಮಂಗಳವಾರ ಚಲಿಸುತ್ತಿದ್ದ ಬಸ್‌ನಲ್ಲಿ 17 ವರ್ಷದ ಬಾಲಕಿ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಚಾಲಕ, ನಿರ್ವಾಹಕ, ಕ್ಲಿನರ್ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ. 11

ಒಳ ಪುಟಗಳು

ಬೆಂಬಲ ಕೋರಿದ 'ಕೈ': ಮಣಿಯದ ದಳ 7

ಹೈದರಾಬಾದ್‌ನಲ್ಲಿ ನಡೆದ ಅತ್ಯಾಚಾರ: ಎಐಎಂಐಎಂ ಶಾಸಕನ ಪುತ್ರನ ಬಂಧನ 11

ಮಾಸ್ಕ್ ಧರಿಸದವರನ್ನು ವಿಮಾನದಿಂದ ಕೆಳಗಿಳಿಸಿ: ಡಿಜಿಸಿಎ

ನವದೆಹಲಿ (ಪಿಟಿಐ): ಎಚ್ಚರಿಕೆ ನೀಡಿದ ನಂತರವೂ ವಿಮಾನದೊಳಗೆ ಮಾಸ್ಕ್ ಧರಿಸಲು ನಿರಾಕರಿಸಿದರೆ ವಿಮಾನಯಾನ ಸಂಸ್ಥೆಗಳು ಪ್ರಯಾಣಿಕರನ್ನು ಕೆಳಗಿಳಿಸಬೇಕು ಎಂದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ಬುಧವಾರ ತಿಳಿಸಿದೆ.

ಇದೇ 3ರಂದು ದೆಹಲಿ ಹೈಕೋರ್ಟ್ ನೀಡಿದ್ದ ಆದೇಶದ ಮೇರೆಗೆ ಡಿಜಿಸಿಎ ಈ ಸಂಬಂಧ ಸುತ್ತೋಲೆ ಹೊರಡಿಸಿದೆ.

'ಮಾಸ್ಕ್ ಧರಿಸದವರು, ಸ್ವಚ್ಛತೆ ಕಾಪಾಡದವರ ವಿರುದ್ಧ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಗಗನಸಖಿಯರು, ಕ್ಯಾಪ್ಟನ್‌ಗಳು, ಪೈಲಟ್‌ಗಳು, ವಿಮಾನ ನಿಲ್ದಾಣ ಹಾಗೂ ವಿಮಾನದಲ್ಲಿ ನಿಯೋಜಿಸಿರುವ ಸಿಬ್ಬಂದಿಗೆ ಡಿಜಿಸಿಎ ಪ್ರತ್ಯೇಕ ನಿರ್ದೇಶನ ನೀಡಬೇಕು' ಎಂದು ಹೈಕೋರ್ಟ್ ಹೇಳಿತ್ತು.

ಪ್ರಯಾಣಿಕರು ಮಾಸ್ಕ್ ಧರಿಸುವುದನ್ನು ವಿಮಾನಯಾನ ಸಂಸ್ಥೆಗಳು ಖಚಿತಪಡಿಸಿಕೊಳ್ಳಬೇಕು ಮತ್ತು ವಿಶೇಷ ಸಂದರ್ಭದಲ್ಲಿ ಅನುಮತಿಯೊಂದಿಗೆ ಮಾತ್ರ ವಿನಾಯಿತಿ ನೀಡಲಾಗುವುದು ಎಂದು ಹೇಳಿದೆ.

ಭತ್ತ ಸೇರಿ 14 ಬೆಳೆಗಳ ಬೆಂಬಲ ಬೆಲೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಭತ್ತ, ಜೋಳ, ರಾಗಿ ಹಾಗೂ ದ್ವಿದಳ ಧಾನ್ಯಗಳು ಸೇರಿದಂತೆ 14 ಕೃಷಿ ಉತ್ಪನ್ನಗಳಿಗೆ ಕೇಂದ್ರ ಸರ್ಕಾರ 2022–23ನೇ ಸಾಲಿಗಾಗಿ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಹೆಚ್ಚಳ ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಆರ್ಥಿಕ ವ್ಯವಹಾರಗಳ ಮೇಲಿನ ಸಂಪುಟ ಸಮಿತಿಯ (ಸಿಸಿಇಎ) ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಬೇಸಾಯದ ಪ್ರದೇಶವನ್ನು ವಿಸ್ತರಿಸಲು ಹಾಗೂ ವಿವಿಧ ಬೆಳೆಗಳನ್ನು ಬೆಳೆಯುವಂತೆ ರೈತರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

'ಬಿತ್ತನೆ ಆರಂಭಕ್ಕೂ ಮುನ್ನವೇ ಯಾವ ಯಾವ ಬೆಳೆಗಳಿಗೆ ನೀಡಲಾಗುವ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸಲಾಗಿದೆ ಎಂಬ ಬಗ್ಗೆ ರೈತರಿಗೆ ಮಾಹಿತಿ

ಸಿಗುವುದು. ಯಾವ ಬೆಳೆಯನ್ನು ಬೆಳೆಯಬೇಕು ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಲು ರೈತರಿಗೆ ಇದರಿಂದ ನೆರವಾಗಲಿದೆ' ಎಂದು ಅವರು ಹೇಳಿದರು.

ಭತ್ತ ಸೇರಿದಂತೆ 14 ಬೆಳೆಗಳಿಗೆ ನೀಡುವ ಎಂಎಸ್‌ಪಿಯಲ್ಲಿ ಪ್ರತಿ ಕ್ವಿಂಟಲ್‌ಗೆ ₹ 92 ರಿಂದ ₹523ರಷ್ಟು ಹೆಚ್ಚಳ ಮಾಡಲಾಗಿದೆ. ಪ್ರತಿ ಕ್ವಿಂಟಲ್ ಮೆಕ್ಕೆಜೋಳಕ್ಕೆ ನೀಡಲಾಗುವ ಎಂಎಸ್‌ಪಿಯಲ್ಲಿ ₹ 92 ಹೆಚ್ಚಳ ಮಾಡಲಾಗಿದೆ. ಗರಿಷ್ಠ ಹೆಚ್ಚಳ ₹ 523 ಎಳ್ಳಿಗೆ ನೀಡಲಾಗಿದೆ.

ಭತ್ತಕ್ಕೆ ನೀಡುವ ಎಂಎಸ್‌ಪಿಯನ್ನು ₹ 100ರಷ್ಟು ಹೆಚ್ಚಿಸಲಾಗಿದ್ದು, ಕ್ವಿಂಟಲ್ ದರ ₹ 2,040 ಆಗಲಿದೆ. ಕಳೆದ ವರ್ಷದ ದರ ₹ 1,940 ಇತ್ತು. 'ಎ' ಗ್ರೇಡ್ ಭತ್ತಕ್ಕೆ ನೀಡುವ ಎಂಎಸ್‌ಪಿ ₹ 1,960 ಇದ್ದದ್ದು, ₹ 2,060 ಆಗಲಿದೆ.

ಸಜ್ಜೆಗೆ ನೀಡಲಾಗುವ ಎಂಎಸ್‌ಪಿಯನ್ನು ಪ್ರತಿ ಕ್ವಿಂಟಲ್‌ಗೆ ₹ 100ರಷ್ಟು ಹೆಚ್ಚಳ ಮಾಡಲಾಗಿದೆ. ತೊಗರಿ, ಉದ್ದು, ಕಡಲೆಕಾಯಿಗಳಿಗೆ ಸಂಬಂಧಿಸಿದ ಎಂಎಸ್‌ಪಿಯನ್ನು ₹ 300ರಷ್ಟು ಹೆಚ್ಚಿಸಲಾಗಿದೆ. ಪ್ರತಿ ಕ್ವಿಂಟಲ್ ತೊಗರಿಗೆ ₹ 6,600, ಹೆಸರು ಕಾಳಿಗೆ ₹ 7,755 ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಲಾಗಿದೆ.

ಮಧ್ಯಮ ಉದ್ದ ದಾರದ ಹತ್ತಿಗೆ ₹ 5,726ರಿಂದ 6,080ಕ್ಕೆ ಹೆಚ್ಚಿಸಲಾಗಿದ್ದರೆ, ಅಧಿಕ ಉದ್ದ ದಾರದ ಹತ್ತಿಗೆ ₹ 6,025ರಿಂದ 6,380ಗೆ ಹೆಚ್ಚಿಸಲಾಗಿದೆ.

2014–15ನೇ ಸಾಲಿನ ಎಂಎಸ್‌ಪಿಗೆ ಹೋಲಿಸಿದಾಗ, 2022–23ನೇ ಸಾಲಿಗಾಗಿ ಈ 14 ಬೆಳೆಗಳಿಗೆ ಘೋಷಿಸಿರುವ ಎಂಎಸ್‌ಪಿ ಶೇ 46 ರಿಂದ ಶೇ 131ರಷ್ಟು ಹೆಚ್ಚಳವಾಗಿದೆ.

ಉತ್ತರಪ್ರದೇಶದ ರಾಜಧಾನಿ ಲಖನೌದಲ್ಲಿ ನಡೆದ ಭೀಕರ ಘಟನೆ

ಪಬ್‌ಜಿ ಆಡದಂತೆ ತಡೆದ ತಾಯಿಗೆ ಗುಂಡಿಕ್ಕಿದ ಮಗ

ಪ್ರಜಾವಾಣಿ ವಾರ್ತೆ

ಲಖನೌ: ಆನ್‌ಲೈನ್ ಗೇಮ್ 'ಪಬ್‌ಜಿ' ಆಡುವುದನ್ನು ತಡೆದಿದ್ದಕ್ಕಾಗಿ 16 ವರ್ಷ ಪುತ್ರನೊಬ್ಬ ತಾಯಿಯನ್ನು ಗುಂಡಿಕ್ಕಿ ಹತ್ಯೆ ಮಾಡಿದ ಘಟನೆ ಇಲ್ಲಿ ನಡೆದಿದೆ.

ಈ ಕೃತ್ಯ ಯಾರಿಗೂ ತಿಳಿಯಬಾರದು ಎಂಬ ಉದ್ದೇಶದಿಂದ ಮನೆಯ ಕೋಣೆಯೊಂದರಲ್ಲಿ ತಾಯಿಯ ಮೃತದೇಹವನ್ನು ಆತ ಮೂರು ದಿನಗಳ ಕಾಲ ಬಚ್ಚಿಟ್ಟಿದ್ದ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಭಾರತದಲ್ಲಿನ ಬಳಕೆದಾರರಿಗಾಗಿ 'ಪಬ್‌ಜಿ' ಗೇಮ್‌ನ ಹೆಸರನ್ನು ಬದಲಿಸಲಾಗಿದ್ದು, 'ಬ್ಯಾಟಲ್ ಗ್ರೌಂಡ್ಸ್ ಮೊಬೈಲ್ ಇಂಡಿಯಾ' ಹೆಸರಿನಲ್ಲಿ ಬಿಡುಗಡೆ ಮಾಡಲಾಗಿದೆ.

ಘಟನೆ ವಿವರ: ಬಾಲಕನ ತಂದೆ ಸೈನ್ಯದಲ್ಲಿ ಅಧಿಕಾರಿಯಾಗಿದ್ದು, ಕೋಲ್ಕತ್ತದಲ್ಲಿ ಕರ್ತವ್ಯದಲ್ಲಿದ್ದಾರೆ. ಕುಟುಂಬ ಲಖನೌದಲ್ಲಿ ಇದೆ.

ಬಾಲಕ 'ಪಬ್‌ಜಿ' ಗೇಮ್‌ನ ವ್ಯಸನಿಯಾಗಿದ್ದ. ಇದಕ್ಕೆ ಆಕ್ಷೇಪಿಸುತ್ತಿದ್ದ ತಾಯಿ, 'ಪಬ್‌ಜಿ' ಆಡದಂತೆ ಆತನಿಗೆ ಬುದ್ಧಿವಾದ ಹೇಳುತ್ತಿದ್ದರು.

'ಕಳೆದ ಶನಿವಾರ (ಜೂ.4) ರಾತ್ರಿ ಬಾಲಕನ ತಾಯಿ ತಮ್ಮ ಕೋಣೆಯಲ್ಲಿ ಮಲಗಿದ್ದರು. ಆಗ, ತಂದೆಯ ಪಿಸ್ತೂಲ್‌ನಿಂದ ಬಾಲಕ ಗುಂಡಿಕ್ಕಿ ತಾಯಿಯನ್ನು ಹತ್ಯೆ ಮಾಡಿದ್ದಾನೆ. ತಾಯಿಯತ್ತ ಹಲವು ಸುತ್ತು ಗುಂಡು ಹಾರಿಸಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ತಾಯಿಯನ್ನು ಅಣ್ಣ ಹತ್ಯೆ ಮಾಡುವುದನ್ನು ತಂಗಿ ನೋಡಿದ್ದಾಳೆ. ಆದರೆ, ಈ ವಿಷಯವನ್ನು ಯಾರಿಗೂ ಹೇಳದಂತೆ ತಂಗಿಗೆ ತಾಕೀತು ಮಾಡಿದ್ದ ಬಾಲಕ, ಒಂದು ವೇಳೆ ಯಾರಿಗಾದರೂ ಹೇಳಿದರೆ ಆಕೆಯನ್ನು ಕೊಲ್ಲುವುದಾಗಿಯೂ ಬೆದರಿಕೆ ಹಾಕಿದ್ದ'.

'ತಾಯಿಯ ಮೃತದೇಹವನ್ನು ಕೋಣೆಯಲ್ಲಿ ಬಚ್ಚಿಟ್ಟಿದ್ದ ಬಾಲಕ, ಅದೇ ಕೋಣೆಯಲ್ಲಿ ತಂಗಿಯನ್ನು ಬಲವಂತದಿಂದ ಮಲಗಿಸುತ್ತಿದ್ದ. ತಂಗಿಯನ್ನು ಭಾನುವಾರ ಅದೇ ಕೋಣೆಯಲ್ಲಿ ಕೂಡಿ ಹಾಕಿ, ಬೀಗ ಹಾಕಿದ್ದ. ಗೆಳೆಯರನ್ನು ಭೇಟಿ ಮಾಡಲು ಹೋಗಿದ್ದ ಆತ ಆನ್‌ಲೈನ್ ಮೂಲಕವೇ ಊಟ ತರಿಸಿಕೊಂಡಿದ್ದ' ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ಮೃತದೇಹ ಕೊಳೆತು, ದುರ್ವಾಸನೆ ಬರಲು ಆರಂಭಿಸಿದಾಗ ರೂಮ್ ಫ್ರೆಷ್ನರ್ ಸಿಂಪಡಿಸುತ್ತಿದ್ದ. ತಾಯಿಯ ಬಗ್ಗೆ ಸ್ನೇಹಿತರು ವಿಚಾರಿಸಿದಾಗ, ಅವರು ಅಜ್ಜಿಯ ಮನೆಗೆ ಹೋಗಿದ್ದಾರೆ ಎಂಬುದಾಗಿ ಹೇಳಿದ್ದ'.

'ದುರ್ವಾಸನೆ ಸಹಿಸಲು ಕಷ್ಟವಾದ ನಂತರ ಬಾಲಕಿ ತನ್ನ ತಂದೆಗೆ ಕರೆ ಮಾಡಿ, ಅಣ್ಣನ ಕೃತ್ಯವನ್ನು ವಿವರಿಸಿದ್ದಾಳೆ. ವಿಷಯ ತಿಳಿದು ಆಘಾತಗೊಂಡ ಅವರು, ಸಂಬಂಧಿಕರನ್ನು ಸಂಪರ್ಕಿಸಿದ್ದಾರೆ. ನಂತರ ಸಂಬಂಧಿಕರು ಪೊಲೀಸರಿಗೆ ವಿಷಯ ತಿಳಿಸಿದ್ದಾರೆ' ಎಂದೂ ಅಧಿಕಾರಿಗಳು ಹೇಳಿದ್ದಾರೆ.

'ದುರಸ್ತಿ ಕಾರ್ಯಕ್ಕಾಗಿ ಮನೆಗೆ ಬಂದಿದ್ದ ಎಲೆಕ್ಟ್ರಿಷಿಯನ್ ವೊಬ್ಬರು ತಾಯಿಯನ್ನು ಹತ್ಯೆ ಮಾಡಿದ್ದಾಗಿ ಕಟ್ಟುಕತೆಯನ್ನು ಬಾಲಕ ಹೇಳಿದ್ದ. ನಂತರ, ತಾಯಿಯನ್ನು ತಾನೇ ಹತ್ಯೆ ಮಾಡಿದ್ದಾಗಿ ತಪ್ಪೊಪ್ಪಿಕೊಂಡ' ಎಂದೂ ತಿಳಿಸಿದ್ದಾರೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ

ಮಾಸ್ಕ್ ಕಡ್ಡಾಯ, ದಂಡ ಸದ್ಯಕ್ಕಿಲ್ಲ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, ಮಾಸ್ಕ್ ಧರಿಸುವುದು ಮತ್ತು ಅಂತರ ಕಾಯ್ದುಕೊಳ್ಳುವ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲಾಗುವುದು. ಆದರೆ, ಮಾಸ್ಕ್ ಧರಿಸದವರಿಗೆ ಸದ್ಯಕ್ಕೆ ದಂಡ ವಿಧಿಸುವುದಿಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ಪಷ್ಟಪಡಿಸಿದರು.

ಕೋವಿಡ್ ಪ್ರಕರಣಗಳ ಸಂಖ್ಯೆ 300 ದಾಟಿದೆ. ರೋಗ ಲಕ್ಷಣ ಗಂಭೀರವಾಗಿಲ್ಲ, ಆಸ್ಪತ್ರೆಗೆ ದಾಖಲಾಗುವ ಪ್ರಕರಣಗಳೂ ಹೆಚ್ಚಿಗೆ ಇಲ್ಲ. ಆದ್ದರಿಂದ ಆತಂಕ ಪಡುವ ಅಗತ್ಯವಿಲ್ಲ ಎಂದರು.

'ಶಾಪಿಂಗ್ ಮಾಲ್, ಹೋಟೆಲ್, ರೆಸ್ಟೋರೆಂಟ್ ಸೇರಿ ಜನದಟ್ಟಣೆ ಪ್ರದೇಶದಲ್ಲಿ ಮಾಸ್ಕ್ ಧರಿಸಿದವರಿಗೆ ಮಾತ್ರ ಅವಕಾಶ ನೀಡಲು ಪಾಲಿಕೆ ಸೂಚನೆ ನೀಡಿದೆ. ಪರಿಸ್ಥಿತಿ ಬಿಗಡಾಯಿಸಿದರೆ ಮಾಸ್ಕ್ ಧರಿಸದವರಿಗೆ ದಂಡ ವಿಧಿಸುವ ಪದ್ಧತಿ ಮತ್ತೆ ಜಾರಿಗೆ ಬರಲಿದೆ' ಎಂದು ಹೇಳಿದರು.

'ನಗರದಲ್ಲಿ ಮಂಕಿ ಪಾಕ್ಸ್ (ಮಂಗನ ಸಿಡುಬು) ಪ್ರಕರಣಗಳು ಪತ್ತೆಯಾಗಿಲ್ಲ. ಆದರೂ, ರೋಗ ಲಕ್ಷಣಗಳ ಬಗ್ಗೆ ಮಾಹಿತಿ ಪಡೆದು ವಿಶೇಷ ನಿಗಾ ವಹಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು ಮತ್ತು ಸಿಬ್ಬಂದಿಗೂ ಮಾಹಿತಿ ನೀಡಲಾಗಿದೆ. ರೋಗ ಲಕ್ಷಣ ಕಂಡರೆ ಕೂಡಲೇ ಹೆಚ್ಚಿನ ಚಿಕಿತ್ಸೆ ಕೊಡಿಸಲಾಗುತ್ತದೆ' ಎಂದು ವಿವರಿಸಿದರು.

ಕೋವಿಡ್: 358 ಮಂದಿಗೆ ಸೋಂಕು ದೃಢ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿವೆ. ಬುಧವಾರ ಒಂದೇ ದಿನ 358 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ.

ಮಂಗಳವಾರ 339 ಮಂದಿಗೆ ಸೋಂಕು ದೃಢಪಟ್ಟಿತ್ತು. ಪರೀಕ್ಷೆ ನಡೆಸುವುದನ್ನು ಹೆಚ್ಚಳ ಮಾಡಲಾಗಿದ್ದು, ಪ್ರಕರಣಗಳು ಏರಿಕೆಕಂಡಿವೆ.

ರಾಜ್ಯದ ಏಳು ಜಿಲ್ಲೆಗಳಲ್ಲಿ ಹೊಸದಾಗಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಬೆಂಗಳೂರು ಗ್ರಾಮಾಂತರ 3, ದಕ್ಷಿಣ ಕನ್ನಡ 1, ಧಾರವಾಡ 4, ಹಾವೇರಿ 2, ಮೈಸೂರು 7, ಉಡುಪಿ 1 ಪ್ರಕರಣಗಳು ಪತ್ತೆಯಾಗಿವೆ.

ರಾಜ್ಯದಲ್ಲಿ ಒಟ್ಟು 376 ಪ್ರಕರಣಗಳು ಕಂಡುಬಂದಿವೆ. 24 ಗಂಟೆಯ ಅವಧಿಯಲ್ಲಿ ಕೋವಿಡ್ ಮರಣ ಪ್ರಕರಣ ವರದಿಯಾಗಿಲ್ಲ.

ರಾಜ್ಯದಲ್ಲಿ ಬುಧವಾರ ಆಸ್ಪತ್ರೆಯಿಂದ 231 ಮಂದಿ ಗುಣಮುಖರಾಗಿ ಬಿಡುಗಡೆಗೊಂಡಿದ್ದಾರೆ. ಒಂದೇ ದಿನ 23,246 ಪರೀಕ್ಷೆಗಳನ್ನು ನಡೆಸಲಾಗಿದೆ. ರಾಜ್ಯದಲ್ಲಿ 2,623 ಸಕ್ರಿಯ ಪ್ರಕರಣಗಳಿದ್ದರೆ, ಬೆಂಗಳೂರು ನಗರದಲ್ಲೇ 2,526 ಸಕ್ರಿಯ ಪ್ರಕರಣಗಳಿವೆ. ಸೋಂಕಿನ ದೃಢ ಪ್ರಮಾಣವು ಶೇ 1.61ರಷ್ಟಿದೆ.

ಗ್ರಂಥಾಲಯ ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ

ಬೆಂಗಳೂರು: ನಗರದ ಎಸ್.ಜೆ ಪಾಲಿಟೆಕ್ನಿಕ್ ಆವರಣದಲ್ಲಿರುವ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ಮೂರು ವರ್ಷದ ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ಡಿಪ್ಲೊಮಾ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಎಸ್ಎಸ್ಎಲ್‌ಸಿ ಪಾಸಾದವರು ಈ ಕೋರ್ಸ್ ಸೇರಬಹುದು. ಎಲ್ಲ ವರ್ಗದ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೌಲಭ್ಯ ಇದೆ. ಕೋರ್ಸ್ ಶುಲ್ಕ ವಾರ್ಷಿಕ ₹1500. ಪ್ರತಿಭಾವಂತ ಹಾಗೂ ಬಡ ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಶಿಪ್ ನೀಡಲಾಗುತ್ತದೆ. ಈ ಕೋರ್ಸ್ ಮಾಡಿಕೊಂಡವರು ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿ ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9964420060, 9886394884, 9538203769

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ (ಎಡದಿಂದ) ದೀಪಾ ಹಿರೇಗುತ್ತಿ, ವಿಶ್ವೇಶ್ವರ ಭಟ್, ಗಣೇಶ ಕಾಸರಗೋಡು, ಜೋಗಿ, ನಟ ರಮೇಶ್ ಅರವಿಂದ್, ವೀರಕಪುತ್ರ ಶ್ರೀನಿವಾಸ, ನಟ ಸುದೀಪ್, ಕುಂ.ವೀರಭದ್ರಪ್ಪ, ಅನಂತ ಹುದೆಂಗಜೆ ಮತ್ತು ರವಿಕೃಷ್ಣಾ ರೆಡ್ಡಿ ಇದ್ದರು — ಪ್ರಜಾವಾಣಿ ಚಿತ್ರ

ಪುಸ್ತಕ ಮಾರಾಟ: ಕಾರ್ಪೊರೇಟ್ ಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅದ್ದೂರಿ ವಿಡಿಯೋ ಟ್ರೈಲರ್, ಅದರಲ್ಲಿ ಕೃತಿ, ಲೇಖಕರ ಪರಿಚಯ, ಬಳಿಕ ಆಯಾ ಪುಸ್ತಕದ ಬಿಡುಗಡೆ... ಕನ್ನಡ ಪುಸ್ತಕ ಕ್ಷೇತ್ರದಲ್ಲಿ ಹೀಗೊಂದು ಭಿನ್ನ ಮಾದರಿಯ ಬಿಡುಗಡೆ ನಗರದ ಲಾ ಮಾರ್ವೆಲ್ಲಾ ಹೋಟೆಲ್‌ನಲ್ಲಿ ಬುಧವಾರ ನಡೆಯಿತು.

ಕನ್ನಡ ಪುಸ್ತಕಲೋಕಕ್ಕೆ ಕಾರ್ಪೊರೇಟ್ ಸ್ಪರ್ಶ ನೀಡಲು 'ವೀರಲೋಕ ಬುಕ್ಸ್' ಮುಂದಾಗಿದೆ.

ಉದ್ಯಮ ಹೇಗೆ?: ಈ ಉದ್ಯಮ ಮಾದರಿಯ ವಿವರ ನೀಡಿದ ವೀರ ಲೋಕದ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ್, 'ಕನ್ನಡ ಪುಸ್ತಕ ಎಲ್ಲಿ ಬೇಕಾದರೂ ಸಿಗುವಂತಾಗಲು ಮೊದಲ ಹಂತದಲ್ಲಿ 1 ಸಾವಿರ ಪುಸ್ತಕಗಳ ಸ್ಟ್ಯಾಂಡ್‌ಗಳನ್ನು ಬೆಂಗಳೂರಿನ ಮಾಲ್, ಅಂಗಡಿ ಮಳಿಗೆಗಳಲ್ಲಿ ಇರಿಸಲಾಗುವುದು. ಸ್ಥಳದಲ್ಲೇ ಖರೀದಿಗೆ ಅವಕಾಶ ಇದೆ' ಎಂದರು.

'ಕನ್ನಡ ಪುಸ್ತಕಗಳನ್ನು ಪರಿಚಯಿಸಿ ಮಾರಾಟ ಮಾಡಲು ಕಾಲ್ ಸೆಂಟರ್ ಸ್ಥಾಪಿಸಲಾಗಿದೆ. ನಮ್ಮ ಬಳಿ 11 ಲಕ್ಷ ಓದುಗರ ಮಾಹಿತಿ ಇದೆ. ಅವರನ್ನು ಸಂಪರ್ಕಿಸಿ ಪುಸ್ತಕ ಪರಿಚಯ, ಮಾರಾಟ ಮಾಡುತ್ತೇವೆ' ಎಂದರು.

'25 ಕಡೆಗಳಲ್ಲಿ ಸ್ವಿಗ್ಗಿ, ಝೊಮ್ಯಾಟೋ ಮಾದರಿಯಲ್ಲಿ ನಮ್ಮ ಪ್ರತಿನಿಧಿಗಳು ಪುಸ್ತಕಗಳನ್ನು ಮನೆ ಬಾಗಿಲಿಗೆ ತಲುಪಿಸಲಿದ್ದಾರೆ' ಎಂದರು.

ಈ ಪರಿಕಲ್ಪನೆಯ ಬ್ರ್ಯಾಂಡ್ ರಾಯಭಾರಿ ನಟ ರಮೇಶ್ ಅರವಿಂದ್ ಮಾತನಾಡಿ, 'ಬಾಲ್ಯದಲ್ಲಿ ನಟನೆಗಾಗಿ ತಲೆಬೋಳಿಸಿದ್ದರು. ಸ್ನೇಹಿತರ ಕಾಟ ತಪ್ಪಿಸಿಕೊಳ್ಳಲು ಗ್ರಂಥಾಲಯದಲ್ಲಿ ಅಡಗಿರುತ್ತಿದ್ದೆ. ಆಗ ಜಗತ್ತಿನ ಎಲ್ಲ ಕೃತಿಗಳಿಗೆ ತೆರೆದುಕೊಂಡೆ. ಹೀಗಾಗಿ ಈಗ ಬರಹಗಾರರ ನಡುವೆ ಇದ್ದೇನೆ' ಎಂದರು. ನಟ ಕಿಚ್ಚ ಸುದೀಪ್ ಶುಭ ಹಾರೈಸಿದರು. ಕಾರ್ಯಕ್ರಮಕ್ಕೂ ಮುನ್ನ ರವೀಂದ್ರ ಸೊರಗಾವಿ, ಸುಪ್ರಿಯಾ ಆಚಾರ್ಯ, ಸವಿತಾ ಗಣೇಶ್ ತಂಡದಿಂದ ಗಾಯನ ನಡೆಯಿತು.

ಬಿಡುಗಡೆಯಾದ ಕೃತಿಗಳು

ಕೈಹಿಡಿದು ನೀ ನಡೆಸು ತಂದೆ(ವಿಶ್ವೇಶ್ವರ ಭಟ್), ಅವರು ಇವರು ದೇವರು(ಜೋಗಿ), ಲಾಸ್ಟ್ ಡೇಸ್ ಆಫ್ ಲೆಜೆಂಡ್ಸ್(ಗಣೇಶ್ ಕಾಸರಗೋಡು), ವಿಶ್ವ ಸುಂದರಿ(ಕುಂ. ವೀರಭದ್ರಪ್ಪ), ಸೋಲೆಂಬ ಗೆಲುವು(ದೀಪಾ ಹಿರೇಗುತ್ತಿ), ಮನಿ ಮನಿ ಎಕಾನಮಿ(ರಂಗಸ್ವಾಮಿ ಮೂಕನಹಳ್ಳಿ), ಆರ್ಟ್ ಆಫ್ ಸಕ್ಸಸ್(ರಮೇಶ್ ಅರವಿಂದ್), ನಿಮಗೆಷ್ಟು ಹಣ ಬೇಕು?(ಅನಂತ ಹುದೆಂಗಜೆ), ಒಳ್ಳೆಯ ಬದುಕಿನ ಸೂತ್ರಗಳು(ರವಿಕೃಷ್ಣಾ ರೆಡ್ಡಿ) ಕೃತಿಗಳು ಬಿಡುಗಡೆಯಾದವು.

ಬ್ರಾಹ್ಮಣ ಮಹಾಸಭಾ: ಶುಭಮಂಗಳ ನೇಮಕ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ರಾಜ್ಯ ಸಂಚಾಲಕಿಯಾಗಿ ಡಾ.ಶುಭಮಂಗಳ ಸುನಿಲ್ ಅವರನ್ನು ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರು ನೇಮಕ ಮಾಡಿದ್ದಾರೆ.

ಶುಭಮಂಗಳ ಅವರನ್ನು ಬಸವನಗುಡಿ ಬ್ರಾಹ್ಮಣ ಮಹಾಸಭಾದ ಪ್ರಧಾನ ಕಾರ್ಯದರ್ಶಿ ರಥಯಾತ್ರೆ ಸುರೇಶ್ ಅಭಿನಂದಿಸಿದ್ದಾರೆ. ನೇಮಕಾತಿ ಪತ್ರ ವಿತರಣಾ ಸಮಾರಂಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯಕಾರಿಣಿ ಸದಸ್ಯ ಅನಂತ್ ರಾಮ್, ಸುನಿಲ್ ಲಕ್ಯ ಹಾಜರಿದ್ದರು.

SAD DEMISE

Smt. SUSHEELA. D
W/O Late K. P. Narayana
Retd Deputy Commissioner B.B.M.P
Passed away on 08.06.2022
Final rituals will be held 09.06.2022 at 3pm, Cremation at Kalpalli Crematorium
Deeply Mourned by: Family Members
Ph: 9449175627

ಸಂಕ್ಷಿಪ್ತ ಸುದ್ದಿ

ಸಾರ್ವಜನಿಕ ಉದ್ಯಮಗಳ ಇಲಾಖೆ ರದ್ದು

ಬೆಂಗಳೂರು: ರಾಜ್ಯ ಸರ್ಕಾರದ ಅಧೀನದ ಸಾರ್ವಜನಿಕ ಉದ್ಯಮಗಳ ಇಲಾಖೆಯನ್ನು ರದ್ದುಗೊಳಿಸಿದ್ದು, ಈ ಇಲಾಖೆಯಲ್ಲಿ ನಿರ್ವಹಿಸುತ್ತಿದ್ದ ಎಲ್ಲ ವಿಷಯಗಳನ್ನು ಆರ್ಥಿಕ ಇಲಾಖೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಸಾರ್ವಜನಿಕ ಉದ್ಯಮಗಳ ಇಲಾಖೆಯನ್ನು ರದ್ದುಗೊಳಿಸಲು 2021ರ ಫೆಬ್ರುವರಿ 18ರಂದು ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು. ಅದನ್ನು ಅನುಷ್ಠಾನಕ್ಕೆ ತರುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇತ್ತೀಚೆಗೆ ಕಡತ ಮಂಡಿಸಿತ್ತು. ಅದರಂತೆ ಸಾರ್ವಜನಿಕ ಉದ್ಯಮಗಳ ಇಲಾಖೆಯನ್ನು ಆರ್ಥಿಕ ಇಲಾಖೆಯೊಳಗೆ ವಿಲೀನಗೊಳಿಸಿ ಮೇ 25ರಂದು ಆದೇಶ ಹೊರಡಿಸಲಾಗಿದೆ.

ಆಸ್ತಿ ವಿವಾದ ಒಬ್ಬನ ಕೊಲೆ

ಬೆಂಗಳೂರು: ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಮದ್ಯದ ಅಮಲಿನಲ್ಲಿ ಇಬ್ಬರು ಸಹೋದರರ ನಡುವಿನ ಜಗಳ ಒಬ್ಬನ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ಗೋವಿಂದಪುರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದೆ.

ಕೆ.ಜಿ. ಹಳ್ಳಿ ನಿವಾಸಿ ಕಪಿಲನ್ (50) ಕೊಲೆಯಾದವರು. ಆರೋಪಿ ಅಶೋಕನ್ (55) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಗೋವಿಂದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ವಾರ್ತೆ

ದ್ವಾರಕಾ ಹೋಟೆಲ್ ಮಾಲೀಕ ಶ್ರೀಧರ್ ಹೊಳ್ಳ

ಶ್ರೀಧರ್ ಹೊಳ್ಳ

ಬೆಂಗಳೂರು: ಎನ್.ಆರ್.ಕಾಲೊನಿಯ ದ್ವಾರಕಾ ಹೋಟೆಲ್ ಮಾಲೀಕ ಶ್ರೀಧರ್ ಹೊಳ್ಳ (88) ವಯೋಸಹಜ ಕಾಯಿಲೆಯಿಂದ ಬುಧವಾರ ನಿಧನರಾದರು. ಇವರಿಗೆ ಪತ್ನಿ ಸುಶೀಲಾ ಮತ್ತು ಐವರು ಹೆಣ್ಣುಮಕ್ಕಳಿದ್ದಾರೆ.

ಉಡುಪಿ ಮೂಲದವರಾದ ಶ್ರೀಧರ್ ಹೊಳ್ಳ 1972ರಲ್ಲಿ ಬಸವನಗುಡಿ ಟೆಂಪಲ್ ರಸ್ತೆಯಲ್ಲಿ ದ್ವಾರಕಾವನ್ನು ಒಂದು ಸಣ್ಣ ಉಪಾಹಾರ ಗೃಹವನ್ನಾಗಿ ಪ್ರಾರಂಭಿಸಿದ್ದರು. 2005ರಲ್ಲಿ ದ್ವಾರಕಾವನ್ನು ಎನ್.ಆರ್. ಕಾಲೊನಿಗೆ ವರ್ಗಾಯಿಸಲಾಗಿತ್ತು. ಇಲ್ಲಿ ಸಿಗುವ ಖಾಲಿ ದೋಸೆ, ಕ್ಯಾರೆಟ್ ಹಲ್ವಾ ಮತ್ತು ಪುರಿ ಸವಿಯಲು ಸಾಕಷ್ಟು ಗ್ರಾಹಕರಿದ್ದಾರೆ. ಹೋಟೆಲ್ ಇದೇ ವರ್ಷ 50 ವಸಂತಗಳನ್ನು ಪೂರೈಸಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/12/2021–22 ದಿನಾಂಕ: 31–05–2022

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30–01–2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಭೂ ಮಾಲೀಕರು/ಜಿ.ಪಿ.ಎ. ದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗುಂ
1	ಶ್ರೀಮತಿ ಕೊನಿದಿನಿ ಪ್ರಿಯಾಂಕ ಕೋಂ ಬಚಿನ ರಾಜೇಶ್	ಹೊಸಕೋಟೆ	ಅನು ಗೊಂಡನಹಳ್ಳಿ	ಅಜ್ಜ ಗೊಂಡನಹಳ್ಳಿ	53/2	00-21¾

ಷರಾ:– ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/824/ಅಡ್ವರ್ಟೋರ್/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆರೋಗ್ಯಾಧಿಕಾರಿರವರ ಕಚೇರಿ, (ಕ್ಲಿನಿಕಲ್) ವಿಂಗ್, ಬೃ.ಬೆಂ.ಮ.ಪಾ ಕೇಂದ್ರ ಕಚೇರಿ, 2ನೇ ಮಹಡಿ, ಅನೆಕ್ಸ್–2 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು – 560 002.
ಸಂಖ್ಯೆ: ಹೆಚ್‌ಓ.ಪಶ್ಚಿಮ(ಕ್ಲಿನಿಕಲ್)/ಪಿಆರ್/188/2022–23 ದಿನಾಂಕ: 06.06.2022

ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ಯಾಲೇಸ್ ಗುಟ್ಟಹಳ್ಳಿ ವಿವಿಧ ಸೌಲಭ್ಯ ಆಸ್ಪತ್ರೆಯಲ್ಲಿ ವಿಶೇಷ ತಜ್ಞರ ಸೇವೆಯನ್ನು ಪ್ರಾರಂಭಿಸಲು ವಿಶೇಷ ತಜ್ಞರು/ವೈದ್ಯಕೀಯ ಅಧಿಕಾರಿಗಳು/ಪ್ಯಾರಾಮೆಡಿಕಲ್ ಸಿಬ್ಬಂದಿಗಳಿಂದ 6 ತಿಂಗಳ ಅವಧಿಗೆ, ಗುತ್ತಿಗೆ ಆಧಾರದಡಿಯಲ್ಲಿ ವಾಕ್–ಇನ್–ಪ್ರಕ್ರಿಯೆ ಏರ್ಪಡಿಸಲಾಗಿದೆ.

ಸಂಯೋಜಿತ ಪಾವತಿಯೊಂದಿಗೆ ಹುದ್ದೆಗಳ ವಿವರ

SL. No.	Name of the post	Educational Qualification	Number of Post	Consolidated pay
1	MBBS Doctors	MBBS degree recognized by Medical council of India	4	Rs. 60,000/- Per Month
2	Dentist	MDS recognized by Dental Council of India	1	Rs. 60,000/- Per Month
3	Staff Nurse	BSc/GNM recognized by Karnataka Nursing Council	10	Rs. 15,750/- Per Month
4	Lab Technician	DMLT recognized by Para Medical Board	1	Rs. 15,000/- Per Month
5	Pharmacist	D Pharma/ B Pharma recognized by Karnataka Pharmacy Council	1	Rs. 15,000/- Per Month

ಪ್ರತಿ ಗಂಟೆಗೆ ಪಾವತಿಯೊಡನೆ ಹುದ್ದೆಗಳ ವಿವರ

1	General Physician	Master degree/DNB in General medicine recognized by Medical council of India	Panel	Rs. 500/- Per Hour, for 3 hours Between 9am to 4pm on Working days
2	General Surgeon	Master degree/DNB in General surgery recognized by Medical council of India	Panel	Rs. 500/- Per Hour, Between 9am to 4pm on Working days
3	Opthalmologist	Master degree/Diploma/DNB in Opthalmology recognized by Medical council of India	Panel	Rs. 500/- Per Hour, for 3 hours Between 9am to 4pm on Working days
4	Psychiatrist	Master degree/Diploma/DNB in Psychiatry recognized by Medical council of India	Panel	Rs. 500/- Per Hour, for 3 hours Between 9am to 4pm on Working days
5	Dermatologist	Master degree/Diploma/DNB in Dermatology recognized by Medical council of India	Panel	Rs. 500/- Per Hour, for 3 hours Between 9am to 4pm on Working days
6	Orthopedician	Master degree/Diploma/DNB in Orthopedics recognized by Medical council of India	Panel	Rs. 500/- Per Hour, for 3 hours Between 9am to 4pm on Working days
7	ENT Surgeon	Master degree/Diploma/DNB in ENT recognized by Medical council of India	Panel	Rs. 500/- Per Hour, for 3 hours Between 9am to 4pm on Working days

Date of Walk-In-Process : 16.06.2022
Time : 11:00 am to 3:00 pm
Place : Dasappa Maternity Home Compound 1st Floor, Dasappa Meeting Hall, S.J.P Road, Near Town Hall, Bengaluru - 560 002.

60 ವರ್ಷಕ್ಕೂ ಮೀರಿರದ ಅಭ್ಯರ್ಥಿಗಳು ಸಂಬಂಧಿತ ಮೂಲ ಮತ್ತು ಪ್ರತಿ ದಾಖಲೆಗಳೊಂದಿಗೆ ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ವಾಕ್–ಇನ್–ಪ್ರಕ್ರಿಯೆಗೆ ಹಾಜರಾಗಲು ಕೋರಲಾಗಿದೆ. ಬೃ.ಬೆಂ.ಮ.ಪಾಲಿಕೆ ಮುಖ್ಯ ಆಯುಕ್ತರು ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿತಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದ್ದಾರೆ. ಎಲ್ಲಾ ಹುದ್ದೆಗಳು ತಾತ್ಕಾಲಿಕವಾಗಿದೆ ಮತ್ತು 6 ತಿಂಗಳಿಗೆ ಮಾತ್ರ ಸೀಮಿತಗೊಂಡಿರುತ್ತದೆ.

ಇತರೆ ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 080–22975656 ಹೆಚ್‌ಓ–ಪಶ್ಚಿಮ (ಕ್ಲಿನಿಕಲ್) ಮತ್ತು 23323384 (ಶ್ರೀರಾಮಪುರ ಹೆರಿಗೆ ಆಸ್ಪತ್ರೆ)ಯನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ
ಕ್ಷಯ ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು–560038.
ದೂರವಾಣಿ: 080–25202264 ಇ–ಮೇಲ್: dhobangaloreurban@gmail.com
ಸಂಖ್ಯೆ: ಡಿಹೆಚ್‌ಓ/ಎಪಿಸಿ/ಟೆಂಡರ್/02/2021–22 ದಿನಾಂಕ: 08–06–2022

ಟೆಂಡರ್ ಪ್ರಕಟಣೆ

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಪ್ರಾ. ಆ. ಕೇಂದ್ರ / ಸ. ಆ. ಕೇಂದ್ರಗಳಿಗೆ ಹೊರಗುತ್ತಿಗೆ ಮೇರೆಗೆ ಶುಶ್ರೂಷಕರು, ವಾಹನ ಚಾಲಕ, ಗ್ರೂಪ್ 'ಡಿ' ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಅಂದಾಜು ಟೆಂಡರ್ ಮೊತ್ತ: ರೂ. 100.00 ಲಕ್ಷಗಳು.
1) ಟೆಂಡರ್ ಫಾರಂಗಳನ್ನು ಸಲ್ಲಿಸಲು ಪ್ರಾರಂಭಿಸುವ ದಿನಾಂಕ: 09–06–2022. 2) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08–07–2022ರಂದು ಮಧ್ಯಾಹ್ನ 3.00 ಗಂಟೆವರೆಗೆ. 3) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: 11–07–2022ರಂದು ಮಧ್ಯಾಹ್ನ 2.00 ಗಂಟೆಗೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು – 560038. 4) ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: 22–07–2022ರಂದು 2.00 ಗಂಟೆಗೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು – 560038. 5) ಟೆಂಡರ್‌ಗೆ ಇಟ್ಟ ಇ.ಎಂ.ಡಿ ಮೊತ್ತ: ರೂ. 3,00,000/–. 6) ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ: ಸಹಾಯಕ ಆಡಳಿತಾಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು – 560038, ದೂರವಾಣಿ ಸಂಖ್ಯೆ: 9845893474.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು. ಕ. ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
ವಾಸಾಸಂಇ/ವಾ.ಪ್ರ/814/ಅಡ್ವರ್ಟೋರ್/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

Dr. B.R. Ambedkar School of Economics University Bengaluru
ಡಾ|| ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಬೆಂಗಳೂರು

ಅವಧಿ ವಿಸ್ತರಣೆ ಪ್ರಕಟಣೆ

ದಿನಾಂಕ: 18.04.2022ರ ಪ್ರವೇಶಾತಿ ಪ್ರಕಟಣೆ ಆಧಾರದಲ್ಲಿ ಐದು ವರ್ಷಗಳ ಇಂಟಿಗ್ರೇಟೆಡ್ ಎಂ.ಎಸ್ಸಿ ಎಕನಾಮಿಕ್ಸ್, ಎರಡು ವರ್ಷಗಳ ಎಂ.ಎಸ್ಸಿ ಎಕನಾಮಿಕ್ಸ್ ಮತ್ತು ಎರಡು ವರ್ಷಗಳ ಎಂ.ಎಸ್ಸಿ ಫೈನಾನ್ಶಿಯಲ್ ಎಕನಾಮಿಕ್ಸ್ ಕೋರ್ಸುಗಳಿಗಾಗಿ ಡಾ|| ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ಬೆಂಗಳೂರು ಇಲ್ಲಿ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸುತ್ತಿರುವ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ತಮ್ಮ ಅರ್ಜಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.base.ac.in ನಲ್ಲಿ CUET-NTA ಪರೀಕ್ಷೆಗೆ ಅರ್ಜಿ ಸಲ್ಲಿಸಿದ ನಂತರ ಭರ್ತಿ ಮಾಡಬೇಕಾಗುತ್ತದೆ. CUET-NTA, UG and PG ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಮತ್ತು ಡಾ|| ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಬೆಂಗಳೂರು ಅನ್ನು ತಮ್ಮ ಆದ್ಯತೆಯಾಗಿಸಿಕೊಂಡಿರುವ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ನೊಂದಾಯಿಸಿ ಕೊಳ್ಳಲು ಕೊನೆಯ ಅವಧಿಯನ್ನು ದಿನಾಂಕ: 06.06.2022 ರಿಂದ 10.07.2022 ರವರೆಗೆ ವಿಸ್ತರಿಸಲಾಗಿದೆ.

ಡಾ. ಎನ್.ಆರ್. ಭಾನುಮೂರ್ತಿ, ಕುಲಪತಿಗಳು — ಶೋಭಾ ಬಿ., ಕುಲಸಚಿವರು
ಸಂಪರ್ಕಿಸಿ: ಜ್ಞಾನ ಭಾರತಿ ಮುಖ್ಯ ರಸ್ತೆ, ನಾಗರಭಾವಿ ಅಂಚೆ, ಬೆಂಗಳೂರು, ಕರ್ನಾಟಕ – 560072 ಸಹಾಯವಾಣಿ: 080–29557767
ಮೊಬೈಲ್ ನಂ.: 7349333323, ಇ–ಮೇಲ್: info@base.ac.in
DIPR/CP/786/Avanti/2022-23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಸಾಮಿತ್ವದಲ್ಲಿ)
ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿ(ನಿ), ಮು.ಏ.ನೀ ವಿಭಾಗ ನಂ–1, ಮಟ್ಟಿಹಾಳ ತಾ|| ಕೋಲ್ಹಾರ ಜಿ|| ವಿಜಯಪುರ
ಸಂ:ಕೃಭಾಜನಿನಿ/ಮುಏನೀ/ವಿ–1ಮ/ಯೊ.ಶಾ/ಟೆಂಡರ್/2022–23/207 ದಿನಾಂಕ:06.06.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ಏಕ ಮಾತ್ರ ಲಕೋಟೆ ಪದ್ಧತಿಯಲ್ಲಿ ಒಟ್ಟು 13 ಕಾಮಗಾರಿಗಳ ಇಂಡೆಂಟ್ ಸಂಖ್ಯೆ: **22606.22609.22614.22616.22636. 22607.22613. 22610.22615.22612.22619.22617.22660** ಟೆಂಡರಗಳನ್ನು ಕರೆಯಲಾಗಿದ್ದು ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 2 ಸಂಖ್ಯೆ ಕಾಮಗಾರಿಗಳು (ಇಂಡೆಂಟ್ ಸಂಖ್ಯೆ:22614.22615.) ಪರಿಶಿಷ್ಠ ಪಂಗಡದವರಿಗೆ 1 ಸಂಖ್ಯೆ ಕಾಮಗಾರಿ (ಇಂಡೆಂಟ್ ಸಂಖ್ಯೆ:–22619) ಮೀಸಲಿಡಲಾಗಿದೆ. ಟೆಂಡರಿಗಿಟ್ಟ ಕನಿಷ್ಠ ಹಾಗೂ ಗರಿಷ್ಠ ಮೊತ್ತ ಅನುಕ್ರಮವಾಗಿ ರೂ. 4.14 ಲಕ್ಷಗಳಿಂದ ರೂ.8.44 ಲಕ್ಷಗಳು ಇರುತ್ತವೆ. ನಿಗದಿಪಡಿಸಿದ ಇ.ಎಮ್.ಡಿ ಮೊತ್ತ/ಗುತ್ತಿಗೆದಾರರ ದರ್ಜೆ/ಟೆಂಡರ್ ನಿಯಮ/ಟೆಂಡರ್ ಪ್ರೊಸೆಸಿಂಗ ಶುಲ್ಕ, ಇತ್ಯಾದಿ ವಿವರಗಳನ್ನು https://eproc.karnataka.gov.in/ ಅಥವಾ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ಸಮಯದಲ್ಲಿ ದಿನಾಂಕ: 16.06.2022 ಸಮಯ ಸಾಯಂಕಾಲ 05.00 ಗಂಟೆವರೆಗೆ ಸಂಪರ್ಕಿಸಬಹುದು. ದೂರವಾಣಿ 08426–286126. ಸದರಿ ಟೆಂಡರುದಾರರು ಏಕ ಮಾತ್ರ ಲಕೋಟೆ ಅಪಲೋಡ್ ಮಾಡುವುದು.

ಟೆಂಡರ್ ಅಧಿಸೂಚನೆಯ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.
1.1 ಇ–ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆ ದೊರೆಯುವ ದಿನಾಂಕ ಹಾಗೂ ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು **ದಿನಾಂಕ: 09.06.2022 ರಿಂದ 16.06.2022** ರವರೆಗೆ ಸಮಯ **ಸಾಯಂಕಾಲ 5.00** ಘಂಟೆಯವರೆಗೆ ಸಲ್ಲಿಸುವುದು.
1.2 ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು ಸಲ್ಲಿಸುವುದು ದಿನಾಂಕ: **09.06.2022 ರಿಂದ ದಿನಾಂಕ: 16.06.2022** ರವರೆಗೆ ಸಮಯ ಸಾಯಂಕಾಲ **5.00** ಗಂಟೆಯವರೆಗೆ
1.3 ಏಕ ಮಾತ್ರ ಲಕೋಟೆ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ನ್ನು) ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ದಿನಾಂಕ **18.06.2022** ಸಮಯ **ಬೆಳಗ್ಗೆ 11.00 ಘಂಟೆಗೆ** ತೆರೆಯಲಾಗುವುದು.

ವಿಶೇಷ ಸೂಚನೆ: 1) ಮೀಸಲಾತಿ ಕಾಮಗಾರಿಗಳಿಗೆ ಭಾಗವಹಿಸುವ ಗುತ್ತಿಗೆದಾರರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅಪ್ಲೋಡ್ ಮಾಡತಕ್ಕದ್ದು. 2) ಮೀಸಲಾತಿ ಕಾಮಗಾರಿಗಳಿಗೆ ಗುತ್ತಿಗೆ ಸಲ್ಲಿಸುವ ಪರಿಶಿಷ್ಠ ಪಂಗಡ ಗುತ್ತಿಗೆದಾರರು ಕನಿಷ್ಠ 10 ವರ್ಷ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು ಹಾಗೂ ಸಕ್ಷಮ ಪ್ರಾಧಿಕಾರದಿಂದ ಪಡೆದ ನಿವಾಸಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು. 3) ಗುತ್ತಿಗೆದಾರರು ಫರ್ಮ ಗುತ್ತಿಗೆದಾರರಾಗಿದ್ದರೆ ಎಲ್ಲಾ ಪಾರ್ಟನರ್ ಸದಸ್ಯರು ಪರಿಶಿಷ್ಠ ಪಂಗಡದವರಾಗಿರಬೇಕು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ–1, ಮಟ್ಟಿಹಾಳ
ವಾಸಾಸಂಇ/ವಿಜಯಪುರ/122/ಎಂಸಿಎ/2022–23

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059. ದೂರವಾಣಿ: 080–28484515 / 4518
ಸಂಖ್ಯೆ: ಡಿಪಿಎಸ್10ಪಿಯುಆರ್(ಬಿ)2022–23/ಪಿಟಿಜಿ&ಬಿಡಿಜಿ ದಿನಾಂಕ: 08.06.2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮುದ್ರಣ ಮತ್ತು ಬೈಂಡಿಂಗ್ ಸಾಮಗ್ರಿಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಅಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ: **ರೂ. 10.00 ಲಕ್ಷಗಳು** ಹಾಗೂ ಇ.ಎಂ.ಡಿ.ಯು **ರೂ. 0.50 ಲಕ್ಷ**ಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **23.06.2022, 17:30 ಗಂಟೆಗೆ.** ಮಾಹಿತಿಯನ್ನು https://eproc. karnataka.gov.in ರಲ್ಲಿ ಪಡೆಯಬಹುದಾಗಿದೆ.
ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು
ವಾಸಾಸಂಇ/ವಾ.ಪ್ರ/819/ಎಂಎಎ/2022–23

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ತ್ಯಾಗರಾಜನಗರ, ಚಳ್ಳಕೆರೆ–577522.
Ph: 08195-200042, e-mail: cdpoclk@gmail.com
ಸಂಖ್ಯೆ: ಶಿಅಯೋಚ/ಟೆಂಡರ್ ಪ್ರಕಟಣೆ:2022–23 ದಿನಾಂಕ: 04.06.2022

ಟೆಂಡರ್/ದರಪಟ್ಟಿ/ಹರಾಜು ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಚಳ್ಳಕೆರೆ ಕಛೇರಿಯ ಈ ಕಂಕಂಡ ಸೇವೆಗಳಿಗೆ ಟೆಂಡರ್/ದರಪಟ್ಟಿ/ಹರಾಜು ಪ್ರಕಟಣೆ ಹೊರಡಿಸಲಾಗಿದೆ.

ಸೇವಾ ವಿವರ	ಅಂದಾಜು ಮೊತ್ತ	ಟೆಂಡರ್ ವಿಧ	ಸಲ್ಲಿಕೆ ಕೊನೆಯ ದಿನಾಂಕ & ಸಮಯ
1) ಕಂಪ್ಯೂಟರ್ ಆಪರೇಟರ್, ಡಿ.ದರ್ಜೆ, ಮೆಸೆಂಜರ್ ಸೇವೆ	9.00 ಲಕ್ಷ	ಇ–ಟೆಂಡರ್	05.07.2022 ಸಂಜೆ 05:30
2) ಖಾಲಿಚೀಲ ವಿಲೆವಾರಿ	0	ಟೆಂಡರ್	05.07.2022 ಸಂಜೆ 05:30
3) ಮಹೇಂದ್ರ ಮಾರ್ಷಲ್ ಜೀಪ್ ದುರಸ್ಥಿ	0	ದರಪಟ್ಟಿ	20.06.2022 ಸಂಜೆ 05:30
4) ಮಹೇಂದ್ರ ಜೀಪ್ ಹರಾಜು ವಿಲೇವಾರಿ	8000 ಸಾವಿರ	ಟೆಂಡರ್ ಕಂ ಹರಾಜು	20.06.2022 ಮಧ್ಯಾಹ್ನ 02:00 ಗಂಟೆಗೆ

ಟೆಂಡರ್/ದರಪಟ್ಟಿ/ಹರಾಜು ಷರತ್ತು ಮತ್ತು ಹೆಚ್ಚಿನ ಮಾಹಿತಿಗೆ ಈ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಚಳ್ಳಕೆರೆ.
RO No. 210: DIPR/CTA/MCA/2022-23

ಕರ್ನಾಟಕ ಸರ್ಕಾರ GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, CANTONMENT BALLARI-583104
Telephones: Director No.8147796529, CAO No.8147796526 & PA No.8147796539
e-mail :directorvimsbelllary@gmail.com
website: www.vimsballari.org.in
No.VIMS/SUP-TEND/01/2022-23, DATED: 07.06.2022

ಟೆಂಡರ್ ಅಧಿಸೂಚನೆ

ವಿಮ್ಸ್, ಬಳ್ಳಾರಿಯ ಜಿ.ಡಿ.ಸಿ & ಆರ್.ಐ ಗೆ ವೈದ್ಯಕೀಯ ಉಪಕರಣಗಳು, ಇಂಸ್ಟ್ರುಮೆಂಟ್ಸ್ & ಆಸ್ಪತ್ರೆಯ ಪೀಠೋಪಕರಣಗಳನ್ನು ಸರಬರಾಜುಮಾಡಲು ಕೆ.ಟಿ.ಪಿ.ಪಿ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ದ್ವಿ–ಟೆಂಡರ್ ಪದ್ಧತಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅನುದಾನದಲ್ಲಿ ಕರ್ನಾಟಕ ಸರ್ಕಾರದ ಇ–ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್:**https://eproc.karnataka.gov.in** ಮೂಲಕ ಅರ್ಹ ಬಿಡ್‌ದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
1).ಟೆಂಡರ್ ಡಾಕುಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ: **09.06.2022**. 2).ಟೆಂಡರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **14.06.2022**. 3).ಟೆಂಡರ್ ಅನ್ನು ಸಲ್ಲಿಸುವ ಕೊನೆಯ ದಿನಾಂಕ: **27.06.2022**. 4).ಟೆಕ್ನೋ–ಕಮರ್ಷಿಯಲ್ ಬಿಡ್ ತೆರೆಯುವ ದಿನಾಂಕ: **28.06.2022**. 5).ಟೆಂಡರಿನ ಅಂದಾಜು ಮೊತ್ತ: **ರೂ.70.71 ಲಕ್ಷಗಳು**
ಮುಂದುವರೆದಂತೆ, ಜೆಮ್ ಪೋರ್ಟಲ್‌ನಲ್ಲಿ **https://gem.gov.in** ಎರಡು ಟೆಂಡರ್‌ಗಳನ್ನು ವೈದ್ಯಕೀಯ ಉಪಕರಣಗಳು, ಆಸ್ಪತ್ರೆಯ ಪೀಠೋಪಕರಣಗಳು & ಫೋಟೋಕಾಪಿಯರ್‌ಗಾಗಿ ಆಹ್ವಾನಿಸಲಾಗಿದ್ದು, ಇಚ್ಚೆವುಳ್ಳ ಬಿಡ್‌ದಾರರು ಭಾಗವಹಿಸಲು ಕೋರಿದೆ ಬಿಡ್ ಸಂ. **GEM/2022/B/2238627 & GEM/2022/B/2238636** ಇರುತ್ತದೆ.

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/115/ಎಂಸಿಎ/2022–23

ಈದ್ಗಾ ಮೈದಾನ: ಬಿಬಿಎಂಪಿ ಮತ್ತು ವಕ್ಫ್ ಮಂಡಳಿ ನಡುವೆ ಜಿದ್ದಾಜಿದ್ದಿ

ಖಾತಾ ತಿದ್ದಿರುವ ಅನುಮಾನ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಈದ್ಗಾ ಆಸ್ತಿ ಮಾಲೀಕತ್ವ ವಿಷಯದಲ್ಲಿ ಬಿಬಿಎಂಪಿ ಮತ್ತು ವಕ್ಫ್ ಮಂಡಳಿ ನಡುವೆ ಜಿದ್ದಾಜಿದ್ದಿ ಏರ್ಪಟ್ಟಿದ್ದು, ಬಿಬಿಎಂಪಿ ಖಾತಾ ರಿಜಿಸ್ಟ್ರಾರ್ ಅನ್ನೇ ತಿದ್ದಿರುವ ಅನುಮಾನವನ್ನು ಸ್ವತಃ ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರೇ ವ್ಯಕ್ತಪಡಿಸಿದ್ದಾರೆ.

‘ಬಿಬಿಎಂಪಿ ಖಾತಾ ರಿಜಿಸ್ಟ್ರಾರ್ ಪ್ರಕಾರ ಆಟದ ಮೈದಾನ ಎಂದೇ ಇದೆ. ಭೂಮಾಪನ ಇಲಾಖೆ ನಡೆಸಿರುವ ನಗರ ಸರ್ವೆ ದಾಖಲೆಗಳಲ್ಲೂ ಬಿಬಿಎಂಪಿ ಆಟದ ಮೈದಾನ ಎಂದೇ ಇದೆ. ಮೈದಾನ ನಮ್ಮ ಸುಪರ್ದಿಯಲ್ಲೇ ಇದೆ. ಆದರೆ, 1964ರಲ್ಲಿ ಸುಪ್ರೀಂ ಕೋರ್ಟ್ ಆದೇಶದ ಅಧಿಕೃತ ಪ್ರತಿ ಇಲ್ಲ. ಹೀಗಾಗಿ ಗೊಂದಲ ಇದೆ’ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

‘ಬಿಬಿಎಂಪಿ ವ್ಯಾಪ್ತಿಯಲ್ಲಿನ ಎಲ್ಲಾ ಆಸ್ತಿಗಳ ಖಾತೆಯನ್ನು ಪಾಲಿಕೆಯೇ ನಿರ್ವಹಿಸುತ್ತದೆ. ಅದನ್ನು ತರಿಸಿ ನೋಡಿದ್ದೇನೆ. 306 ಚದರ ಅಡಿ ಜಾಗದಲ್ಲಿ ನಿರ್ಮಲ ಶೌಚಾಲಯ(-2005ರಲ್ಲಿ ನಿರ್ಮಿಸಲಾಗಿದೆ), ಉಳಿದ 95,929 ಚದರ ಅಡಿ ಆಟದ ಮೈದಾನ ಎಂದಿದೆ. ಅದರ ನಡುವೆ ಬೇರೆ ಶಾಯಿಯಲ್ಲಿ, ಬೇರೆ ಹಸ್ತಾಕ್ಷರದಲ್ಲಿ ಈದ್ಗಾ ಮೈದಾನ ಎಂದು ಸೇರಿಸಲಾಗಿದೆ. ‘ದರ್ಗಾ’ ಎಂದೂ ಬರೆಯಲಾಗಿದ್ದು, ಇದೆಲ್ಲವನ್ನೂ ಸೇರಿಸಿ 2012-13ರಲ್ಲಿ ಖಾತಾ ಪ್ರತಿಯೊಂದನ್ನು ವಿತರಿಸಲಾಗಿದೆ. ಈದ್ಗಾ ಮೈದಾನ ಎಂಬ ಪದವನ್ನು ಏಕೆ ಸೇರ್ಪಡೆ ಮಾಡಲಾಯಿತು ಎಂಬುದಕ್ಕೆ ಆಧಾರವಿಲ್ಲ’ ಎಂದರು.

ಈದ್ಗಾ ಮೈದಾನ

ಈದ್ಗಾ ಮೈದಾನದಲ್ಲಿ ವರ್ಷದಲ್ಲಿ ಎರಡು ದಿನ ಮಾತ್ರ ನಮಾಜ್‌ಗೆ ನ್ಯಾಯಾಲಯ ಅವಕಾಶ ಕಲ್ಪಿಸಿದೆ. ಇಲ್ಲಿ ರಾಷ್ಟ್ರ ಧ್ವಜಾರೋಹಣಕ್ಕೆ ಬಂದಿರುವ ಮನವಿ ಪರಿಶೀಲಿಸಲಾಗುತ್ತದೆ.

ಆರಗ ಜ್ಞಾನೇಂದ್ರ, ಗೃಹ ಸಚಿವ

‘ಈಗ ಜಾಗದ ಮಾಲೀಕತ್ವದ ಬಗ್ಗೆ ಹಕ್ಕು ಮಂಡಿಸುತ್ತಿರುವ ವಕ್ಫ್ ಮಂಡಳಿ ಬಳಿ ದಾಖಲೆಗಳಿದ್ದರೆ ಸಲ್ಲಿಸಲಿ. ಅರ್ಧ ಸತ್ಯದ ಮೇಲೆ ಯಾವುದೇ ನಿರ್ಧಾರ ಕೈಗೊಳ್ಳಲು ಆಗುವುದಿಲ್ಲ. ಸುಪ್ರೀಂ ಕೋರ್ಟ್ ಆದೇಶದ ಅಧಿಕೃತ ಪ್ರತಿ ತರಿಸಿಕೊಂಡು ಕಾನೂನು ಸಲಹೆ ಪಡೆದು ಮುಂದುವರಿಯುತ್ತೇವೆ’ ಎಂದು ಹೇಳಿದರು.

‘ಮೈದಾನದಲ್ಲಿ ವರ್ಷಕ್ಕೆ ಎರಡು ದಿನ ಸಾಮೂಹಿಕ ಪ್ರಾರ್ಥನೆಗೆ ಅವಕಾಶ ಕಲ್ಪಿಸಿ ಬಾಕಿ ದಿನಗಳಂದು ಸಭೆ-ಸಮಾರಂಭ ನಡೆಸಲು ಅನುಮತಿ ನೀಡುವ ಬಗ್ಗೆ ಪಶ್ಚಿಮ ವಲಯದ ಜಂಟಿ ಆಯುಕ್ತರು ನಿರ್ಧಾರ ಕೈಗೊಳ್ಳುತ್ತಾರೆ. ಪೊಲೀಸ್ ಪೊಲೀಸ್ ಮತ್ತು ಗುಪ್ತಚರ ಇಲಾಖೆಯ ಸಲಹೆಯನ್ನೂ ಪಡೆದು ಮುಂದುವರಿಯುತ್ತಾರೆ’ ಎಂದು ತಿಳಿಸಿದರು.

‘ಬಿಬಿಎಂಪಿಯೇ ದಾಖಲೆ ಒದಗಿಸಲಿ’

‘2 ಎಕರೆ 10 ಗುಂಟೆ ವಿಸ್ತೀರ್ಣದ ಈದ್ಗಾ ಮೈದಾನ ವಕ್ಫ್ ಮಂಡಳಿ ಆಸ್ತಿ ಎಂದು ಸುಪ್ರೀಂ ಕೋರ್ಟ್ ನೀಡಿರುವ ಆದೇಶ ನಮ್ಮ ಬಳಿ ಇದೆ’ ಎಂದು ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಎನ್.ಕೆ. ಷಾಫಿ ಸಾ- ಆದಿ ಹೇಳಿದರು.

ಮಹಮ್ಮದ್ ಷಾಫಿ ಸಾ–ಆದಿ

‘1879ರಿಂದಲೂ ‘ಸುನ್ನಿ ಈದ್ಗಾ ಚಾಮರಾಜಪೇಟೆ’ ಎಂಬ ದಾಖಲೆಗಳಿವೆ. ‘ದರ್ಗಾ’ ಹೆಸರಿನಲ್ಲಿ ಖಾತಾ ಕೂಡ ಆಗಿದೆ. ಸರ್ವೆ ಮಾಡಿ ಗಡಿಯನ್ನು ಗುರುತಿಸಲಾಗಿದೆ. ನಮ್ಮ ಬಳಿ ಇರುವ ದಾಖಲೆಗಳನ್ನು ಬಿಬಿಎಂಪಿಗೆ ಕೊಡುವ ಅಗತ್ಯವಿಲ್ಲ. ಪಾಲಿಕೆಗೆ ಸೇರಿದ ಆಸ್ತಿ ಎಂಬುದಕ್ಕೆ ಅವರ ಬಳಿ ದಾಖಲೆ ಇದ್ದರೆ ನಮಗೆ ಸಲ್ಲಿಸಲಿ’ ಎಂದರು.

ಟೆಕ್ ಶೃಂಗಸಭೆ: ಪ್ರಧಾನಿ ಮೋದಿಯಿಂದ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೆಂಬರ್ 16ರಿಂದ ಮೂರು ದಿನ ನಡೆಯಲಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ (ಬಿಟಿಎಸ್) ಪೂರ್ವಭಾವಿಯಾಗಿ ಜಾಗತಿಕ ನಾವಿನ್ಯತಾ ಸಹಭಾಗಿ(ಜಿ-ಐಎ) ರಾಷ್ಟ್ರಗಳ ಪ್ರತಿನಿಧಿಗಳ ಜತೆ ಐಟಿ-ಬಿಟಿ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಬುಧವಾರ ಸಮಾಲೋಚನೆ ನಡೆಸಿದರು.

ಜಿಐಎ ರಾಷ್ಟ್ರಗಳ ಕಾನ್ಸುಲ್ ಜನರಲ್, ಡೆಪ್ಯುಟಿ ಕಾನ್ಸುಲ್ ಜನರಲ್ ಮತ್ತು ಗೌರವ ಕಾನ್ಸುಲ್ ಜನರಲ್‌ಗಳ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ಮಾತನಾಡಿದ ಸಚಿವರು, ‘25ನೇ ವರ್ಷದ ಈ ಶೃಂಗಸಭೆಯನ್ನು ಅರ್ಥಪೂರ್ಣವಾಗಿ ನಡೆಸಲು ಉದ್ದೇಶಿಸಲಾಗಿದೆ. ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಲು ಉದ್ದೇಶಿಸಲಾಗಿದೆ’ ಎಂದರು.

‘ಅರಮನೆ ಮೈದಾನದಲ್ಲಿ ನಡೆಯುವ ಶೃಂಗಸಭೆಯಲ್ಲಿ 50ಕ್ಕೂ ಹೆಚ್ಚು ದೇಶಗಳು ಸಮಾವೇಶದಲ್ಲಿ ಪಾಲ್ಗೊಳ್ಳಲಿವೆ. 500ಕ್ಕೂ ಹೆಚ್ಚು ವಸ್ತು ಪ್ರದರ್ಶನ, 300ಕ್ಕೂ ಹೆಚ್ಚು ಮಂದಿ ಗೋಷ್ಠಿಗಳಲ್ಲಿ ಮಾತನಾಡಲಿದ್ದಾರೆ. 50 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ’ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ವಿವಿಧ ದೇಶಗಳ ರಾಜತಾಂತ್ರಿಕ ಪ್ರತಿನಿಧಿಗಳು ಮಾತನಾಡಿ, ‘ಸೈಬರ್ ಸೆಕ್ಯುರಿಟಿ, ಏರೋಸ್ಪೇಸ್, ರೋಬೋಟಿಕ್ಸ್, ಐಒಟಿ, ಅಗ್ರಿಟೆಕ್, ಫಿನ್ಟೆಕ್, ಮೆಡ್-ಟೆಕ್ ಮುಂತಾದ ಅತ್ಯಾಧುನಿಕ ಕ್ಷೇತ್ರಗಳಲ್ಲಿ ಕರ್ನಾಟಕದ ಜತೆ ಸಹಭಾಗಿತ್ವ ಸ್ಥಾಪನೆ ಒಲವಿದೆ’ ಎಂದು ತಿಳಿಸಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

The National Education Society of Karnataka®
Basavanagudi, Bangalore - 560 004

Admissions are in full swing at

1. The National Higher Primary School, (Kannada Medium / English Medium) Basavanagudi
2. The National High School, Basavanagudi
3. The National Pre-University College, Basavanagudi
4. The National Degree College, Basavanagudi

Special Feature

Every student will be allowed to work in ROBOTICS AND ARTIFICIAL INTELLIGENCE (AI) Lab.

For more details:
Contact the respective Heads of Institutions during week days from 11.00 a.m. to 1.00 p.m.

Prof. S.N. Nagaraja Reddy
Dr. P. Sadananda Maiya
Secretaries

A.H. Rama Rao
President

ಬ್ರಹ್ಮ ರಥೋತ್ಸವ

ಬೆಂಗಳೂರಿನ ಕೋಟೆ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನದ ಬ್ರಹ್ಮ ರಥೋತ್ಸವ ಮಂಗಳವಾರ ವಿಜೃಂಭಣೆಯಿಂದ ನಡೆಯಿತು

–ಪ್ರಜಾವಾಣಿ ಚಿತ್ರ / ರಂಜು ಪಿ.

ರಾಜಕಾಲುವೆ ಅಭಿವೃದ್ಧಿಗೆ ₹1500 ಕೋಟಿ ಬಿಡುಗಡೆ

ಬೆಂಗಳೂರು: ರಾಜಕಾಲುವೆಗಳ ಅಭಿವೃದ್ಧಿಗೆ ಸರ್ಕಾರ ₹1,500 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ಪ್ರಾಥಮಿಕ ಹಂತದ ರಾಜಕಾಲುವೆಗಳ ಅಭಿವೃದ್ಧಿಗೆ ₹1005.12 ಕೋಟಿ ಮತ್ತು ದ್ವಿತೀಯ ಹಂತದ ರಾಜಕಾಲುವೆಗಳ ಅಭಿವೃದ್ಧಿಗೆ ₹481.88 ಕೋಟಿ ಬಿಡುಗಡೆ ಮಾಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

‘ತೃತೀಯ ಹಂತದ ರಾಜಕಾಲುವೆಗಳನ್ನು ಬಿಬಿಎಂಪಿ ಸ್ವಂತ ಅನುದಾನದಲ್ಲಿ ಕಡ್ಡಾಯವಾಗಿ ಅಭಿವೃದ್ಧಿಪಡಿಸಿಕೊಳ್ಳಬೇಕು. ಟೆಂಡರ್ ಪ್ರಕ್ರಿಯೆ ನಡೆಸಿಯೇ ಎಲ್ಲಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು’ ಎಂದು ತಿಳಿಸಿದೆ.

ವಲಯವಾರು ವಿವರ
(₹ಕೋಟಿಗಳಲ್ಲಿ)

ವಲಯ	₹ಕೋಟಿ
ಪೂರ್ವ	183.5
ಪಶ್ಚಿಮ	171
ದಕ್ಷಿಣ	64
ಯಲಹಂಕ	145
ಮಹದೇವಪುರ	220
ಬೊಮ್ಮನಹಳ್ಳಿ	280
ಆರ್.ಆರ್.ನಗರ	246
ದಾಸರಹಳ್ಳಿ	48

ಆರ್‌ಎಸ್‌ಎಸ್ ಚೆಡ್ಡಿ ಹೊರುವುದು ಮಲ ಹೊತ್ತಂತೆ: ಎಚ್‌.ಸಿ. ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಛಲವಾದಿ ನಾರಾಯಣಸ್ವಾಮಿ ಅವರನ್ನು ಹಳೆಯ ಚೆಡ್ಡಿಗಳನ್ನು ಹೊರುವ ಕೆಲಸಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಆರ್‌ಎಸ್‌ಎಸ್‌ನವರ ಚೆಡ್ಡಿ ಹೊರುವುದು ಮಲಹೊತ್ತಂತೆ’ ಎಂದು ಕಾಂಗ್ರೆಸ್ ನಾಯಕ ಎಚ್‌.ಸಿ.ಮಹದೇವಪ್ಪ ಲೇವಡಿ ಮಾಡಿದ್ದಾರೆ.

‘ಆರ್‌ಎಸ್‌ಎಸ್ ಮತ್ತು ಬಿಜೆಪಿ ಹಳೆಯ ಚಡ್ಡಿಗಳನ್ನು ಹೊರುವ ಕೆಲಸವನ್ನು ದಲಿತರಿಗೆ ಮತ್ತು ಹಿಂದುಳಿದವರಿಗೆ ಕೊಟ್ಟಿದ್ದಾರೆ. ನಾರಾಯಣಸ್ವಾಮಿಯವರೇ ನಿಮಗೆ ಎಂಎಲ್‌ಸಿ ಸ್ಥಾನ ಕೊಟ್ಟಿರುವುದು ಜನರ ಹಿತ ಕಾಯಲೋ ಆರ್‌ಎಸ್‌ಎಸ್‌ವರ ಹಳೇ ಚಡ್ಡಿ ಹೊರಲೋ ಎಂಬುದನ್ನು ಸ್ಪಷ್ಟಪಡಿಸಲಿ’ ಎಂದಿದ್ದಾರೆ.

ಬೀದರ್‌ನಿಂದ ಬೆಂಗಳೂರಿಗೆ ಶೀಘ್ರವೇ ವಿಶ್ವಕರ್ಮ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ‘ವಿಶ್ವಕರ್ಮ ಸಮಾಜಕ್ಕೆ ಪರಿಶಿಷ್ಟ ಪಂಗಡ ಮೀಸಲಾತಿ ನೀಡುವಂತೆ ಆಗ್ರಹಿಸಿ ಬೀದರ್‌ನಿಂದ ಬೆಂಗಳೂರಿಗೆ ಶೀಘ್ರವೇ ಪಾದಯಾತ್ರೆ ನಡೆಸಲಾಗುವುದು’ ಎಂದು ವಿಶ್ವಕರ್ಮ ಮಹಾಸಭಾ ವಕ್ತಾರ ಮಾರುತಿ ಬಡಿಗೇರ್ ಅವರು ತಿಳಿಸಿದರು.

‘ರಾಜ್ಯದಲ್ಲಿ 45 ಲಕ್ಷ ವಿಶ್ವಕರ್ಮ ಸಮಾಜದವರಿದ್ದು, ಪರಿಶಿಷ್ಟ ಪಂಗಡ ಮೀಸಲಾತಿ ನೀಡುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಮಹಾಸಭಾದ ಕಾರ್ಯದರ್ಶಿ ಬ್ರಹ್ಮಗಣೇಶ ವಕೀಲ ಮಾತನಾಡಿ, ‘ವಿಧಾನ ಪರಿಷತ್ ಸದಸ್ಯ ಕೆ.ಪಿ. ನಂಜುಂಡಿ ಅವರಿಗೆ ಸಚಿವ ಸ್ಥಾನ ನೀಡಬೇಕು. ಸಮಾಜಕ್ಕೆ ನ್ಯಾಯ ದೊರಕಿಸಿಕೊಡಬೇಕು’ ಎಂದರು.

ಹದಗೆಟ್ಟ ರಸ್ತೆಯ ಸ್ಥಿತಿ

ಹದಗೆಟ್ಟ ರಸ್ತೆಗಳು: ಟ್ವೀಟ್‌ನಲ್ಲಿ ಕಿರಣ್ ಮಜುಂದಾರ್ ಷಾ ಅಸಮಾಧಾನ

ಬೆಂಗಳೂರು: ‘ಬಯೋಕಾನ್’ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಅವರು ಹದಗೆಟ್ಟ ರಸ್ತೆಗಳ ಕುರಿತು ಮತ್ತೊಮ್ಮೆ ಟ್ವೀಟ್ ಮೂಲಕ ಅಸಮಾಧಾನ ಹೊರಹಾಕಿದ್ದಾರೆ. ಕೆಲವು ದಿನಗಳ ಹಿಂದಷ್ಟೇ ಹದಗೆಟ್ಟ ರಸ್ತೆಗಳ ಬಗ್ಗೆ ಬೇಸರ ವ್ಯಕ್ತಪಡಿಸಿ ಟ್ವೀಟ್ ಮಾಡಿದ್ದರು.

ಬಿ.ಎನ್.ಶ್ರೀರಾಮ್ ಎಂಬುವವರು ಬೆಂಗಳೂರು-ಮೈಸೂರು ನಡುವಿನ ರಸ್ತೆಯ ನೈಸ್ ರಸ್ತೆ ಜಂಕ್ಷನ್ ಸಮೀಪದಲ್ಲಿ ಹತ್ತಾರು ಗುಂಡಿಗಳು ಬಿದ್ದಿರುವುದನ್ನು ವಿಡಿಯೊ ಮಾಡಿ, ಟ್ವೀಟ್ ಮಾಡಿದ್ದರು. ಇದನ್ನು ರಿಟ್ವೀಟ್ ಮಾಡಿರುವ ಕಿರಣ್ ಮಜುಂದಾರ್ ಷಾ, ‘ಇದು ಆಘಾತಕಾರಿ ಮತ್ತು ನಾಚಿಕೆಗೇಡು’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ ಹುಸ್ಕೂರು-ಸರ್ಜಾಪುರ ಸುತ್ತಮುತ್ತಲಿನ ಹದಗೆಟ್ಟ ರಸ್ತೆಗಳ ಬಗ್ಗೆಯೂ ಟ್ವೀಟ್ ಮೂಲಕ ಆಕ್ರೋಶ ವ್ಯಕ್ತಪಡಿಸಿ, ಶಾಸಕರು, ಸಂಸದರು ಮತ್ತು ಸ್ಥಳೀಯ ಗ್ರಾಮ ಪಂಚಾಯಿತಿ ಜವಾಬ್ದಾರಿಯ ಕೊರತೆಯಿಂದ ರಸ್ತೆ ಹದಗೆಟ್ಟಿದೆ ಎಂದು ನಿರಾಸೆ ವ್ಯಕ್ತಪಡಿಸಿದ್ದರು.

‘ಈ ರಸ್ತೆಯಲ್ಲಿ ಬಸ್ ಡಿಪೊ ಇದೆ. ವಾಹನಗಳು ಸಂಚರಿಸಲು ಸಾಧ್ಯವಾಗದ ಪರಿಸ್ಥಿತಿಯಿದೆ. ಸ್ಥಳೀಯ ಆಡಳಿತಕ್ಕೆ ನಾಚಿಕೆಯ ಸಂಗತಿ’ ಎಂದು ಟ್ವೀಟ್‌ನಲ್ಲಿ ಕುಟುಕಿದ್ದಾರೆ. ಈ ರಿಟ್ವೀಟ್ ಅನ್ನು ಹಲವರು ಶೇರ್ ಮಾಡಿದ್ದಾರೆ.

ಪ್ರತಾಪ್‌ಸಿಂಹ ಕ್ಷಮೆಯಾಚನೆಗೆ ವಕೀಲರ ಸಂಘ ಆಗ್ರಹ

ಬೆಂಗಳೂರು: ‘ವಕೀಲರ ಬಗ್ಗೆ ಹಗುರವಾಗಿ ಮಾತನಾಡಿದ ಸಂಸದ ಪ್ರತಾಪ್‌ಸಿಂಹರಿಗೆ ಧಿಕ್ಕಾರ. ಕೂಡಲೇ ಅವರು ವಕೀಲ ಸಮುದಾಯದವರ ಕ್ಷಮೆಯಾಚಿಸಬೇಕು’ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘ ಆಗ್ರಹಿಸಿದೆ.

‘ರಾಜಕೀಯ ದುರುದ್ದೇಶದಿಂದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರನ್ನು ಟೀಕಿಸಲು ಹೋಗಿ ವಕೀಲ ಸಮುದಾಯವನ್ನೇ ಟೀಕಿಸಿರುವುದು ಖಂಡನೀಯ’ ಎಂದರು

‘ಅದೂ ‘ಬಿ.ಎ, ಎಲ್‌.ಎಲ್‌.ಬಿ ಮಾಡಿಕೊಂಡು ಯಾವುದಾದರೂ ತಾಲ್ಲೂಕಿನ ನ್ಯಾಯಾಲಯದಲ್ಲಿ ವಕೀಲಿಕೆ ಮಾಡಿಕೊಂಡಿದ್ದ ಸಿದ್ದರಾಮಯ್ಯರವರಿಗೆ ದೇಶದ ಅರ್ಥಿಕತೆ ಬಗ್ಗೆ ಹೇಗೆ ಗೊತ್ತಾಗಬೇಕು?’ ಎಂದು ವಾಗ್ದಾಳಿ ಮಾಡಿರುವುದು ಖಂಡನೀಯ’ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಸುರೇಶ.ಎಂ.ಲಾತೂರ ಆಕ್ರೋಶ ವ್ಯಕ್ತಪಡಿಸಿದರು.

‘ಪ್ರಜಾಪ್ರಭುತ್ವ ಸರ್ಕಾರದಲ್ಲಿ ವಕೀಲರ ಪಾತ್ರದ ಬಗ್ಗೆ ಗೊತ್ತಿಲ್ಲದ ಪ್ರತಾಪ್‌ಸಿಂಹ ಲೋಕಸಭಾ ಸದಸ್ಯರಾಗಲು ಅನರ್ಹರು. ದೇಶದ ಇತಿಹಾಸ ಅರ್ಥ ಮಾಡಿಕೊಳ್ಳದ ಅಜ್ಞಾನಿಗಳು’ ಎಂದರು. ‘ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವ ಹಲವು ಶಾಸಕರು ಮತ್ತು ಸಂಸದರು ವಕೀಲರಾಗಿದ್ದಾರೆ. ಆದ್ದರಿಂದ ಕೂಡಲೇ ಪ್ರತಾಪ್‌ಸಿಂಹ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

ನಗರದಲ್ಲಿ ಇಂದು

ಬುದ್ಧ ಐಎಎಸ್ ಹೊಸ ಬ್ಯಾಚ್‌ನ ಪ್ರಾರಂಭ: ಭಾಗವಹಿಸುವವರು: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಿ.ರಘು ಗೌಡ, ಚೆ.ಬಾಲು, ಆಯೋಜಕರು: ಬುದ್ಧ ಐಎಎಸ್, ಸ್ಥಳ: ಸಿದ್ದರಾಮಯ್ಯ ಅವರ ನಿವಾಸ, ಕುಮಾರ ಪಾರ್ಕ್, ಬೆಳಿಗ್ಗೆ: 10

ಕರ್ನಾಟಕದಲ್ಲಿ ಮಹಿಳಾ ಚಳವಳಿಯ ನೆಲೆ-ಹಿನ್ನೆಲೆ ವಿಚಾರಗೋಷ್ಠಿ: ಉದ್ಘಾಟನೆ: ಕೆ.ಎಸ್.ವಿಮಲ, ಅತಿಥಿಗಳು: ಡಾ.ವಸುಂಧರಾ ಭೂಪತಿ, ಅಧ್ಯಕ್ಷತೆ: ದೇವಿ, ಆಯೋಜಕರು: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸ್ಥಳ: ಸೌಹಾರ್ದ ನಂ.1, 1ನೇ ಅಡ್ಡ ರಸ್ತೆ, ಸಿಎಸ್ಐ ಕಾಂಪೌಂಡ್, ಮಿಷನ್ ರಸ್ತೆ, ಸುಬ್ಬಯ್ಯ ಸರ್ಕಲ್ ಹತ್ತಿರ, ಬೆಳಿಗ್ಗೆ: 10.30

ಪ್ರೊ.ಬಿ. ಕೃಷ್ಣಪ್ಪರವರ 84ನೇ ಜನ್ಮದಿನದ ಪ್ರಯುಕ್ತ ಸಂವಿಧಾನ ಸಂಕಲ್ಪ ದಿನ: ಉದ್ಘಾಟನೆ: ಎಚ್.ಎಸ್. ನಾಗಮೋಹನ್ ದಾಸ್, ನೇತೃತ್ವ: ಪ್ರಸನ್ನಾನಂದ ಸ್ವಾಮೀಜಿ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಆಯೋಜಕರು: ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಸ್ಥಳ: ಅಂಬೇಡ್ಕರ್ ಭವನ, ಮಿಲ್ಲರ್ ರಸ್ತೆ, ವಸಂತ ನಗರ, ಬೆಳಿಗ್ಗೆ: 11

ಬೆಂಗಳೂರು ವಿಶ್ವವಿದ್ಯಾಲಯದ ನೂತನ ಕಟ್ಟಡಗಳ ಉದ್ಘಾಟನೆ: ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಡಾ.ಸಿ. ಎನ್.ಅಶ್ವತ್ಥನಾರಾಯಣ, ಅಧ್ಯಕ್ಷತೆ: ಪ್ರೊ.ವೇಣುಗೋಪಾಲ್.ಕೆ.ಆರ್, ಆಯೋಜಕರು: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಯು.ವಿ.ಸಿ.ಇ, ಕೆ.ಆರ್. ವೃತ್ತ, ಸಂಜೆ: 4

ಮಂಡ್ಯ ಜಿಲ್ಲಾ ಅನಿವಾಸಿಗಳ ಬಳಗ ಬೆಂಗಳೂರು ಸಂಘದ ಉದ್ಘಾಟನೆ: ಉದ್ಘಾಟನೆ: ಎಚ್.ಡಿ.ದೇವೇಗೌಡ, ಎಸ್.ಎಂ.ಕೃಷ್ಣ, ಅಧ್ಯಕ್ಷತೆ: ಕೆ.ಸಿ. ನಾರಾಯಣಗೌಡ, ಉಪಸ್ಥಿತಿ: ಸುಮಲತಾ ಅಂಬರೀಷ್, ಸಿ.ಎಸ್.ಪುಟ್ಟರಾಜು, ಡಿ.ಸಿ. ತಮ್ಮಣ್ಣ, ಆಯೋಜಕರು: ಮಂಡ್ಯ ಜಿಲ್ಲಾ ಅನಿವಾಸಿಗಳ ಬಳಗ ಬೆಂಗಳೂರು ಸಂಘ, ಸ್ಥಳ: ಕುವೆಂಪು ಸಭಾಂಗಣ, ಒಕ್ಕಲಿಗರ ಸಂಘದ ಆವರಣ, ವಿ.ವಿ.ಪುರಂ, ಕೆ.ಆರ್. ರಸ್ತೆ, ಸಂಜೆ:4

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಅಭಿಜ್ಞ ನೃತ್ಯ ತಂಡ, ನಿರ್ದೇಶನ: ರಂಜಿತಾ ಪ್ರಸಾದ್, ಸ್ಥಳ : ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯ ರಸ್ತೆ, 45ನೇ ಅಡ್ಡರಸ್ತೆ, ಜಯನಗರ ಐದನೇ ಬಡಾವಣೆ, ಸಂಜೆ: 7.30

ಅಭಿಜ್ಞ ಭರತನಾಟ್ಯ ತಂಡ

ನಾಲ್ವಡಿ ಕೃಷ್ಣರಾಜ ಒಡೆಯರ 138ನೇ ಜಯಂತಿ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಲಾ ಕಾರ್ಯಕ್ರಮಗಳು: ಉದ್ಘಾಟನೆ: ಡಾ.ಪ್ರಧಾನ ಗುರುದತ್, ನಾಲ್ವಡಿ ಕೃಷ್ಣರಾಜ ಒಡೆಯರ ನಾಡರತ್ನ ಪ್ರಶಸ್ತಿ ಪುರಸ್ಕೃತರು: ವಿ.ಗೋಪಾಲಗೌಡರು, ಉಪಸ್ಥಿತಿ: ವೂಡೇ.ಪಿ.ಕೃಷ್ಣ, ಅಧ್ಯಕ್ಷತೆ: ವ.ಚ.ಚನ್ನೇಗೌಡ, ಆಯೋಜಕರು: ಕುವೆಂಪು ಕಲಾನಿಕೇತನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ ಆವರಣ, ಸಂಜೆ: 5

ಕನ್ನಡಿಗರ ಸಂಸ್ಕೃತಿ ಉಪನ್ಯಾಸ ಕಾರ್ಯಕ್ರಮ: ಉಪನ್ಯಾಸಕರು: ಮೋಹನ್.ಎಸ್, ಅಧ್ಯಕ್ಷತೆ: ಜಗದೀಶ ರೆಡ್ಡಿ, ಉಪಸ್ಥಿತಿ: ಎಂ.ಸಿ.ನರೇಂದ್ರ, ಮಹಾಂತೇಶ ದೇಗಾವಿ, ಆಯೋಜಕರು: ಕನ್ನಡ ಯುವಜನ ಸಂಘ, ಸ್ಥಳ: ಕನ್ನಡ ಯುವಜನ ಸಭಾಂಗಣ, ಎಚ್.ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ(ವಿಲ್ಸನ್ ಗಾರ್ಡನ್), ಸಂಜೆ: 6.30

ಮೆಟ್ರೊ ಮಾರ್ಗದಲ್ಲಿ ಒಡೆದ ಪೈಪ್, ಮುಚ್ಚಿಹೋದ ತೊಟ್ಟಿಗಳು: ಸಮೀಕ್ಷೆ

ಮಳೆ ನೀರು ಸಂಗ್ರಹ: ಬೇಕಿದೆ ದುರಸ್ತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಿರ್ವಹಣೆ ಕೊರತೆ ಬಗ್ಗೆ ವರದಿಯಲ್ಲಿ ಉಲ್ಲೇಖ
- ಮಳೆಗಾಲಕ್ಕೆ ಒಂದು ತಿಂಗಳು ಮೊದಲು ಪರಿಶೀಲನೆ ಕಾರ್ಯವಾಗಬೇಕು
- ಕಸದ ತೊಟ್ಟಿಗಳಿಗೆ ಮೆಷ್ ಅಳವಡಿಕೆಗೆ ಸಲಹೆ

ಬೆಂಗಳೂರು: ಮಳೆ ನೀರು ಸಂಗ್ರಹ ಕಾರ್ಯ ಬೆಂಗಳೂರಿನಲ್ಲಿ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬುದನ್ನು ಪ್ರತಿ ಮಳೆಗಾಲವೂ ನೆನಪು ಮಾಡುತ್ತದೆ. ಮೆಟ್ರೊ ರೈಲು ಮಾರ್ಗದಲ್ಲೂ ಅಲ್ಲಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಹಾಳಾಗಿರುವುದು ಆ್ಯಕ್ಷನ್ ಏಡ್ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ಗೊತ್ತಾಗಿದೆ. ಸಂಸ್ಥೆಯು ಈ ಕುರಿತ ವರದಿ ಬಿಡುಗಡೆ ಮಾಡಿದೆ.

ಮೆಟ್ರೊ ರೈಲು ಎತ್ತರಿಸಿದ ಮಾರ್ಗಗಳಲ್ಲಿ ಸಂಗ್ರಹವಾಗುವ ಮಳೆ ನೀರನ್ನು ಕಂಬಗಳಿಗೆ ಅಳವಡಿಸಿರುವ ಪೈಪ್‌ಗಳ ಮೂಲಕ ತೊಟ್ಟಿಗಳಲ್ಲಿ ಸಂಗ್ರಹಿಸುವ ವ್ಯವಸ್ಥೆ ಇದೆ. ಎಂ.ಜಿ.ರಸ್ತೆ ಮೆಟ್ರೊ ರೈಲು ನಿಲ್ದಾಣ ಮತ್ತು ಸ್ವಾಮಿ ವಿವೇಕಾನಂದ ರಸ್ತೆ ಮೆಟ್ರೊ ನಿಲ್ದಾಣದ ತನಕ ಆಕ್ಷನ್ ಏಡ್ ಸಂಸ್ಥೆ ಸಮೀಕ್ಷೆ ನಡೆಸಿದೆ. ಒಡೆದ ಪೈಪ್‌ಗಳಲ್ಲಿ ಸೋರಿ ಹೋಗುವ ನೀರು, ಮುಚ್ಚಿಹೋಗಿರುವ ತೊಟ್ಟಿಗಳನ್ನು ಗುರುತಿಸಿದೆ.

ಈ ನಿಲ್ದಾಣಗಳ ನಡುವೆ 156 ಕಂಬಗಳಿದ್ದು, 8 ಕಂಬಗಳಲ್ಲಿ ಪೈಪ್‌ಗಳು ಒಡೆದಿರುವುದನ್ನು ಸಮೀಕ್ಷೆ ನಡೆಸಿದ ತಂಡ ಗುರುತಿಸಿದೆ. 300 ಲೀಟರ್ ಸಾಮರ್ಥ್ಯದ ನೀರಿನ ತೊಟ್ಟಿಗಳು ನಾಲ್ಕು ಕಡೆ ಮುಚ್ಚಿ ಹೋಗಿವೆ, 7 ಕಡೆ ಕಸ ಸಂಗ್ರಹವಾಗಿದೆ. 14 ನೀರಿನ ಟ್ಯಾಂಕ್‌ಗಳಲ್ಲಿ 5 ಕಡೆ ಮುಚ್ಚಳಗಳು ಒಡೆದು ಹೋಗಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಳೆ ನೀರು ಸಂಗ್ರಹಕ್ಕೆ ಮೂಲಸೌಕರ್ಯ ಕಲ್ಪಿಸಿರುವ ಪ್ರಯತ್ನವನ್ನು ಈ ಸಂಸ್ಥೆ ಸ್ವಾಗತಿಸಿದೆ. ಜೊತೆಗೆ ನಿರ್ವಹಣೆ ಕೊರತೆಯನ್ನು ಎತ್ತಿ ಹಿಡಿದಿದೆ. ಮೂಲ ಸೌಕರ್ಯಗಳ ಸಂಪೂರ್ಣ ಪ್ರಯೋಜನ ಪಡೆಯಲು ಕೆಲವು ಸಲಹೆಗಳನ್ನು ಶಿಫಾರಸು ಮಾಡಿದೆ. ಮುಚ್ಚಿ ಹೋಗಿರುವ ತೊಟ್ಟಿಗಳನ್ನು ಸ್ವಚ್ಛಗೊಳಿಸಬೇಕು. ತೊಟ್ಟಿಗಳಿಗೆ ಕಸ ಸೇರುವುದನ್ನು ತಪ್ಪಿಸಲು ಮೆಷ್‌ಗಳನ್ನು ಅಳವಡಿಸಬೇಕು. ಒಡೆದಿರುವ ಪೈಪ್‌ಗಳನ್ನು ಸರಿಪಡಿಸಬೇಕು ಎಂದು ತಿಳಿಸಿದೆ.

‘ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ನಿಯಮಿತವಾಗಿ ನಿರ್ವಹಣೆ ಮಾಡಬೇಕು. ಮಳೆಗಾಲಕ್ಕೆ ಕನಿಷ್ಠ ಒಂದು ತಿಂಗಳ ಮೊದಲು ಪೈಪ್‌ಗಳು, ತೊಟ್ಟಿಗಳನ್ನು ಪರಿಶೀಲಿಸಿ ಸರಿಪಡಿಸಬೇಕು’ ಎಂದು ಸಲಹೆ ನೀಡಿದೆ.

‘ಬೆಂಗಳೂರಿನಲ್ಲಿ ಒಂದೆಡೆ ಮಳೆ ನೀರು ಪೋಲು ಮಾಡಿ, ಮತ್ತೊಂದೆಡೆ ಅಂತರ್ಜಲಕ್ಕಾಗಿ ಹುಡುಕಾಡುತ್ತಿದ್ದೇವೆ. ಇನ್ನೊಂದೆಡೆ ಕಾಂಕ್ರೀಟ್ ರಸ್ತೆ ನಿರ್ಮಿಸುವ ಮೂಲಕ ಮಳೆ ನೀರು ಇಂಗಲು ಜಾಗವೇ ಇಲ್ಲದಂತೆ ಮಾಡುತ್ತಿದ್ದೇವೆ. ಶೀಘ್ರದಲ್ಲೇ 100 ಕಿಲೋ ಮೀಟರ್‌ಗೂ ಹೆಚ್ಚಿನ ಮೇಲ್ಸೇತುವೆ ಮೆಟ್ರೊ ರೈಲು ಮಾರ್ಗವನ್ನು ನಗರ ಹೊಂದಲಿದೆ. ಮಳೆ ನೀರನ್ನು ಸಮರ್ಪಕವಾಗಿ ಸಂಗ್ರಹ ಮಾಡಿದರೆ ನೀರಿನ ಸಂರಕ್ಷಣೆಗೆ ಇದು ಸಹಾಯವಾಗುತ್ತದೆ’ ಎಂಬುದು ಆ್ಯಕ್ಷನ್ ಏಡ್ ಸಂಸ್ಥೆಯ ರಾಘವೇಂದ್ರ ಬಿ. ಪಚ್ಚಾಪುರ್ ಅಭಿಪ್ರಾಯ.

ಈ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೂ ಅವರು ಪತ್ರ ಬರೆದಿದ್ದಾರೆ.

ಜನಸಂಖ್ಯೆ ಆಧಾರದಲ್ಲಿ ಮೀಸಲಾತಿಗೆ ಆಗ್ರಹ

ಬೆಂಗಳೂರು: ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳನ್ನು ‘ಅತಿ ಹಿಂದುಳಿದ’ ಮತ್ತು ‘ಹಿಂದುಳಿದ’ ವರ್ಗಗಳು ಎಂಬುದಾಗಿ ವರ್ಗೀಕರಿಸಿ, ಈ ಸಮುದಾಯಗಳ ಜನಸಂಖ್ಯೆ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿ ಒದಗಿಸುವಂತೆ ಒತ್ತಾಯಿಸಿ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯು ‘ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆ ಗುರುತಿಸಲು ನೇಮಕಗೊಂಡಿರುವ ನ್ಯಾಯಮೂರ್ತಿ ಕೆ.ಭಕ್ತವತ್ಸಲ ನೇತೃತ್ವದ ಆಯೋಗಕ್ಕೆ ಮನವಿ ಸಲ್ಲಿಸಿದೆ.

‘ವಿವಿಧ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸುವ ಮೊದಲು ಪ್ರಾಥಮಿಕ ಮತ್ತು ದ್ವಿತೀಯ ಮೂಲದ ಮಾಹಿತಿಗಳನ್ನು ಪಡೆದು, ಪರಿಶೀಲಿಸಬೇಕು. ಸಮಕಾಲೀನ ಪ್ರಾಯೋಗಿಕ ಅಂಕಿಅಂಶಗಳ ಆಧಾರ ದಲ್ಲಿ ಕಟ್ಟುನಿಟ್ಟಿನ ವಿಚಾರಣೆ ನಡೆಸಿದ ಬಳಿಕ ಆಯೋಗವು ಅತಿ ಹಿಂದುಳಿದ ಮತ್ತು ಹಿಂದುಳಿದ ವರ್ಗಗಳನ್ನು ಗುರುತಿಸಬೇಕು’ ಎಂದು ವೇದಿಕೆ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್, ಪ್ರಧಾನ ಕಾರ್ಯ ದರ್ಶಿ ಎಂ. ನಾಗರಾಜು ಮತ್ತು ಖಜಾಂಚಿ ಎಲ್.ಎ. ಮಂಜುನಾಥ್ ಆಗ್ರಹಿಸಿದ್ದಾರೆ.

‘ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಗಳೂ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿವೆ. ಈ ಸಮುದಾಯಗಳು ಹೆಚ್ಚಿನ ರಾಜಕೀಯ ಪ್ರಾತಿನಿಧ್ಯ ಹೊಂದಿರುವ ಕುರಿತು 2010ರ ನವೆಂಬರ್ 25ರಂದು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಜೆ.ಎಸ್. ಖೇಹರ್ ನೇತೃತ್ವದ ವಿಭಾಗೀಯ ಪೀಠವು ನೀಡಿದ್ದ ತೀರ್ಪಿನಲ್ಲಿ ಕೆಲವು ಅಂಶಗಳನ್ನು ಉಲ್ಲೇಖಿಸಲಾಗಿದೆ. ಇಂತಹ ವಿಚಾರಗಳನ್ನೂ ಆಯೋಗವು ಪರಿಗಣನೆಗೆ ತೆಗೆದುಕೊಳ್ಳಬೇಕು. ಶಾಸಕರು, ಸಂಸದರು ಮತ್ತು ವಿವಿಧ ಹಂತದ ಸ್ಥಳೀಯ ಸಂಸ್ಥೆಗಳಲ್ಲಿ ಈವರೆಗೆ ದೊರಕಿರುವ ಜಾತಿವಾರು ಪ್ರಾತಿನಿಧ್ಯ, ಸಹಕಾರ ಸಂಸ್ಥೆಗಳಲ್ಲಿ ದೊರಕಿರುವ ಪ್ರಾತಿನಿಧ್ಯದ ಮಾಹಿತಿಯನ್ನೂ ಸಂಗ್ರಹಿಸಬೇಕು. ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಪೂರಕವಾಗಿ ಬಳಸಿಕೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

ನಿಗದಿಪಡಿಸಿರುವ ಕಾಲಮಿತಿಯೊಳಗೆ ಅಧ್ಯಯನ ಪೂರ್ಣಗೊಳಿಸಲು ಸಾಧ್ಯವೇ ಎಂಬುದನ್ನು ಆಯೋಗ ತೀರ್ಮಾನಿಸಬೇಕು. ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸುವ ಸಂಬಂಧ ಸಾರ್ವಜನಿಕರಿಂದ ಆಕ್ಷೇಪಣೆ, ಸಲಹೆಗಳನ್ನು ಪಡೆಯಬೇಕು ಎಂದು ಮನವಿ ಮಾಡಿದ್ದಾರೆ.

‘ಬಿಷ್ಣೋಯಿ ಮುಖ್ಯ ಸಂಚುಕೋರ’

ನವದೆಹಲಿ/ಪುಣೆ (ಪಿಟಿಐ): ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ, ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆಯ ಪ್ರಮುಖ ಸಂಚುಕೋರ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ.

‘ಪ್ರಕರಣಕ್ಕೆ ಸಂಬಂಧಿಸಿ ಇನ್ನೂ ಐವರು ಆರೋಪಿಗಳನ್ನು ಗುರುತಿಸಲಾಗಿದೆ. ಈ ಪ್ರಕರಣದಲ್ಲಿ ಲಾರೆನ್ಸ್ ಸಂಬಂಧಿ ಸಚಿನ್ ಬಿಷ್ಣೋಯಿ ಎಂಬಾತನ ಪಾತ್ರವಿರುವ ಬಗ್ಗೆ ಮಾಹಿತಿ ಲಭಿಸಿದೆ’ ಎಂದು ಪೊಲೀಸ್ ಆಯುಕ್ತ (ವಿಶೇಷ ಘಟಕ) ಎಚ್.ಎಸ್.ಧಲಿವಾಲ್ ಬುಧವಾರ ತಿಳಿಸಿದರು.

ಬಂಧನ: ಮಹಾರಾಷ್ಟ್ರ ಪೊಲೀಸರೊಂದಿಗೆ ಪುಣೆಯಲ್ಲಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಮೂಸೆವಾಲಾ ಹತ್ಯೆಗೆ ಸಂಬಂಧಿಸಿ ಸಿದ್ಧೇಶ್ ಕಾಂಬ್ಳೆ ಎಂಬಾತನನ್ನು ಬಂಧಿಸಲಾಗಿದೆ ಎಂದರು.

ಸುದ್ದಿ 2 ನಿಮಿಷ

ವಾರ್ಡ್ ಮರು ವಿಂಗಡಣೆ ಕರಡು ಇಂದು ಸಲ್ಲಿಕೆ : ತುಷಾರ್ ಗಿರಿನಾಥ್

ಬೆಂಗಳೂರು: ‘ಬಿಬಿಎಂಪಿ ವಾರ್ಡ್‌ಗಳ ಮರು ವಿಂಗಡಣೆ ಕರಡು ವರದಿ ಸಿದ್ಧವಾಗಿದ್ದು, ಗುರುವಾರ ಸರ್ಕಾರಕ್ಕೆ ಸಲ್ಲಿಸುತ್ತೇವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ಪಷ್ಟಪಡಿಸಿದರು.

‘ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದೆ. ಕೆಲವು ದಾಖಲೆಗಳನ್ನು ಒದಗಿಸುವ ಕಾರ್ಯವೂ ಬಾಕಿ ಇತ್ತು. ಈಗ ಎಲ್ಲವೂ ಪೂರ್ಣಗೊಂಡಿದ್ದು, ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ವರದಿ ಸಿದ್ಧಪಡಿಸಲಾಗಿದೆ. ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರ ಸಮಯ ಪಡೆದು ಸಮಿತಿಯ ಸದಸ್ಯರೊಂದಿಗೆ ಹೋಗಿ ವರದಿ ಸಲ್ಲಿಸುತ್ತೇವೆ’ ಎಂದು ತಿಳಿಸಿದರು.



‘ಪಾಲಿಕೆ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ 8 ವಾರಗಳ ಗಡುವು ನೀಡಿದೆ. ನಿಗದಿತ ಸಮಯದೊಳಗೆ ಚುನಾವಣೆ ನಡೆಸಲು ಯಾವುದೇ ತೊಂದರೆ ಆಗುವುದಿಲ್ಲ. ಗಡುವಿಗೆ ಮೊದಲೇ ಸಿದ್ಧತೆ ಪೂರ್ಣಗೊಳಿಸಲಾಗುವುದು’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನೂತನ ಬ್ರ್ಯಾಂಡ್ ‘ನೆಕ್ಸಸ್’ ಪರಿಚಯ

ಬೆಂಗಳೂರು: ನೆಕ್ಸಸ್ ಸಂಸ್ಥೆಯ 17 ಮಾಲ್‌ಗಳನ್ನು ಅತ್ಯಾಧುನಿಕ ವ್ಯವಸ್ಥೆಯೊಂದಿಗೆ ಪರಿಚಯಿಸಿದೆ.

‘ಪ್ರತಿದಿನ ಹೊಸ, ಅನನ್ಯವಾದ ಗ್ರಾಹಕಸ್ನೇಹಿ ಸೇವೆ ಕಲ್ಪಿಸುತ್ತಿದ್ದೇವೆ’ ಎಂದು ನೆಕ್ಸಸ್ ಮಾಲ್‌ಗಳ ಸಿಇಒ ದಲೀಪ್ ಸೆಹಗಲ್ ತಿಳಿಸಿದರು.

ನೆಕ್ಸಸ್ ಮಾಲ್ ಉದ್ಯೋಗಿಗಳು, ಚಿಲ್ಲರೆ ವ್ಯಾಪಾರಿಗಳ ನಡುವಿನ ಸಂಬಂಧಗಳನ್ನು ಬಲಪಡಿಸಲು ನೂತನ ಬ್ರ್ಯಾಂಡ್ ಗುರುತು ಹೆಚ್ಚು ಪರಿಣಾಮಕಾರಿ. ಹೊಸ ಲಾಂಛನ ಆಧುನಿಕವಾಗಿದೆ ಎಂದು ಸೆಹಗಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಹೇಳಿದರು.

ಕೋವಿಡ್ ಬಳಿಕ ನೆಕ್ಸಸ್ ಮಾಲ್ ಮಾರಾಟದಲ್ಲಿ ಪ್ರಗತಿ ಕಂಡಿದೆ. ನೆಕ್ಸಸ್ ಮಾಲ್‌ಗಳು ಭಾರತದ ಅತಿದೊಡ್ಡ ಮತ್ತು ವೈವಿಧ್ಯಮಯ ಚಿಲ್ಲರೆ ವೇದಿಕೆಯಾಗಿ ಬೆಳೆದಿವೆ. ಮುಂದಿನ ಕೆಲವು ತಿಂಗಳುಗಳಲ್ಲಿ ದೇಶದಾದ್ಯಂತ ಮರು ಬ್ರ್ಯಾಂಡಿಂಗ್ ಆಕರ್ಷಿಸಲು ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ಮುಂಬೈ, ಬೆಂಗಳೂರು, ಹೈದರಾಬಾದ್, ಚೆನ್ನೈ, ಅಹಮದಾಬಾದ್, ಅಮೃತಸರ, ಉದಯಪುರ, ಭುವನೇಶ್ವರ, ಪುಣೆ, ಮೈಸೂರು ಮತ್ತು ಮಂಗಳೂರಿನಲ್ಲೂ ನೆಕ್ಸಸ್ ಮಾಲ್‌ಗಳಿವೆ ಎಂದು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

WALK-IN-INTERVIEW
VIDYA NIKETAN HIGH SCHOOL
(English Medium)
Dist: Kamareddy, Telangana State
REQUIRES
Resident Teachers to teach English, Mathematics, Physical Science, Biological Science and Social Studies for High School & Middle School.
Salary upto Rs. 40,000/-pm.
Free Boarding & Loding
Walk-in-interview on 08, 09 and 10th June 2022
Between: 10 AM & 5 PM.
Desirous candidates please walk-in with resume, recept passport size photograph and original certificates.
Contact: Mr. Qavi Bahelmi at HOTEL PULIKESHI Gandhi Nagar, Bangalore. Ph.: 063007 22544

WANTED
Wanted Teachers for Grade V to VII for State Board School on Sarjapur Road. Send your resume to vvrschool2003@gmail.com.
Interested Call: 94801 81149 98452 74215

TRILLIUM PU COLLEGE RT.Nagar Bangalore wanted Chemistry /Hindi /Computer Lecturer's. 9880194234 7624883745 TRILLIUM PUBLIC SCHOOL RT.Nagar Requires Maths, Kannada Teacher, Academic Coordinator 7760890004

Marketing & Sales

REQ, TEAMLEADER, Telecaller, & Field executive for Banking Loan collection (salary 20000). Direct recruitment to company Contact:- 9620206756, 9620200756.

Security & Detectives

WANTED
Field Executive's, Admin HR Manager's and Accountant's to work in Poojyaya Security Services @ R T Nagar, Bangalore. Contact: 9844006744, 080-23536744. raghu_sgr2@yahoo.co.in

REPUTED SECURITY Agency Requires Security Guards, Security Supervisors, Field Officers, Area/ Training/ Operations Manager. Contact: 9886349781/ 8073668816

General

MANGALORE- REQUIRED Continental Chef and Accounts Executive for reputed CLUB in MANGALORE City. *Food, Accommodation, Good salary and other benefits will be provided for right candidate.* *Contact:* *+918147175283*, *+919900812850*

Part-Time Jobs

EXCELLENT OPPORTUNITY for Retired/ VRS Bank & Govt. Officers to Earn Huge Income With Possible Travel Abroad Age 50-70 Yrs. Call 9060033382

Wanted

WANTED MARRIED hindu couple husband as driver not more than 40 years and wife as Cook for a family of 5 at Bangalore Good salary Accommodation and food Police verification will be made Call 9741900909

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn up to 40,000/-Contact: 9741401834

BUSINESS

Business Offers

Finance

NRI'S INVESTMENT And Finance Available On Low Interest Against Properties, Land &Building,Sites,Flats, Converted& Agriculture Lands Call:7411265189

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

REAL ESTATE SELLING

Sites

Airport Road

BDA BIAAPA approved Corner Sites for Sale 14 kms Before Airport 500 meters from Stone Hill School Direct Owner 7337616557 8904050690

PERSONAL

Change of Name

14832243W, SEP/MT, RAMA SUBBA REDDY GURAKA, Vill- Somidevipalli, Giddalur, Prakasam, Andhra Pradesh, changed daughter's name CHANDRA LAHARI to GURAKA NAGA CHANDRA LAHARI, 09/05/2022, Notary K.V. Mani, Bangalore

I,NIRAJ KUMAR, changed my name-to NEERAJ KUMAR dated 02-06-2022. Sworn before notary H.S.Sakalesh Aradhya, Bengaluru.

I, SANTOSH Kumar. S. Tadkot aged 37 years Residing No. 8, 1st Cross, Kaniminike Colony, Kumbalagodu Temple Kaniminike, Bengaluru. I have changed my Daughter's name From IBBANI. S to IBBANI S. TADKOT vide affidavit Dated: 02/06/2022 Sworn before notary R.Shivannachari.

RAMESWARI M/O 14869462P- Hav/Clk(SD)- SARJEET, R/a Mandkola(217), Palwal, Haryana changed name from RAMESWARI to RAMESHWARI notary K.V.Mani, Bangalore.

14832243W, SEP/MT, RAMA SUBBA REDDY GURAKA, Vill- Somidevipalli, Giddalur, Prakasam, Andhra Pradesh, changed name from RAMA SUBBA REDDY GURAKA to GURAKA RAMASUBBAREDDY, 09/05/2022, Notary K.V. Mani, Bangalore

14832243W SEP/MT, RAMA SUBBA REDDY GURAKA, Vill- Somidevipalli, Giddalur, Prakasam, Andhra Pradesh, changed daughter's name from GURKA NAGA SWAROOPA to GURAKA NAGA SWAROOPA, 09/05/2022, Notary K.V. Mani, Bangalore

JAYAPRABHA, WIFE/O, JC671391X SUB, BYJU M.A, Vill- Vadaserikara Ranni Pathanamthitta, Kerala, changed name from JAYAPRABHA to JAYAPRABHA DEVI S, 02/06/2022, Notary K.V. Mani, Bangalore

AISWARYA, DAUGHTER/O, JC671391X SUB, BYJU M.A, Vill- Vadaserikara Ranni, Pathanamthitta Kerala, changed name from AISWARYA to AISWARYA B.J, 02/06/2022, Notary K.V. Mani, Bangalore

I, GURULINGAMMA, R/at No. 24, 17th Cross, Amma Ashrama Road, Jnanabharathi 2nd Stage, Bengaluru- 560056, have changed my name to PRIYA A MATH vide affidavit dated: 6/6/2022 Before Notary M.K.Devaki Bangalore.

SANDEEP SAHU, 6498626K, HAV, Vill- Madhuban Toli, Lohardaga, Jharkhand, changed Son's name from SUBHAM KUMAR to SHUBHAM KUMAR SAHU, 06/06/2022, Notary K.V. Mani, Bangalore

PARVATHI, WIFE/O, 14832243W SEP/MT, GURAKA RAMASUBBAREDDY, Vill- Somidevipalli, Giddalur, Prakasam, Andhra Pradesh, changed name from PARVATHI to GURAKA PARVATHI, 09/05/2022, Notary K.V. Mani, Bangalore

Lost

LOST
I, chandrakala. N would like to inform the general public that i have lost my original sale deed no: BNG(U)KNGR-1-40636-2004-05 cd no KEND181 Dated on 07-02-2005 and other previous related deeds where Khata no: 43/4/5/3/43/1/44 and site no: 4 during shifting house on 10/10/21 10:00am to 10:30 near kashinagar, yelachenahalli kanakapura main road, where Lost report complaint filed no :0236900/ 2022(KSP online) jurisdiction Kumarswamy layout police station 02/06/2022. If anyone find Kindly Contact :8553545845.

RAJIV GANDHI MEMORIAL POLYTECHNIC
Near Dr. Ambedkar Institute of Technology, Kengunte Circle, Malathahally, Nagarabhavi, Bengaluru-560056
Phone: 23213282, 29773282
ADMISSION OPEN - COURSES OFFERED
- Computer Science & Engg
- Electronics & Commn Engg
- Mechanical Engineering
- Electrical & Electronics Engg
- Civil Engineering
- Apparel Design & Fashion Technology
For details contact Mobile: 8553344666, 9448865597
RGMP-22301

ವಿದ್ಯಾರಣ್ಯಪುರ ಪೊಲೀಸರಿಂದ ಆರೋಪಿಗಳ ಸೆರೆ

ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಮಾರಾಟ: ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನಗಳಿಗೆ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ, ಹೆಸರುಗಳನ್ನು ಬದಲಿಸಿಕೊಂಡು ಮಾರಾಟ ಮಾಡಿ ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದ ಐದು ಮಂದಿಯನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರೇಣುಗೋಪಾಲ್ (49), ಗೌರಮ್ಮ (48), ಶಂಕರ್ (44), ಎಂ. ಪ್ರಕಾಶ್ (50), ಶಾಂತರಾಜು (43) ಬಂಧಿತರು. ಬಂಧಿತರಿಂದ ನಕಲಿ ಆಧಾರ್ ಕಾರ್ಡ್, ಪಾನ್‌ಕಾರ್ಡ್, ಬ್ಯಾಂಕ್ ಪಾಸ್‌ಬುಕ್‌ಗಳ ನಕಲಿ ಪ್ರತಿಗಳು ಹಾಗೂ ನೋಂದಾಯಿತ ಕಾಗದ ಪತ್ರಗಳ ನಕಲು ಪ್ರತಿಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಯಲಹಂಕ ಹೋಬಳಿ ಚಿಕ್ಕಬೆಟ್ಟಹಳ್ಳಿ ಗ್ರಾಮದ ಸರ್ವೆ ನಂಬರ್ 27/1ರಲ್ಲಿ ವಿಂಗಡಿಸಿರುವ ಶ್ರೀ ಸಾಯಿ ಲೇಔಟ್‌ನಲ್ಲಿರುವ 56ನೇ ಸಂಖ್ಯೆಯ ನಿವೇಶನ ಡಾ.ಎನ್. ಗಿರಿ ದಂಪತಿಯಿಂದ 2015ರಲ್ಲಿ ಕಾರ್ತಿಕ್ ಎಂಬುವವರ ಹೆಸರಿಗೆ ಕ್ರಯಪತ್ರವಾಗಿದೆ. ಇದೇ ಸ್ವತ್ತಿಗೆ ಸಂಬಂಧಿಸಿದಂತೆ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ, ಮಾರಾಟ ಮಾಡಿರುವ ಬಗ್ಗೆ ಕಾರ್ತಿಕ್ ಅವರ ಬಾಮೈದ ರಂಜಿತ್ ಎಂಬುವವರು ವಿದ್ಯಾರಣ್ಯಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಗೌರಮ್ಮ

ಪ್ರಕಾಶ್

ರೇಣು ಗೋಪಾಲ್

ಶಂಕರ್

ಶಾಂತರಾಜು

ಪ್ರಕರಣದ ತನಿಖೆ ಕೈಗೊಂಡಾಗ, ಶಂಕರ್ ಎಂಬಾತ ಟಿ. ನಾಗರಾಜ್ ಎಂದು, ಗೌರಮ್ಮ ಎಂಬಾಕೆ ಟಿ. ಜಯಲಕ್ಷ್ಮಿ ಎಂದು, ರೇಣುಗೋಪಾಲ್ ಎಂಬಾತ ವೇಣುಗೋಪಾಲ್ ಎಂದು ಹೆಸರು ಬದಲಿಸಿಕೊಂಡಿರುವುದು ಗೊತ್ತಾಗಿದೆ. ಕಾರ್ತಿಕ್ ಖರೀದಿಸಿದ್ದ ನಿವೇಶನಕ್ಕೆ 2016ರ ಜೂನ್ 6ರಂದು ನಾಗರಾಜ್, ಜಯಲಕ್ಷ್ಮಿ (ನಕಲಿ ಹೆಸರುಗಳು) ಎಂಬುವರು ವೇಣುಗೋಪಾಲ್‌ಗೆ ಈ ದಾನಪತ್ರ ನೀಡಿರುವುದು, ವೇಣುಗೋಪಾಲ್ 2019ರ ಜೂನ್ 17ರಂದು ಭಾಸ್ಕರ್ ಎಂಬುವರಿಗೆ ಕ್ರಯಪತ್ರ ಮಾಡಿಕೊಟ್ಟಿರುವುದು ತನಿಖೆಯಿಂದ ತಿಳಿದುಬಂದಿದೆ. ಭಾಸ್ಕರ್ ಅವರು ವಿ. ಮುನಿಲಕ್ಷ್ಮಮ್ಮ ಮತ್ತು ಎನ್. ಕುಶಾಲ್ ಎಂಬುವರಿಗೆ 2020ರ ಆಗಸ್ಟ್ 21ರಂದು ಮಾರಾಟ ಮಾಡಿರುವುದೂ ಗೊತ್ತಾಗಿದೆ.

ಪ್ರಕರಣದ ತನಿಖೆ ಚುರುಕುಗೊಳಿಸಿದ ಪೊಲೀಸರು ನಕಲಿ ಹೆಸರಿನ ವೇಣುಗೋಪಾಲ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಆತನ ನಿಜವಾದ ಹೆಸರು ರೇಣುಗೋಪಾಲ್ ಎಂದು ಗೊತ್ತಾಗಿದೆ. ಈತ ದಾಸರಹಳ್ಳಿ ಅಗ್ರಹಾರದ ಬಸವೇಶ್ವರನಗರ ಮುಖ್ಯರಸ್ತೆ, 5ನೇ ಮುಖ್ಯರಸ್ತೆಯ 13ನೇ ಕ್ರಾಸ್‌ನಲ್ಲಿ ವಾಸವಾಗಿರುವುದನ್ನು ಪತ್ತೆಹಚ್ಚಿದ ಪೊಲೀಸರು, ತೀವ್ರವಾಗಿ ವಿಚಾರಣೆಗೆ ಒಳಪಡಿಸಿದಾಗ ಪ್ರಮುಖ ಸೂತ್ರದಾರ ಆತನ ಸ್ನೇಹಿತ ಪ್ರಕಾಶ್ ಎಂಬುದು ಗೊತ್ತಾಗಿದೆ.

ರಾಜಾಜಿನಗರ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಇಂಡಸ್ಟ್ರಿಯಲ್ ಟೌನ್‌ನಲ್ಲಿ ವಾಸವಾಗಿದ್ದ ಪ್ರಕಾಶ್ ಆಟೊ ಕನ್‌ಸಲ್ಟೆಂಟ್ ಆಗಿ ಕೆಲಸ ಮಾಡಿಕೊಂಡಿದ್ದ. ಪ್ರಕಾಶ್ ಸ್ನೇಹಿತನಾದ ಶಾಂತರಾಜು ವಿದ್ಯಾರಣ್ಯಪುರದ ಎಎಂಎಸ್ ಲೇಔಟ್‌ನಲ್ಲಿ ವಾಸವಾಗಿದ್ದು, ಸುಮಾರು ವರ್ಷಗಳಿಂದ ಖಾಲಿ ಇರುವ ನಿವೇಶನಗಳನ್ನು ಗುರುತಿಸಿ ಅಕ್ಕಪಕ್ಕದವರಲ್ಲಿ ವಿಚಾರಿಸಿ, ವಾರಸುದಾರರು ದೀರ್ಘಕಾಲದಿಂದ ಜಾಗಕ್ಕೆ ಬರುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಿದ್ದ. ಬಳಿಕ ಉಪ ನೋಂದಣಿ ಕಚೇರಿಗಳಿಂದ ಅಂಥ ನಿವೇಶನಗಳ ನೋಂದಾಯಿತ ಪ್ರತಿಗಳನ್ನು ಪಡೆದು, ನಿವೇಶನ ಮಾಲೀಕರ ಹೆಸರುಗಳ ಜಾಗದಲ್ಲಿ ಅಸಲಿ ವ್ಯಕ್ತಿಗಳ ಬದಲಿಗೆ ನಕಲಿ ವ್ಯಕ್ತಿಗಳನ್ನು ತೋರಿಸಿ ಉಪ ನೋಂದಣಿ ಕಚೇರಿಗಳಲ್ಲಿ ದಾನಪತ್ರ ಮಾಡಿಕೊಂಡು ಸ್ವತ್ತನ್ನು ಅಕ್ರಮವಾಗಿ ಬೇರೆಯವರಿಗೆ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದುದು ತನಿಖೆಯಿಂದ ಗೊತ್ತಾಗಿದೆ.

ಕೆಂಗೇರಿ ಪೊಲೀಸ್ ಠಾಣೆ ವ್ಯಾಪ್ತಿಯ ನಿವೇಶನವೊಂದಕ್ಕೆ ರೇಣುಗೋಪಾಲ್ ಅಲಿಯಾಸ್ ವೇಣುಗೋಪಾಲ್ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಅಕ್ರಮ ಎಸಗಿರುವ ಬಗ್ಗೆ ಅಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳ ಬಂಧನದಿಂದ ಒಟ್ಟು ಎರಡು ಪ್ರಕರಣಗಳು ಪತ್ತೆಯಾದಂತಾಗಿದೆ. ವಿದ್ಯಾರಣ್ಯಪುರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಅನಿಲ್‌ಕುಮಾರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತ್ತು.

ಅಪಹರಣ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹನ್ನೊಂದು ವರ್ಷದ ಬಾಲಕನನ್ನು ಅಪಹರಿಸಿ ₹50 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ಆರೋಪಿಯನ್ನು ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಹೆಣ್ಣೂರು ಪೊಲೀಸರು ಬಂಧಿಸಿ, ಬಾಲಕನನ್ನು ಪೋಷಕರ ಮಡಿಲು ಸೇರಿಸಿದ್ದಾರೆ.

ಬಿಎಂಟಿಸಿ ಬಸ್ ಚಾಲಕ, ಹೊರಮಾವು ನಿವಾಸಿ ಸುಭಾಷ್ ಎಂಬುವವರ ಪುತ್ರ ದಮದೀಪ್ (11) ಅಪಹರಣಕ್ಕೆ ಒಳಗಾದ ಬಾಲಕ. ನೇಪಾಳ ಮೂಲದ, ಜಿಗಣಿಯಲ್ಲಿ ನೆಲೆಸಿರುವ ಗೌರವ್ ಸಿಂಗ್ (43) ಬಂಧಿತ. ತಲೆಮರೆಸಿಕೊಂಡಿರುವ ಆರೋಪಿಯ ಅಣ್ಣನ ಪತ್ನಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಮಂಗಳವಾರ ಸಂಜೆ ದಮದೀಪ್ ಮನೆಯಲ್ಲಿ ಆಟವಾಡುತ್ತಿದ್ದ. ಆತನ ನೆರೆಮನೆಯ ಮಹಿಳೆಯ ಜೊತೆ ಆರೋಪಿಯ ಅಣ್ಣನ ಪತ್ನಿ ಮಾತನಾಡುತ್ತಿದ್ದಳು. ಬಳಿಕ, 'ನಿನ್ನ ತಾಯಿ ನಿನ್ನನ್ನು ಸ್ವಿಮ್ಮಿಂಗ್ ಪೂಲ್‌ಗೆ ಕರೆದುಕೊಂಡು ಹೋಗಲು ಹೇಳಿದ್ದಾರೆ' ಎಂದು ದಮದೀಪ್‌ನನ್ನು ನಂಬಿಸಿ ಜಿಗಣಿಯಲ್ಲಿರುವ ಗೌರವ್ ಸಿಂಗ್ ಮನೆಗೆ ಕರೆದುಕೊಂಡು ಹೋಗಿದ್ದಳು.

ತನ್ನ ಮನೆಯ ಕೊಠಡಿಯಲ್ಲಿ ಬಾಲಕನನ್ನು ಕೂಡಿ ಹಾಕಿದ್ದ ಗೌರವ್ ಸಿಂಗ್, ಸುಭಾಷ್‌ಗೆ ಕರೆ ಮಾಡಿ, 'ನಿಮ್ಮ ಪುತ್ರನನ್ನು ಅಪಹರಿಸಿದ್ದು, ಬಿಟ್ಟು ಕಳುಹಿಸಲು ತಕ್ಷಣ ₹50 ಲಕ್ಷ ನೀಡಬೇಕು. ಹಣ ಕೊಡದಿದ್ದರೆ ಪುತ್ರನನ್ನು ಜೀವ ಸಹಿತ ಉಳಿಸುವುದಿಲ್ಲ' ಎಂದು ಬೆದರಿಸಿದ್ದ. ಸುಭಾಷ್ ಅವರು ರಾತ್ರಿ 9.30ಕ್ಕೆ ಹೆಣ್ಣೂರು ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸರು, ಆರೋಪಿ ಕರೆ ಮಾಡಿದ್ದ ಮೊಬೈಲ್ ನಂಬರ್‌ನ ಜಾಡು ಹಿಡಿದು ಜಿಗಣಿ ಬಳಿಯ ಫಾರ್ಮ್‌ಹೌಸ್ ಒಂದರಲ್ಲಿ ದಾಳಿ ನಡೆಸಿ, ಬಾಲಕನನ್ನು ಅಪಹರಿಸಿದ್ದರು.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃಭಾಷಾ ಶಿಕ್ಷಣಕ್ಕೆ ಒತ್ತು: ಸಚಿವ ಕಿಶನ್‌ರೆಡ್ಡಿ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ರಾಷ್ಟ್ರೀಯ ಶಿಕ್ಷಣ ನೀತಿಯು ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಪ್ರತಿಪಾದಿಸುವ ಜತೆಗೆ ಮಾತೃಭಾಷಾ ಶಿಕ್ಷಣಕ್ಕೆ ಒತ್ತು ನೀಡಿದೆ' ಎಂದು ಕೇಂದ್ರದ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ ಕಿಶನ್‌ರೆಡ್ಡಿ ಅಭಿಪ್ರಾಯಪಟ್ಟರು.

ಬುಧವಾರ ಕೋರಮಂಗಲದ ರೆಡ್ಡಿ ಜನ ಸಂಘ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

'ಚೀನಾ, ಫ್ರಾನ್ಸ್, ಜಪಾನ್ ಸೇರಿದಂತೆ ಮುಂದುವರಿದ ಅನೇಕ ರಾಷ್ಟ್ರಗಳು ಮಾತೃಭಾಷೆಯಲ್ಲಿ ಶಿಕ್ಷಣ ನೀಡುತ್ತಿವೆ. ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಯಬೇಕು. ಆದರೆ, ಇಂಗ್ಲಿಷ್ ವ್ಯಾಮೋಹದಲ್ಲಿ ತಾಯಿ ಭಾಷೆಯನ್ನು ಮರೆಯಬಾರದು. ಭಾಷೆಯ ರಕ್ಷಣೆ ಪ್ರತಿಯೊಬ್ಬರ ಆದ್ಯತೆಯಾಗಬೇಕು' ಎಂದರು.

'ಜಗತ್ತಿನ ಮುಂದುವರಿದ ದೇಶಗಳು ಬೆಳವಣಿಗೆಯ ತುತ್ತತುದಿಯನ್ನು ಮುಟ್ಟಿವೆ. ಈ ದೇಶಗಳು ಮತ್ತಷ್ಟು ಬೆಳವಣಿಗೆ ಸಾಧಿಸುವುದು ಅಸಾಧ್ಯ. ಭಾರತ ಜಗತ್ತಿನಲ್ಲೇ ಅತಿ ಹೆಚ್ಚು ಯುವಜನತೆಯಿಂದ ಕೂಡಿದ್ದು, ಕೇಂದ್ರದಲ್ಲಿ ಯಾವುದೇ ಸರ್ಕಾರ ಬರಲಿ. 2047ರ ಹೊತ್ತಿಗೆ ಭಾರತ ವಿಶ್ವದ ಸೂಪರ್ ಪವರ್ ಆಗಲಿದೆ. ಈ ದಿಸೆಯಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಮುಂಬರುವ 25 ವರ್ಷಗಳ ಅಭಿವೃದ್ಧಿಯ ನೀಲನಕ್ಷೆಯೊಂದಿಗೆ ಕೆಲಸ ಮಾಡುತ್ತಿದೆ' ಎಂದು ಹೇಳಿದರು.

ಆರ್‌ಜೆಎಸ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಜಯರಾಮ ರೆಡ್ಡಿ, ಶಾಸಕ ಸತೀಶ್ ರೆಡ್ಡಿ, ಪರಿಷತ್ ಸದಸ್ಯ ಗೋಪಿನಾಥ ರೆಡ್ಡಿ, ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೃಷ್ಣಾರೆಡ್ಡಿ ಇದ್ದರು.

ಕೇಂದ್ರ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ ಕಿಶನ್ ರೆಡ್ಡಿ ದೀಪ ಬೆಳಗಿಸಿದರು. ಪರಿಷತ್ ಸದಸ್ಯ ಗೋಪಿನಾಥ ರೆಡ್ಡಿ, ಆರ್‌ಜೆಎಸ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಜಯರಾಮ ರೆಡ್ಡಿ ಹಾಗು ಶಾಸಕ ಸತೀಶ್ ರೆಡ್ಡಿ ಇದ್ದಾರೆ.

'ಯುನೆಸ್ಕೊ ಮುಂದೆ ಕುರಿಗಾಹಿ ಬೇಡಿಕೆ ಮಂಡನೆ'

ಬೆಂಗಳೂರು: ದೇಶದ ಕುರಿಗಾಹಿಗಳ ಸಮಸ್ಯೆಯನ್ನು ಯುನೆಸ್ಕೊ ಮುಂದೆ ಮಂಡಿಸುವುದಕ್ಕಾಗಿ 50 ಸದಸ್ಯರ ತಂಡದೊಂದಿಗೆ ಯುರೋಪ್ ಪ್ರವಾಸ ಕೈಗೊಳ್ಳಲಾಗುವುದು ಎಂದು ಶೆಫರ್ಡ್ ಇಂಡಿಯಾ ಇಂಟರ್ ನ್ಯಾಶನಲ್ ಸಂಘಟನೆಯ ಅಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕುರಿ ಸಾಕಾಣಿಕೆಯಲ್ಲಿ ಭಾರತವು ಜಗತ್ತಿನಲ್ಲೇ 2ನೇ ಸ್ಥಾನದಲ್ಲಿದೆ. ಆದರೆ, ದೇಶದಲ್ಲಿ ಈ ವೃತ್ತಿ ಲಾಭದಾಯಕವಾಗಿ ಬೆಳೆದಿಲ್ಲ. ರೈತರು, ಕುರಿರೊಪ್ಪ ಮಾಲೀಕರು, ವಿದ್ವಾಂಸರು, ಎಂಜಿನಿಯರ್‌ಗಳು, ಉದ್ಯಮಿಗಳು, ಮಾಜಿ ಕುಲಪತಿಗಳು, ರಾಜಕಾರಣಿಗಳ ನಿಯೋಗವನ್ನು ಕೊಂಡೊಯ್ದು ಯುನೆಸ್ಕೊಗೆ ಮನವಿ ಸಲ್ಲಿಸಲಾಗುವುದು' ಎಂದರು.

ಕುರಿಗಾಹಿಗಳ ಕುಲಕಸುಬು ಮತ್ತು ಸಂಸ್ಕೃತಿಯ ರಕ್ಷಣೆ, ಅವರ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಯುನೆಸ್ಕೊಗೆ ಮನವಿ ಮಾಡಲಾಗುವುದು. ಯುರೋಪ್‌ನ ಕುರಿ ಸಾಕಾಣಿಕೆ ಕೇಂದ್ರಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಿ, ಆ ಕುರಿತು ಮಾಹಿತಿಯನ್ನು ರಾಜ್ಯದಲ್ಲಿ ಹಂಚಿಕೊಳ್ಳಲಾಗುವುದು ಎಂದರು.

ಕುರಿ ಸಾಕಾಣಿಕೆಯನ್ನು ಲಾಭದಾಯಕ ವೃತ್ತಿಯನ್ನಾಗಿ ಪರಿವರ್ತಿಸಬಹುದು. ಕುರಿ ಹಾಲು ಟೆಟ್ರಾ ಪ್ಯಾಕ್‌ಗಳಲ್ಲಿ ಮಾರಾಟವಾಗುತ್ತಿದ್ದು, ಪ್ರತಿ ಲೀಟರ್‌ಗೆ ₹300ರವರೆಗೂ ದರವಿದೆ. ಕುರಿ ಮಾಂಸಕ್ಕೂ ಹೆಚ್ಚು ಬೇಡಿಕೆ ಇದೆ. ಈ ಎಲ್ಲ ವಿಚಾರಗಳ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಗುವುದು ಎಂದರು.

ಪಠ್ಯಕ್ರಮದ ವಿಚಾರದಲ್ಲಿ ಆರ್‌ಎಸ್‌ಎಸ್‌ನವರನ್ನು ಒಪ್ಪಿಸುತ್ತೇನೆ ಎಂದು ಶಿಕ್ಷಣ ಸಚಿವರು ಹೇಳಿದ್ದಾರೆ. ಒಪ್ಪಿಸಬೇಕಿರುವುದು ರಾಜ್ಯದ ಜನರು, ಶಿಕ್ಷಕರು, ವಿದ್ವಾಂಸರು, ಶಿಕ್ಷಣ ತಜ್ಞರನ್ನು

ಎಚ್. ವಿಶ್ವನಾಥ್, ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ

ಮುತಾಲಿಕ್‌ಗೆ ಬೆದರಿಕೆ ಕರೆ

ಧಾರವಾಡ: ಶ್ರೀರಾಮ ಸೇನೆಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಹಾಗೂ ಬಿಜೆಪಿ ಮುಖಂಡ ಯಶ್‌ಪಾಲ್ ಸುವರ್ಣ ಅವರ ತಲೆ ಕಡಿದವರಿಗೆ ₹10 ಲಕ್ಷ ಕೊಡುವುದಾಗಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹರಿದಾಡುತ್ತಿದೆ. ಇದರೊಂದಿಗೆ, ಎರಡು ಬೆದರಿಕೆ ಕರೆಗಳು ಬಂದಿವೆ ಎಂದು ಮುತಾಲಿಕ್ ಹೇಳಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಪ್ರಮೋದ ಮುತಾಲಿಕ್, 'ದೇವಾಲಯಗಳ ರಕ್ಷಣೆ ಹಾಗೂ ಹಿಂದೂಗಳ ಪರವಾಗಿ ಧ್ವನಿ ಎತ್ತಿರುವುದಕ್ಕೆ ಎರಡು ಬೆದರಿಕೆ ಕರೆಗಳು ಬಂದಿವೆ. ಇಂಥ ಬೆದರಿಕೆಗೆ ಬಗ್ಗಲ್ಲ. ಹಿಂದೆಯೂ ಇಂಥ ಕರೆಗಳು ಬಂದಿದ್ದವು. ಗುರುವಾರ ಕಮಿಷನರ್ ಕಚೇರಿಗೆ ದೂರು ನೀಡಲಾಗುವುದು' ಎಂದರು.

'ಮೊದಲು ಕೋರ್ಟ್ ಆದೇಶ ಪಾಲಿಸಿ, ದೇವಸ್ಥಾನ ಕೆಡವಿ ಮಸೀದಿ ಕಟ್ಟಿದ್ದನ್ನು ವಾಪಸ್ ಕೊಡಿ. ನಮ್ಮ ದೇಶ ಭಕ್ತಿಯ ಕಾರ್ಯವನ್ನು ಇನ್ನೂ ಪ್ರಖರವಾಗಿ ಹಾಗೂ ಗಟ್ಟಿಯಾಗಿ ಮಾಡುತ್ತೇವೆ. ತಾಕತ್ತಿದ್ದರೆ ತಡೆದು ನೋಡಿ' ಎಂದರು.

ಸದ್ಯದಲ್ಲೇ 'ಸುರಕ್ಷಣಿ' ವೆಬ್ ಪೋರ್ಟಲ್ ಬಿಡುಗಡೆ

'ಬಾಲ್ಯ ವಿವಾಹ ತಡೆಗೆ ಕೈಜೋಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಲ್ಯ ವಿವಾಹದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ರಾಜ್ಯದಾದ್ಯಂತ ಪ್ರತಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುವ ಸ್ವಸಹಾಯ ಸಂಘ ಸಂಸ್ಥೆಗಳು ಇಲಾಖೆಯೊಂದಿಗೆ ಕೈಜೋಡಿಸಬೇಕು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕಿ ಪ್ರಿಯಾಂಕ ಮೇರಿ ಫ್ರಾನ್ಸಿಸ್ ಕರೆ ನೀಡಿದರು.

ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಬುಧವಾರ ನಡೆದ 'ಬಾಲ್ಯವಿವಾಹಗಳ ತಡೆ: ನಾಗರಿಕ ಸಂಸ್ಥೆಗಳ ಪಾತ್ರ' ಎಂಬ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು. ರಾಷ್ಟ್ರೀಯ ಆರೋಗ್ಯ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ಶೇ 21.4ರಷ್ಟು ಮಂದಿ ಬಾಲ್ಯ ವಿವಾಹಕ್ಕೆ ಒಳಪಟ್ಟಿದ್ದಾರೆ. ಇದು ಪರೋಕ್ಷವಾಗಿ ರಾಜ್ಯದ ಬೆಳವಣಿಯನ್ನು ಕುಂಠಿತಗೊಳಿಸುತ್ತದೆ' ಎಂದು ತಿಳಿಸಿದರು.

ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಬುಧವಾರ ನಡೆದ 'ಬಾಲ್ಯವಿವಾಹಗಳ ತಡೆ: ನಾಗರಿಕ ಸಂಸ್ಥೆಗಳ ಪಾತ್ರ' ರಾಜ್ಯ ಮಟ್ಟದ ಸಭೆಯಲ್ಲಿ 10ನೇ ತರಗತಿಯಲ್ಲಿ ಬಾಲ್ಯ ವಿವಾಹವಾದ ಬಾಗಲಕೋಟೆಯ ಲಕ್ಷ್ಮಿ ತಮ್ಮ ಅನುಭವವನ್ನು ಹಂಚಿಕೊಂಡರು

'ಅಪ್ರಾಪ್ತ ವಯಸ್ಸಿಗೆ ವಿವಾಹವಾದರೆ ಗರ್ಭಿಣಿಯಾದಾಗ ರಕ್ತಹೀನತೆ, ಶಿಶು ಮರಣ ಹೆಚ್ಚಾಗುವ ಸಾಧ್ಯತೆ ಇದೆ. ಇದರಿಂದ ಮಾನಸಿಕ ಸ್ಥೈರ್ಯ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು. ಬಾಲ್ಯ ವಿವಾಹ ಅಪರಾಧವಾಗಿದ್ದು, ಗ್ರಾಮೀಣ ಭಾಗದಲ್ಲಿ ಮಹಿಳಾ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಬೇಕು' ಎಂದರು.

'ನಮ್ಮ ಇಲಾಖೆ ಡಿಡಿಗಳಲ್ಲಿ ಬಾಲ್ಯ ವಿವಾಹಗಳನ್ನು ತಡೆದು ಯಾವ ರೀತಿ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಕುರಿತು ಸರಿಯಾದ ಮಾಹಿತಿ ಇಲ್ಲ. ಆದ್ದರಿಂದ ಎಲ್ಲರಿಗೂ ಸರಿಯಾದ ತರಬೇತಿಯ ಅಗತ್ಯವಿದೆ' ಎಂದರು.

ಸದ್ಯದಲ್ಲೇ ಇಲಾಖೆಯಿಂದ ಸುರಕ್ಷಣಿ ಎಂಬ ವೆಬ್ ಪೋರ್ಟಲ್ ಬಿಡುಗಡೆಗೊಳಿಸುತ್ತಿದ್ದು, ರಾಜ್ಯದ ಯಾವುದೇ ಭಾಗದಲ್ಲಿ ಬಾಲ್ಯ ವಿವಾಹ ತಡೆದರೆ ಮತ್ತು ನಡೆದರೆ ಆ ಕುರಿತು ನಿಖರ ಮಾಹಿತಿ ಇದರಲ್ಲಿ ಲಭ್ಯವಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಶಿಧರ್ ಶೆಟ್ಟಿ ಮಾತನಾಡಿ, 'ವಿದ್ಯಾರ್ಥಿಗಳಿಗೆ ಬಾಲ್ಯ ವಿವಾಹ ನಿಷೇಧ ಕಾಯ್ದೆ ಹಾಗೂ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳ ತಡೆ ಕಾಯ್ದೆ ಕುರಿತು ಮಾಹಿತಿ ನೀಡಿ ಕಾನೂನು ಅರಿವಿನ ಬಗ್ಗೆ ಜ್ಞಾನ ಮೂಡಿಸಬೇಕು' ಎಂದರು.

ರಾಘವೇಂದ್ರ ಎಚ್.ಸಿ, ಸರಸ್ವತಿ, ಎಜಿಕಲ್ ಕಲವಳ್ಳಿ, ಚಿತ್ರಾ ಅಂಚನ್, ಮಂಜುಳಾ.ವಿ, ವಾಸುದೇವ ಶರ್ಮ. ಎನ್.ವಿ ಇದ್ದರು.

ಅಮೃತರಾಜ್ ವಿರುದ್ಧದ ಕೊಲೆ ಯತ್ನ ಪ್ರಕರಣ: ಹೈಕೋರ್ಟ್ ಸೂಚನೆ

‘ಸಿ ರಿಪೋರ್ಟ್ ಸಲ್ಲಿಸಿದಾಕ್ಷಣ ಮುಗೀತು ಅಂತಲ್ಲ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಮೃತರಾಜ್ ಬಿಬಿಎಂಪಿ ನೌಕರರ ಸಂಘದ ಅಧ್ಯಕ್ಷ
- ಮುಖ್ಯ ಶಿಕ್ಷಕನ ಮೂರು ಹಲ್ಲು ಮುರಿಯುವಂತೆ ಹಲ್ಲೆ
- ಹತ್ತು ವರ್ಷಗಳಷ್ಟು ಹಳೆಯ ಪ್ರಕರಣ

ಎ,ಬಿ,ಸಿ ರಿಪೋರ್ಟ್ ಹೇಳುವುದೇನು?

ಯಾವುದೇ ಕ್ರಿಮಿನಲ್ ಪ್ರಕರಣದ ತನಿಖೆಯ ಕೊನೆಯ ಭಾಗವಾಗಿ ಅಂತಿಮ ವರದಿಯನ್ನು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಸಲ್ಲಿಸಲಾಗುತ್ತದೆ.

- ಆರೋಪ ಸಾಬೀತುಪಡಿಸುವ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದ್ದರೆ ಆರೋಪಿಯ ವಿರುದ್ಧ ದೋಷಾರೋಪಣ ವರದಿ (ಎ ಅಂತಿಮ ವರದಿ) ಸಲ್ಲಿಸಲಾಗುತ್ತದೆ.
- ಆರೋಪಿ ವಿರುದ್ಧ ನೀಡಿರುವ ದೂರು ಸುಳ್ಳು ಅಥವಾ ಸೂಕ್ತ ಸಾಕ್ಷಾಧಾರ ಲಭ್ಯವಾಗಿಲ್ಲ ಎಂದಾರೆ ‘ಬಿ’ ಅಂತಿಮ ವರದಿಯನ್ನು ಸಲ್ಲಿಸಲಾಗುತ್ತದೆ.
- ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿಯ ಪತ್ತೆ ಸಾಧ್ಯವಾಗದೇ ಇದ್ದಾಗ ‘ಸಿ’ ಅಂತಿಮ ವರದಿಯನ್ನು ಸಲ್ಲಿಸಲಾಗುತ್ತದೆ.

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಮತ್ತು ನೌಕರರ ಸಂಘದ ಅಧ್ಯಕ್ಷ ಎ. ಅಮೃತರಾಜ್ ವಿರುದ್ಧ ಹೂಡಲಾಗಿರುವ ಕೊಲೆ ಯತ್ನ ಮತ್ತು ಜೀವ ಬೆದರಿಕೆ ಆರೋಪದ ಪ್ರಕರಣದಲ್ಲಿ ಪೊಲೀಸರು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹಾಜರಾಗಲು ಸಮನ್ಸ್ ಜಾರಿಗೊಳಿಸಿರುವುದನ್ನು ರದ್ದುಗೊಳಿಸಬೇಕು ಎಂದು ಕೋರಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಪೂರ್ವ ನಿದರ್ಶನಗಳನ್ನು ನ್ಯಾಯಾಲಯಕ್ಕೆ ಪ್ರಸ್ತುತಪಡಿಸಿ’ ಎಂದು ದೂರುದಾರರ ಪರ ವಕೀಲರಿಗೆ ಹೈಕೋರ್ಟ್ ಸೂಚಿಸಿದೆ.

‘ನನ್ನ ವಿರುದ್ಧ ಯಶವಂತಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕೊಲೆಯತ್ನ, ಜೀವ ಬೆದರಿಕೆ ಆರೋಪದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಅಮೃತರಾಜ್ ಅವರು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನ ಗೌಡರ ಅವರಿದ್ದ ಏಕಸದಸ್ಯ ನ್ಯಾಯ ಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಮೃತರಾಜ್ ಪರ ವಾದ ಮಂಡಿಸಿದ ಹಿರಿಯ ವಕೀಲ ಹಷ್ಮತ್ ಪಾಷ, ‘ಈ ಪ್ರಕರಣದಲ್ಲಿ ಈಗಾಗಲೇ ಯಶವಂತಪುರ ಮತ್ತು ಆರ್‌ಎಂಸಿ ಯಾರ್ಡ್ ಪೊಲೀಸರು ಎರಡು ಬಾರಿ ‘ಸಿ’ ರಿಪೋರ್ಟ್ ಸಲ್ಲಿಸಿದ್ದಾರೆ. ನ್ಯಾಯಾಲಯದ ಆದೇಶವಿಲ್ಲದೆ ಪ್ರಕರಣದ ಮುಂದುವರಿದ ತನಿಖೆಯನ್ನು ಕೈಗೊಂಡು ಆರೋಪಿಯ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿರುವುದು ಕಾನೂನುಬಾಹಿರ. ಆದ್ದರಿಂದ ಪ್ರಕರಣವನ್ನು ರದ್ದುಗೊಳಿಸಬೇಕು’ ಎಂದು ಕೋರಿದರು.

ಇದನ್ನು ಬಲವಾಗಿ ಅಲ್ಲಗಳೆದ ದೂರುದಾರರೂ ಆದ ಪ್ರತಿವಾದಿ ಬಿ.ಆರ್.ಮುರಳೀಧರ ಪರ ವಾದ ಮಂಡಿಸಿದ ವಕೀಲ ಸಿ.ಎಚ್.ಹನುಮಂತರಾಯ, ‘ಸಿ ರಿಪೋರ್ಟ್ ಸಲ್ಲಿಸಿದ ಮಾತ್ರಕ್ಕೆ ಪ್ರಕರಣ ಮುಕ್ತಾಯವಾಗಿದೆ ಎಂದರ್ಥವಲ್ಲ. ಕರ್ನಾಟಕ ಪೊಲೀಸ್ ಮ್ಯಾನುಯಲ್ ಅನುಸಾರ ಅಂತಿಮ ‘ಸಿ’ ವರದಿ ಸಲ್ಲಿಸಿದ ಪ್ರಕರಣದಲ್ಲಿ ತನಿಖಾಧಿಕಾರಿಗೆ ಯಾವುದಾದರೂ ಸಾಕ್ಷ್ಯ ಲಭಿಸಿದಲ್ಲಿ ನ್ಯಾಯಾಲಯದ ಅನುಮತಿ ಇಲ್ಲದೆ ಸ್ವಯಂ ಅಥವಾ ಮೇಲಧಿಕಾರಿಯ ಆದೇಶದ ಮೇರೆಗೆ ತನಿಖೆ ಮುಂದುವರೆಸಬಹುದು’ ಎಂದರು.

‘ಬಿ ರಿಪೋರ್ಟ್ ಸಲ್ಲಿಸಿದಾಗ ಮಾತ್ರ ಪ್ರಕರಣ ಮುಕ್ತಾಯವಾಗಿದೆ ಎಂದರ್ಥ. ಮುಂದುವರೆದ ತನಿಖೆಗೆ ನ್ಯಾಯಾಲಯದ ಅನುಮತಿಯ ಅಗತ್ಯವಿರುತ್ತದೆ. ಆದರೆ, ಸಿ ಅಂತಿಮ ವರದಿ ಸಲ್ಲಿಸಿದಾಗ ಅದರ ಅಗತ್ಯವಿಲ್ಲ ಎಂಬುದನ್ನು ಕರ್ನಾಟಕ ಪೊಲೀಸ್ ಮ್ಯಾನುಯಲ್ ಸೂಚಿಸುತ್ತದೆ’ ಎಂದು ವಿವರಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಪೂರ್ವ ನಿದರ್ಶನಗಳು ಏನು ಹೇಳುತ್ತವೆ ಎಂಬ ವರದಿಗಳನ್ನು ಪ್ರಸ್ತುತಪಡಿಸಿ’ ಎಂದು ವಕೀಲ ಸಿ.ಎಚ್.ಹನುಮಂತರಾಯ ಅವರಿಗೆ ಸೂಚಿಸಿ ವಿಚಾರಣೆಯನ್ನು ಜೂನ್ 22ಕ್ಕೆ ಮುಂದೂಡಿತು.

ಪ್ರಕರಣವೇನು?: ಮತ್ತೀಕೆರೆಯ ಬಿಬಿಎಂಪಿ ಬಾಲಕಿಯರ ಪ್ರೌಢಶಾಲೆಯಲ್ಲಿ ಉಸ್ತುವಾರಿ ಮುಖ್ಯ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಬಿ.ಆರ್. ಮುರಳೀಧರ ಅವರು, ಅಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಪರಿವೀಕ್ಷಕ ಹಾಗೂ ಉಪವಿಭಾಗಾಧಿಕಾರಿ ಕಚೇರಿಯ ಜಾಹೀರಾತು ವಿಭಾಗದ ನೌಕರರಾಗಿದ್ದ ಅಮೃತರಾಜ್ ತಮ್ಮ ಮೇಲೆ ಕ್ರಿಕೆಟ್ ಬ್ಯಾಟ್‌ನಿಂದ ಹಲ್ಲೆ ಮಾಡಿ ಮೂರು ಹಲ್ಲುಗಳನ್ನು ಮುರಿದು, ಕೊಲೆಯತ್ನ ನಡೆಸಿ ಜೀವ ಬೆದರಿಕೆ ಒಡ್ಡಿದ್ದಾರೆ ಎಂದು ಪ್ರಕರಣ ದಾಖಲಿಸಿದ್ದರು.

ಈ ಘಟನೆ ನಡೆದ ಸಂದರ್ಭದಲ್ಲಿ ಅಮೃತರಾಜ್ ಅವರು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘದ ನಿರ್ದೇಶಕರಾಗಿದ್ದರು.

‘ರಾಜ್ಯಮಟ್ಟದಲ್ಲಿ ಕಯ್ಯಾರರ ಜನ್ಮ ದಿನಾಚರಣೆ’

ಪ್ರಜಾವಾಣಿ ವಾರ್ತೆ

ಕಯ್ಯಾರ ಕಿಞ್ಞಣ್ಣ ರೈ ಅವರ ಭಾವಚಿತ್ರಕ್ಕೆ ಸಿ. ಸೋಮಶೇಖರ ಮತ್ತು ಪ್ರೊ.ಕೆ.ಇ. ರಾಧಾಕೃಷ್ಣ ಪುಷ್ಪನಮನ ಸಲ್ಲಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ, ಕಿಕ್ಕೇರಿ ಕೃಷ್ಣಮೂರ್ತಿ ಇದ್ದರು.

ಬೆಂಗಳೂರು: ಕರ್ನಾಟಕದ ಏಕೀಕರಣದ ಹೋರಾಟಗಾರ, ಗಡಿನಾಡು ಕಾಸರಗೋಡಿನ ‘ಕನ್ನಡದ ಕಿಡಿ’ ಎಂದೇ ಗುರುತಿಸಿಕೊಂಡಿದ್ದ ಸಾಹಿತಿ ಕಯ್ಯಾರ ಕಿಞ್ಞಣ್ಣ ರೈ ಅವರ ಜನ್ಮದಿನವನ್ನು ಪ್ರತಿವರ್ಷ ರಾಜ್ಯಮಟ್ಟದಲ್ಲಿ ಆಚರಿಸಲು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ನಿರ್ಧರಿಸಿದೆ.

ಪ್ರಾಧಿಕಾರದ ಸಭಾಂಗಣದಲ್ಲಿ ಬುಧವಾರ ನಡೆದ ರೈ ಅವರ 107ನೇ ಜನ್ಮದಿನಾಚರಣೆ ವೇಳೆ ಈ ವಿಷಯ ತಿಳಿಸಿದ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ, ‘ಕಯ್ಯಾರ ಕಿಞ್ಞಣ್ಣ ರೈ ಕೇರಳದಲ್ಲಿ ಕನ್ನಡದ ಕಹಳೆ ಊದಿದ ಅಪ್ರತಿಮ ಕಟ್ಟಾಳು ಆಗಿದ್ದರು. ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂಬ ದಿಸೆಯಲ್ಲಿ ಅವರ ಹೋರಾಟ ಐತಿಹಾಸಿಕ’ ಎಂದರು.

‘ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ರೈ ಕ್ರಿಯಾಶೀಲ ಪಾತ್ರ ವಹಿಸಿದ್ದರು. ಪ್ರಾಧಿಕಾರ ಅವರ ಹೆಸರಿನಲ್ಲಿ ಪ್ರಸಕ್ತ ಸಾಲಿನಿಂದ ‘ಗಡಿನಾಡ ಚೇತನ’ ಎಂಬ ರಾಜ್ಯಮಟ್ಟದ ಪ್ರಶಸ್ತಿ ಸ್ಥಾಪಿಸಿದೆ. ಅವರ ಜನ್ಮದಿನವನ್ನು ಮುಂದಿನ ವರ್ಷದಿಂದ ದೊಡ್ಡ ಪ್ರಮಾಣದಲ್ಲಿ ಪ್ರಾಧಿಕಾರದ ವತಿಯಿಂದ ಆಯೋಜಿಸಲಾಗುವುದು. ಅಲ್ಲದೆ, ಕರ್ನಾಟಕದ ಏಕೀಕರಣದ ಕುರಿತು ಅವರು ಬರೆದ ಲೇಖನಗಳು, ರಚಿಸಿದ ಕವನಗಳನ್ನು ಒಂದೆಡೆ ಸಂಗ್ರಹಿಸಿ ಪ್ರಾಧಿಕಾರದ ವತಿಯಿಂದಲೇ ಪ್ರಕಟಿಸಲಾಗುವುದು’ ಎಂದು ಹೇಳಿದರು.

ಪ್ರೊ. ಕೆ.ಇ. ರಾಧಾಕೃಷ್ಣ ಕೂಡ ರೈ ಅವರ ಸಾಧನೆ, ಹೋರಾಟದ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಕನಕಪೀಠದ ಅಧ್ಯಕ್ಷ ಸತ್ಯನಾರಾಯಣ ಅವರಿಂದ ಗಮಕ ವಾಚನ, ಸುಗಮ ಸಂಗೀತ ಪರಿಷತ್ತಿನ ಕಿಕ್ಕೇರಿ ಕೃಷ್ಣಮೂರ್ತಿ ಅವರಿಂದ ರೈ ಅವರು ರಚಿಸಿದ ಕವನಗಳ ವಾಚನ ನಡೆಯಿತು.

ಕೈಚೀಲಕ್ಕೆ ನಕಾರ: ₹ 15 ಸಾವಿರ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಟೇಷನರಿ ವಸ್ತು ಖರೀದಿಸಿದ ಗ್ರಾಹಕರೊಬ್ಬರಿಗೆ ಉಚಿತ ಕೈಚೀಲ ನೀಡಲು ನಿರಾಕರಿಸಿ, ಪ್ರತ್ಯೇಕ ಶುಲ್ಕ ವಿಧಿಸಿದ ಗಾಂಧಿನಗರದ ಪ್ರಖ್ಯಾತ ಮಾರಾಟ ಮಳಿಗೆದಾರರಿಗೆ ಬೆಂಗಳೂರಿನ 4ನೇ ಹೆಚ್ಚುವರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ₹ 15 ಸಾವಿರ ಪರಿಹಾರ ದಂಡದ ರೂಪದಲ್ಲಿ ವಿಧಿಸಿದೆ.

ಈ ಕುರಿತಂತೆ ಗಾಂಧಿನಗರ ನಿವಾಸಿ ವಕೀಲ ವಿ.ಕಾಂತರಾಜ್ ಸಲ್ಲಿಸಿದ್ದ ದೂರಿನ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷ ಎಂ.ಎಸ್. ರಾಮಚಂದ್ರ ಹಾಗೂ ಸದಸ್ಯರಾದ ನಂದಿನಿ ಎಚ್.ಕುಂಬಾರ ಮತ್ತು ಚಂದ್ರಶೇಖರ ಎಸ್.ನೂಲಾ ಅವರಿದ್ದ ಪೀಠವು 2022ರ ಮೇ 16ರಂದು ತನ್ನ ಆದೇಶ ಪ್ರಕಟಿಸಿದೆ.

ದೂರುದಾರ ಕಾಂತರಾಜ್ ತಮ್ಮ ಸ್ನೇಹಿತರ ಜೊತೆ 2019ರ ಡಿಸೆಂಬರ್ 17ರಂದು ಮಳಿಗೆಯಲ್ಲಿ ಒಂಬತ್ತು ಬಗೆಯ ವಿವಿಧ ನಿತ್ಯ ಉಪಯೋಗಿ ಸಾಮಾನುಗಳನ್ನು ಖರೀದಿಸಿದ್ದರು. ಇದಕ್ಕೆ ₹ 775 ಪಾವತಿಸಿದ್ದರು. ಸಾಮಾನುಗಳನ್ನು ಭರ್ತಿ ಮಾಡಿ ಒಯ್ಯಲು ಕೈಚೀಲ ಕೇಳಿದ್ದಕ್ಕೆ ಅಂಗಡಿಯವರು ಉಚಿತವಾಗಿ ನೀಡಲು ನಿರಾಕರಿಸಿದ್ದರು. ಈ ಧೋರಣೆಯನ್ನು ಪ್ರತಿಭಟಿಸಿದಾಗ್ಯೂ ಪ್ರತ್ಯೇಕವಾಗಿ ₹ 16 ಶುಲ್ಕ ವಿಧಿಸಿದ್ದರು.

ಇದರ ವಿರುದ್ಧ ಕಾಂತರಾಜ್ ಆಯೋಗಕ್ಕೆ 2019ರ ಡಿಸೆಂಬರ್ 21ರಂದು ದೂರು ನೀಡಿದ್ದರು. ವಿಚಾರಣೆ ನಡೆಸಿದ ಆಯೋಗವು ಗ್ರಾಹಕರ ರಕ್ಷಣಾ ಕಾಯ್ದೆ–1986ರ ಕಲಂ 12ರ ಅನುಸಾರ; ದೂರುದಾರರಿಗೆ ₹ 16, ಕೈಚೀಲ ನೀಡಲು ನಿರಾಕರಿಸಿದ್ದಕ್ಕೆ ₹ 5 ಸಾವಿರ, ಗ್ರಾಹಕರಿಗೆ ನೀಡಲಾಗುವ ಸೇವೆಯಲ್ಲಿ ಉಂಟಾದ ವ್ಯತ್ಯಯಕ್ಕೆ ₹ 3 ಸಾವಿರ, ದೂರುದಾರರಿಗೆ ಆಗಿರುವ ಮಾನಸಿಕ ನೋವು ಮತ್ತು ದಾವೆಗೆ ತಗುಲಿದ ವೆಚ್ಚಕ್ಕೆ ₹ 2 ಸಾವಿರ ಹಾಗೂ ಗ್ರಾಹಕ ಕಾನೂನು ಸೇವೆಗಳ ನೆರವಿಗೆ ₹ 5 ಸಾವಿರ ಸೇರಿ ಒಟ್ಟು 15,061 ಮೊತ್ತದ ಪರಿಹಾರ ನೀಡುವಂತೆ ಪ್ರತಿವಾದಿಗಳಿಗೆ ಆದೇಶಿಸಿದೆ.

‘ಆದೇಶ ಪ್ರಕಟವಾದ 45 ದಿನಗಳ ಒಳಗೆ ಈ ಪರಿಹಾರ ನೀಡಬೇಕು. ದೂರು ದಾಖಲಾದ ದಿನದಿಂದ ಪ್ರಾರಂಭಿಸಿ ಪರಿಹಾರ ವಿತರಿಸುವ ದಿನಕ್ಕೆ ಸರಿಯಾಗಿ ಒಟ್ಟು ಮೊತ್ತಕ್ಕೆ ವಾರ್ಷಿಕ ಶೇ 6ರಷ್ಟು ಬಡ್ಡಿ ನೀಡಬೇಕು’ ಎಂದು ಆದೇಶದಲ್ಲಿ ವಿವರಿಸಲಾಗಿದೆ. ದೂರುದಾರರ ಪರ ವಿ.ಶಿವಕುಮಾರ್ ವಾದ ಮಂಡಿಸಿದ್ದರು.

ಆವರಣ ಗೋಡೆಗೆ ಕಾರು ಡಿಕ್ಕಿ

ಬೆಂಗಳೂರು: ಕಿಮ್ಸ್‌ನ ವೈದ್ಯಕೀಯ ವಿದ್ಯಾರ್ಥಿ ಅತೀವೇಗವಾಗಿ ಕಾರು ಚಾಲನೆ ಮಾಡಿ ರಾಜಭವನ ಸಮೀಪ ಪ್ರಸಾರ ಭಾರತಿ (ಆಕಾಶವಾಣಿ) ಕೇಂದ್ರದ ಆವರಣ ಗೋಡೆಗೆ ಡಿಕ್ಕಿ ಹೊಡೆದಿರುವ ಘಟನೆ ಕಬ್ಬನ್ ಪಾರ್ಕ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಘಟನೆ ಸಂಬಂಧ ಮಲ್ಲೇಶ್ವರ ನಿವಾಸಿ ಶ್ರೀವತ್ಸ (22) ಎಂಬಾತನನ್ನು ವಿಚಾರಣೆ ನಡೆಸಿ, ನೋಟಿಸ್ ಕೊಟ್ಟು ಕಳುಹಿಸಲಾಗಿದೆ. ಕಾರಿನ ಏರ್ ಬ್ಯಾಗ್ ತೆರೆದುಕೊಂಡ ಕಾರಣ ಅದೃಷ್ಟವಶಾತ್ ಪ್ರಾಣಪಾಯದಿಂದ ಪಾರಾಗಿದ್ದಾನೆ.

ಮಂಗಳವಾರ ರಾತ್ರಿ ಸ್ನೇಹಿತರ ಜತೆ ಮದ್ಯದ ಪಾರ್ಟಿ ಮಾಡಿದ್ದ ಶ್ರೀವತ್ಸ, ಒಬ್ಬನೇ ಕಾರು ಚಾಲನೆ ಮಾಡಿಕೊಂಡು ಬಂದಿದ್ದಾನೆ. ಅರಮನೆ ರಸ್ತೆಯಿಂದ ಬರುವಾಗ ಡಿಕ್ಕಿ ಹೊಡೆದಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಮೆಟ್ರೊ: ಕ್ಯೂಆರ್ ಕೋಡ್ ಆಧಾರಿತ ಮೊಬೈಲ್ ಟಿಕೆಟ್

ಬೆಂಗಳೂರು: ಮೆಟ್ರೊ ರೈಲು ಪ್ರಯಾಣಿಕರಿಗೆ ಕ್ಯೂಆರ್ ಕೋಡ್ ಆಧಾರಿತ ಟಿಕೆಟ್ ಒದಗಿಸಲು ಬಿಎಂಆರ್‌ಸಿಎಲ್ ಸಜ್ಜಾಗಿದೆ. ಪೇಟಿಎಂ ಮೊಬೈಲ್ ಆ್ಯಪ್ ಮೂಲಕ ಕ್ಯೂಆರ್ ಕೋಡ್ ಟಿಕೆಟ್ ಪಡೆದುಕೊಂಡರೆ ಅದನ್ನು ಆಟೋಮ್ಯಾಟಿಕ್ ಫೇರ್ ಕಲೆಕ್ಷನ್ ಗೇಟ್ ಬಳಿ ಸ್ಕ್ಯಾನ್ ಮಾಡಬಹುದು. ಈ ಸಂಬಂಧ ಪೇಟಿಎಂ ಜತೆಗೆ ಮಾತುಕತೆಯನ್ನೂ ಬಿಎಂಆರ್‌ಸಿಎಲ್ ನಡೆಸಿದೆ.

ಕ್ಯೂಆರ್ ಕೋಡ್‌ಗೆ ಒಂದು ದಿನ ಮಾತ್ರ ಮಾನ್ಯತೆ ಇರುತ್ತದೆ. ಪ್ರಯಾಣಿಕರು ಸರದಿಯಲ್ಲಿ ನಿಲ್ಲುವುದನ್ನು ತಪ್ಪಿಸಲು ಈ ವ್ಯವಸ್ಥೆ ಜಾರಿಗೆ ತರಲು ಯೋಚಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

ಮೆಟ್ರೊ ರೈಲಿನಲ್ಲಿ ಸೈಕಲ್‌ಗೆ ಅವಕಾಶ

ಬೆಂಗಳೂರು: ಮೆಟ್ರೊ ರೈಲಿನ ಕೊನೆಯ ಬೋಗಿಯಲ್ಲಿ, ಮಡಿಸಬಹುದಾದ ಸೈಕಲ್ ಕೊಂಡೊಯ್ಯಲು ಅವಕಾಶ ಇದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ತಿಳಿಸಿದೆ.

‘15 ಕೆ.ಜಿ ತೂಕ ಮೀರದ ಸೈಕಲ್ ಕೊಂಡೊಯ್ಯಬಹುದು. ನಿಲ್ದಾಣ ಪ್ರವೇಶದ ಸಂದರ್ಭದಲ್ಲಿ ಬ್ಯಾಗೇಜ್ ಸ್ಕ್ಯಾನರ್ ಮೂಲಕ ಭದ್ರತಾ ತಪಾಸಣೆಗೆ ಒಳಪಡಿಸಬೇಕು. ಮೆಟ್ರೊ ಬೋಗಿಯ ಒಳಭಾಗದಲ್ಲಿ ಹಾನಿಯಾಗದಂತೆ, ಸಹ ಪ್ರಯಾಣಿಕರಿಗೆ ತೊಂದರೆ ಆಗದಂತೆ ನೋಡಿಕೊಂಡು ಪ್ಯಾಕ್ ಮಾಡಬೇಕು’ ಎಂದೂ ವಿವರಿಸಿದೆ. ಸೈಕಲ್ ಕೊಂಡೊಯ್ಯಲು ಯಾವುದೇ ಶುಲ್ಕ ಇಲ್ಲ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಉದ್ಯಮಿ ಶಿವಕುಮಾರ್ ವಿರುದ್ಧದ ದೂರು ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣಿ ವ್ಯವಹಾರಕ್ಕೆ ಸಂಬಂಧಿಸಿದಂತೆ ₹ 35 ಕೋಟಿ ಪಡೆದು ವಂಚಿಸಿದ ಹಾಗೂ ಭೂಗತ ಪಾತಕಿ ರವಿ ಪೂಜಾರಿ ಹೆಸರಿನಲ್ಲಿ ಜೀವ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧಿಸಿದಂತೆ ಉದ್ಯಮಿ ಆರ್.ಶಿವಕುಮಾರ್ ವಿರುದ್ಧ ಮಾಜಿ ಶಾಸಕ ಅನಿಲ್ ಲಾಡ್ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದ ದೂರನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ಆರ್. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಪಿ.ಪಿ. ಹೆಗ್ಡೆ, ‘ಪ್ರಕರಣವು ಸಂಪೂರ್ಣ ಸಿವಿಲ್ ಸ್ವರೂಪದ್ದಾಗಿದೆ. ಅನಿಲ್ ಲಾಡ್ ಸುಳ್ಳು ದೂರು ದಾಖಲಿಸಿದ್ದಾರೆ. ಈ ವಿಷಯದಲ್ಲಿ ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಅಧಿಕಾರವಿಲ್ಲ. ಅಂತೆಯೇ, ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿದ್ದು, ಈ ಕಾಯ್ದೆ ಅನ್ವಯವೇ ಆಗುವುದಿಲ್ಲ. ಆದ್ದರಿಂದ, ಅರ್ಜಿದಾರರ ವಿರುದ್ಧದ ದೂರನ್ನು ರದ್ದುಪಡಿಸಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿದಾರರ ವಿರುದ್ಧದ ದೂರು ರದ್ದುಪಡಿಸಿ ಆದೇಶಿಸಿದೆ.

ಪ್ರಕರಣವೇನು?: ‘ಗಣಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಶಿವಕುಮಾರ್ ನನ್ನಿಂದ ₹ 35 ಕೋಟಿ ಪಡೆದು ಹಿಂದಿರುಗಿಸದೆ ವಂಚಿಸಿದ್ದಾರೆ. ಹಣ ಹಿಂದಿರುಗಿಸಲು ಸೂಚಿಸಿದಾಗ ನನ್ನ ಕೊಲೆಗೆ ಸುಪಾರಿ ನೀಡುವುದಾಗಿ ಬೆದರಿಕೆ ಹಾಕಿದ್ದಾರೆ’ ಎಂದು ಅನಿಲ್ ಲಾಡ್ ಅವರು ಆರ್.ಶಿವಕುಮಾರ್ ವಿರುದ್ಧ 2018ರ ಡಿಸೆಂಬರ್ 6ರಂದು ಹೈಗ್ರೌಂಡ್ಸ್ ಠಾಣೆ ಪೊಲೀಸರಿಗೆ ದೂರು ನೀಡಿದ್ದರು.

ಅಂತೆಯೇ, 2018ರ ಡಿಸೆಂಬರ್ 5ರಂದು ರಾತ್ರಿ 8.24ಕ್ಕೆ ನನ್ನ ಮೊಬೈಲ್‌ಗೆ ಭೂಗತ ಪಾತಕಿ ರವಿ ಪೂಜಾರಿ ಹೆಸರಿನಲ್ಲಿ ಮೆಸೇಜ್ ಬಂದಿದೆ ಎಂದು ತಿಳಿಸಿ ಮೆಸೇಜ್‌ನಲ್ಲಿ, ‘ಶಿವಕುಮಾರ್‌ಗೆ ನೀಡಿರುವ ಹಣ ಮರೆತುಬಿಡು. ಇಲ್ಲವಾದರೆ ಗುಂಡಿಕ್ಕಿ ಸಾಯಿಸಲಾಗುವುದು. ಇದು ನಿನಗೆ ಎಚ್ಚರಿಕೆ; ಭೂಗತ ದೊರೆ ರವಿ ಪೂಜಾರಿ’ ಎಂದು ತಿಳಿಸಲಾಗಿತ್ತು ಎಂದು ದೂರಿನಲ್ಲಿ ಅನಿಲ್ ಲಾಡ್ ಆರೋಪಿಸಿದ್ದರು. ಈ ದೂರು ಆಧರಿಸಿ ಪೊಲೀಸರು ಶಿವಕುಮಾರ್ ವಿರುದ್ಧ ಜೀವ ಬೆದರಿಕೆ ಆರೋಪ ಮತ್ತು ಮಾಹಿತಿ ತಂತ್ರಜ್ಞಾ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದರು.

ಕಲಬುರಗಿ–ಬೆಂಗಳೂರು: ಹಗಲಿನಲ್ಲಿ ರಾಜಹಂಸ ಬಸ್ ಸೇವೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಪ್ರಯಾಣಿಕರ ಬೇಡಿಕೆ ಮೇರೆಗೆ ಕಲಬುರಗಿ ಮತ್ತು ಬೆಂಗಳೂರು ನಡುವೆ ಹಗಲು ಪ್ರಯಾಣಕ್ಕೆ ಜೂನ್ 9ರಿಂದ ನೂತನ ರಾಜಹಂಸ ಬಸ್ ಸೇವೆ ಆರಂಭವಾಗಲಿದೆ’ ಎಂದು ಕಲಬುರಗಿ ವಿಭಾಗ–1ರ ವಿಭಾಗೀಯ ನಿಯಂತ್ರಣಾಧಿಕಾರಿ ಸುನೀಲ ಕುಮಾರ ಚಂದರಗಿ ತಿಳಿಸಿದ್ದಾರೆ.

ಎರಡೂ ಕಡೆಯಿಂದಲೂ ಏಕಕಾಲಕ್ಕೆ ಬಸ್ ಸಂಚರಿಸಲಿವೆ. ಕಲಬುರಗಿಯಿಂದ ಬೆಳಿಗ್ಗೆ 6ಕ್ಕೆ ಹೊರಟು ಸಂಜೆ 7.10ಕ್ಕೆ ಬೆಂಗಳೂರು ತಲುಪುವುದು. ಅದೇ ಬಸ್ ಮರುದಿನ ಬೆಂಗಳೂರಿನಿಂದ ಬೆಳಿಗ್ಗೆ 6ಕ್ಕೆ ಹೊರಟು ಸಂಜೆ 7.10ಕ್ಕೆ ಕಲಬುರಗಿಗೆ ಬರಲಿದೆ.

ಯಾದಗಿರಿ ಜಿಲ್ಲೆಯ ಶಹಾಪುರ–ಬೆಂಗಳೂರು ಮಧ್ಯೆ ಸಂಚರಿಸುವ ಬಸ್ ಶಹಾಪುರದಿಂದ ಬೆಳಿಗ್ಗೆ 7.40ಕ್ಕೆ ಹೊರಟು ಸಂಜೆ 7.10ಕ್ಕೆ ಬೆಂಗಳೂರಿಗೆ ತಲುಪುವುದು. ಅದೇ ಬಸ್ ಮರುದಿನ ಬೆಂಗಳೂರಿನಿಂದ ಬೆಳಿಗ್ಗೆ 6ಕ್ಕೆ ಹೊರಟು ಸಂಜೆ 5.35ಕ್ಕೆ ಶಹಾಪುರಕ್ಕೆ ಬರುತ್ತದೆ.

ಬಳ್ಳಾರಿ–ಕಲಬುರಗಿ ಮಧ್ಯೆ ಸಂಚರಿಸುವ ಬಸ್ ಬಳ್ಳಾರಿಯಿಂದ ಮಧ್ಯಾಹ್ನ 12.30ಕ್ಕೆ ಹೊರಟು ಸಂಜೆ 7.10ಕ್ಕೆ ಕಲಬುರಗಿಗೆ ಬರಲಿದೆ ಎಂದು ಅವರು ತಿಳಿಸಿದ್ದಾರೆ.

‘ಗಡಿಯಲ್ಲಿ ಚೀನಾದಿಂದ ಮೂಲಸೌಕರ್ಯ ಅಭಿವೃದ್ಧಿ: ಆತಂಕಕಾರಿ’

ನವದೆಹಲಿ (ಪಿಟಿಐ): ಭಾರತದ ಲಡಾಖ್‌ಗೆ ಹೊಂದಿರುವ ತನ್ನ ಗಡಿಯಲ್ಲಿ ಚೀನಾ ರಕ್ಷಣಾ ಮೂಲಸೌಕರ್ಯ ಅಭಿವೃದ್ಧಿಪಡಿಸುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಅಮೆರಿಕ ಸೇನೆಯ ಹಿರಿಯ ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ.

ಭಾರತಕ್ಕೆ ಭೇಟಿ ನೀಡಿರುವ ಅಮೆರಿಕ ಸೇನೆಯ ಪೆಸಿಫಿಕ್ ಕಮಾಂಡ್‌ನ ಜನರಲ್ ಚಾರ್ಲ್ಸ್ ಎ.ಫ್ಲಿನ್ ಅವರು, ‘ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶವನ್ನು ಅಸ್ಥಿರಗೊಳಿಸಲು ಚೀನಾದ ಕಮ್ಯುನಿಸ್ಟ್ ಪಾರ್ಟಿ (ಸಿಸಿಪಿ) ಯತ್ನಿಸುತ್ತಿದೆ’ ಎಂದರು. ‘ಗಡಿಯಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುತ್ತಿರುವ ಉದ್ದೇಶ ಏನು ಎಂದು ಚೀನಾಕ್ಕೆ ಪ್ರಶ್ನಿಸಬೇಕಿದೆ’ ಎಂದರು.

ಪಿಜಿ ನೀಟ್‌ನಲ್ಲಿ 1,450 ಸೀಟು ಖಾಲಿ: 'ಸುಪ್ರೀಂ' ತರಾಟೆ

ನವದೆಹಲಿ (ಪಿಟಿಐ): 2021ರ ಪಿಜಿ 'ನೀಟ್'ನಲ್ಲಿ 1,450ಕ್ಕೂ ಹೆಚ್ಚು ಸೀಟುಗಳನ್ನು ಖಾಲಿ ಬಿಟ್ಟಿರುವುದಕ್ಕೆ ಬುಧವಾರ ಮೆಡಿಕಲ್ ಕೌನ್ಸೆಲಿಂಗ್ ಕಮಿಟಿಯನ್ನು (ಎಂಸಿಸಿ) ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್, ಇದು ಆಕಾಂಕ್ಷಿಗಳನ್ನು ತೊಂದರೆಗೆ ಸಿಲುಕಿಸುವುದಲ್ಲದೆ, ವೈದ್ಯರ ಕೊರತೆಗೂ ಕಾರಣವಾಗುತ್ತದೆ ಎಂದು ಹೇಳಿದೆ.

ಖಾಲಿ ಉಳಿದಿರುವ ಒಟ್ಟು ಸೀಟುಗಳು ಮತ್ತು ಅವುಗಳು ಅಭ್ಯರ್ಥಿಗಳಿಂದ ಏಕೆ ಭರ್ತಿಯಾಗಿಲ್ಲ ಎಂಬ ಕಾರಣಗಳನ್ನು ಸೂಚಿಸಿ, ಪ್ರಮಾಣ ಪತ್ರ ಸಲ್ಲಿಸಲು ಕೇಂದ್ರ ಮತ್ತು ಎಂಸಿಸಿಗೆ ಕೋರ್ಟ್ 24 ಗಂಟೆಗಳ ಕಾಲಾವಕಾಶ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಅನಿರುದ್ಧ ಬೋಸ್ ಅವರ ರಜಾಕಾಲದ ಪೀಠ, ಮತ್ತೊಂದು ಸುತ್ತಿನ ಕೌನ್ಸೆಲಿಂಗ್ ನಡೆಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸುತ್ತಿದೆ.

ಹೋಮ್‌ವರ್ಕ್ ಮಾಡದ ಮಗಳಿಗೆ ತಾಯಿಯಿಂದ ಸುಡುಬಿಸಿಲ ಶಿಕ್ಷೆ!

ನವದೆಹಲಿ (ಪಿಟಿಐ): ಐದು ವರ್ಷದ ಬಾಲಕಿಯನ್ನು ಸ್ವಂತ ತಾಯಿಯೇ ಚಾವಣಿ ಮೇಲೆ ಸುಡು ಬಿಸಿಲಿನಲ್ಲಿ ಮಲಗಿಸಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ಹೋಮ್‌ವರ್ಕ್ ಮಾಡದಿದ್ದಕ್ಕಾಗಿ ಮಗಳ ಕೈಕಾಲುಗಳನ್ನು ಕಟ್ಟಿ ಹಾಕಿ ಬಿಸಿಲಿನಲ್ಲಿ ಮಲಗಿಸಿ ಹಿಂಸಿಸಿರುವ ಆರೋಪ ಕೇಳಿಬಂದಿದೆ.

ದೆಹಲಿಯ ಖಜೂರಿ ಖಾಸ್ ಪ್ರದೇಶದಲ್ಲಿ ಜೂನ್ 2ರಂದು ಈ ಘಟನೆ ನಡೆದಿರುವುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ. ಬಾಲಕಿಯ ಕುಟುಂಬವನ್ನು ಪತ್ತೆ ಮಾಡಲಾಗಿದ್ದು, ಸೂಕ್ತ ಕ್ರಮ ಜರುಗಿಸುವುದಾಗಿ ದೆಹಲಿ ಪೊಲೀಸರು ತಿಳಿಸಿದ್ದಾರೆ.

ಪಕ್ಕದ ಮನೆಯ ಮಹಿಳೆಯೊಬ್ಬರು ಈ ವಿಡಿಯೊ ಚಿತ್ರೀಕರಿಸಿದ್ದಾರೆ.

ಒಬ್ಬ ಭಾರತೀಯ ಸೇರಿ 12 ರೋಗಿಗಳು ಸಂಪೂರ್ಣ ಗುಣಮುಖ

ಕ್ಯಾನ್ಸರ್: ಹೊಸ ಔಷಧ ಪ್ರಯೋಗ ಯಶಸ್ವಿ

ನವದೆಹಲಿ (ಪಿಟಿಐ): ಕ್ಯಾನ್ಸರ್ ಮಾರಣಾಂತಿಕ ಕಾಯಿಲೆ ಎನಿಸಿದೆ. ಆದರೆ, ಇಂತಹ ಕ್ಯಾನ್ಸರ್ ಅನ್ನೂ ಸಂಪೂರ್ಣ ಗುಣಪಡಿಸಲು ಸಾಧ್ಯವೆಂದು ಅಮೆರಿಕದಲ್ಲಿ ನಡೆದ ಅಪರೂಪದ ವೈದ್ಯಕೀಯ ಪ್ರಯೋಗದಿಂದ ಸಾಬೀತಾಗಿದೆ. ಈ ಫಲಿತಾಂಶ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಆಶಾಕಿರಣ ಮೂಡಿಸಿದೆ.

ವಿಜ್ಞಾನಿಗಳು 'ಡೋಸ್ಟಾರ್ಲಿಮಾಬ್' (Dostarlimab) ಎಂಬ ಪ್ರತಿಕಾಯದ ಔಷಧಿ ಕಂಡುಹಿಡಿದಿದ್ದು, ಈ ಔಷಧಿಯ ವೈದ್ಯಕೀಯ ಪ್ರಯೋಗವನ್ನು ನ್ಯೂಯಾರ್ಕ್‌ನ ಮೆಮೋರಿಯಲ್ ಸ್ಲೋನ್ ಕೆಟರಿಂಗ್ ಕ್ಯಾನ್ಸರ್ ಸೆಂಟರ್‌ನಲ್ಲಿ ನಡೆಸಲಾಗಿದೆ.

ಗುದನಾಳ ಕ್ಯಾನ್ಸರ್ ಇದ್ದ ಒಬ್ಬ ಭಾರತೀಯ ಸೇರಿ 12 ರೋಗಿಗಳಿಗೆ ರೋಗವು ಎರಡು ಮತ್ತು ಮೂರನೇ ಹಂತದಲ್ಲಿದ್ದಾಗ ಡೋಸ್ಟಾರ್ಲಿಮಾಬ್ ಔಷಧವನ್ನು ಪ್ರತಿ ಮೂರು ವಾರಗಳಿಗೊಮ್ಮೆ ಆರು ತಿಂಗಳವರೆಗೆ ನೀಡಲಾಗಿದೆ. ಫಲಿತಾಂಶದಲ್ಲಿ ಎಲ್ಲ



ಕ್ಯಾನ್ಸರ್ ಗೆಡ್ಡೆಗಳು ಸಂಪೂರ್ಣ ವಾಸಿಯಾಗಿದ್ದು, ಯಾವುದೇ ಅಡ್ಡಪರಿಣಾಮವಿಲ್ಲದೇ ರೋಗಿಗಳು ಚೇತರಿಸಿಕೊಂಡಿದ್ದಾರೆ ಎಂದು 'ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸಿನ್' ಜರ್ನಲ್‌ನಲ್ಲಿ ಪ್ರಕಟವಾಗಿರುವ ಸಂಶೋಧನಾ ವರದಿ ಹೇಳಿದೆ.

ಚಿಕಿತ್ಸೆ ನಂತರ ಈ 12 ರೋಗಿಗಳನ್ನು ದೈಹಿಕ, ಎಂಡೋಸ್ಕೋಪಿ, ಬಯೋಸ್ಕೋಪಿ, ಪಿಇಟಿ ಸ್ಕ್ಯಾನ್ ಮತ್ತು ಎಂಆರ್‌ಐ ಸ್ಕ್ಯಾನ್‌ಗಳಂತಹ ಸರಣಿ ವೈದ್ಯಕೀಯ ಪರೀಕ್ಷೆಗಳಿಗೆ ಒಳಪಡಿಸಿದಾಗ ಯಾವುದೇ ಗೆಡ್ಡೆಗಳು ಕಾಣಿಸಲಿಲ್ಲ. ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್‌ನಲ್ಲಿಯೂ ಗೆಡ್ಡೆಯ ಪುರಾವೆ ಇರಲಿಲ್ಲ ಎಂದು ಈ ಸಂಶೋಧನಾ ವರದಿಯ ಲೇಖಕರು ಹೇಳಿದ್ದಾರೆ.

'ಡೆಫಿಸಿಯೆಂಟ್ ಮಿಸ್‌ಮ್ಯಾಚ್ ರಿಪೇರಿ' (ಡಿಎಂಎಂಆರ್) ಗಟ್ಟಿ ಗೆಡ್ಡೆಗಳಿಗೆ ವಿಕಿರಣ ಚಿಕಿತ್ಸೆ, ಶಸ್ತ್ರಚಿಕಿತ್ಸೆ, ಕಿಮೋಥೆರಫಿಗೆ ಬದಲಿಯಾಗಿ ಡೋಸ್ಟಾರ್ಲಿಮಾಬ್ ಪ್ರತಿಕಾಯ ಔಷಧ ಪರಿಣಾಮಕಾರಿ ಚಿಕಿತ್ಸೆಯಾಗಿದೆಯೇ ಎಂದು ಕಂಡುಹಿಡಿಯಲು ಸಂಶೋಧಕರು ಮುಂದಾಗಿದ್ದಾರೆ.

'ಇದು ಕ್ರಾಂತಿಕಾರಿ ವಿಧಾನ'

'ಈ ಚಿಕಿತ್ಸೆಯು ಖಂಡಿತವಾಗಿಯೂ ಕ್ರಾಂತಿಕಾರಿ ವಿಧಾನದ ಹೆಜ್ಜೆ. ಅಪರೂಪದ ಪ್ರಯೋಗ ನಡೆಸಿರುವ ಸಂಶೋಧಕರು ಅಭಿನಂದನಾರ್ಹರು' ಎಂದು ಹೈದರಾಬಾದ್‌ನ ಯಶೋದಾ ಆಸ್ಪತ್ರೆಗಳ ಹಿರಿಯ ಸಲಹೆಗಾರ, ವೈದ್ಯಕೀಯ ಆಂಕೊಲಾಜಿಸ್ಟ್ ಮತ್ತು ಹೆಮಟೋ ಆಂಕೊಲಾಜಿಸ್ಟ್ ಡಾ.ನಿಖಿಲ್ ಎಸ್. ಘಡ್ಯಾಲ್ ಪಾಟೀಲ್ ಹೇಳಿದರು.

'ಪ್ರಯೋಗದ ಫಲಿತಾಂಶ ಹೊಸ ಆಶಾಕಿರಣ ಮೂಡಿಸಿದೆ. ಆದರೆ, ಇದು ಪ್ರಯೋಗದ ಆರಂಭಿಕ ಹಂತದಲ್ಲಿದೆ. ಇದರಿಂದ ಪ್ರಸ್ತುತ ಕ್ಯುರೇಟಿವ್ ಮಲ್ಟಿಮೋಡಲಿಟಿ ಚಿಕಿತ್ಸಾ ವಿಧಾನವನ್ನು ಬದಲಿಸಲು ಸಾಧ್ಯವಿಲ್ಲ' ಎಂದು ಹೇಳಿದರು.

'ನಮ್ಮ ದೇಶದಲ್ಲಿ ಇದುವರೆಗೆ ಇಂತಹ ಯಾವುದೇ ರೀತಿಯ ಪ್ರಯೋಗಗಳು ನಡೆದಿಲ್ಲ. ಪೆಂಬ್ರೊಲಿಜುಮಾಬ್ ನಮ್ಮಲ್ಲಿ ಲಭ್ಯವಿದೆ. ಆದರೆ, ಡೋಸ್ಟಾರ್ಲಿಮಾಬ್ ಲಭ್ಯವಿಲ್ಲ, ಒಂದು ವೇಳೆ ಲಭಿಸಿದರೂ ಅದರ ಬೆಲೆ ಎಷ್ಟೆಂಬುದು ನಿಖರವಾಗಿ ತಿಳಿಯದು. ಆದರೆ, ಪ್ರತಿ ಡೋಸ್‌ಗೆ ಲಕ್ಷಾಂತರ ರೂಪಾಯಿಗಳ ಮೇಲಿರುವ ಅಂದಾಜಿದೆ' ಎಂದು ಅವರು ಪ್ರತಿಕ್ರಿಯಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಒಂದು ರೂಪಾಯಿಗೆ ಊಟ !
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಕೋವಿಡ್: 5,233 ಪ್ರಕರಣ ದೃಢ

ನವದೆಹಲಿ/ ಮಹಾರಾಷ್ಟ್ರ (ಪಿಟಿಐ): ದೇಶದಾದ್ಯಂತ ಬುಧವಾರ ಬೆಳಿಗ್ಗೆ ಕೊನೆಗೊಂಡ 24 ತಾಸಿನಲ್ಲಿ ಹೊಸದಾಗಿ 5,233 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಪ್ರಕಟಣೆ ತಿಳಿಸಿದೆ.

ಮಂಗಳವಾರಕ್ಕೆ ಹೋಲಿಸಿದರೆ (3,714) ಈ ಪ್ರಮಾಣ ಹೆಚ್ಚಾಗಿದೆ. ಈ ಅವಧಿಯಲ್ಲಿ 3,345 ಮಂದಿ ಚೇತರಿಸಿಕೊಂಡಿದ್ದು, ಏಳು ಮಂದಿ ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 28,857ಕ್ಕೆ ತಲುಪಿದೆ. ದೇಶದಲ್ಲಿ ಇದುವರೆಗೆ 4,31,90,282 ಮಂದಿಗೆ ಕೊರೊನಾ ಸೋಂಕು ತಗುಲಿದ್ದು, ಒಟ್ಟು 5,24,715 ಮಂದಿ ಮೃತಪಟ್ಟಿದ್ದಾರೆ.

ಮಹಾರಾಷ್ಟ್ರದಲ್ಲಿ ಬುಧವಾರ ಕೋವಿಡ್‌ನ 2,701 ಹೊಸ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಕೋವಿಡ್–19 ಪ್ರಕರಣಗಳ ಸಂಖ್ಯೆ 9,806ಕ್ಕೇರಿದಂತಾಗಿದೆ.

ಪಠ್ಯ: ಬಿಜೆಪಿಯ ಇನ್ನಿಬ್ಬರು ಶಾಸಕರ ಅತೃಪ್ತಿ

ಒಂದನೇ ಪುಟದಿಂದ...

ರಾಜುಗೌಡ ಬೇಸರ: '6 ನೇ ತರಗತಿಯ ಸಮಾಜ–ವಿಜ್ಞಾನ ಪಠ್ಯಪುಸ್ತಕದ ಭಾಗ–2 ರ ಪುಟ ಸಂಖ್ಯೆ 82 ರಲ್ಲಿ ಸುರಪುರ ನಾಯಕರು ಶೀರ್ಷಿಕೆಯಡಿ ಸುರಪುರ ರಾಜ ವೆಂಕಪ್ಪ ನಾಯಕರ ಭಾವಚಿತ್ರವನ್ನು ಒಳಗೊಂಡ ವಿಸ್ತಾರವಾದ ಒಂದು ಪುಟದ ಪಠ್ಯವು ಇತ್ತು. ಶೀರ್ಷಿಕೆ ಮತ್ತು ವೆಂಕಟಪ್ಪ ನಾಯಕರ ಚಿತ್ರ ತೆಗೆದುಹಾಕಿ ಪಠ್ಯ ವಿಷಯ ಕಠಿಣ ಮಾಡಿದ್ದು ಬೇಸರದ ಸಂಗತಿ' ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ರಾಜುಗೌಡ ಹೇಳಿದ್ದಾರೆ.

ಪಾಠವನ್ನು ಈ ಹಿಂದೆ ಇದ್ದಂತೆಯೇ ಉಳಿಸಿಕೊಳ್ಳಬೇಕು ಎಂದೂ ಅವರು ಒತ್ತಾಯಿಸಿದ್ದಾರೆ.

'ಅಂಬೇಡ್ಕರ್ ಬಗ್ಗೆ ತಿರಸ್ಕಾರ, ಕೆಂಪೇಗೌಡರಿಗೆ ಸಿಗದ ಜಾಗ'!

'ಕಾಂಗ್ರೆಸ್ ನೇತೃತ್ವದ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಂಬೇಡ್ಕರ್ ಪಠ್ಯದ ಬಗ್ಗೆ ತಿರಸ್ಕಾರ ತೋರಿತ್ತು. ನಾಡಪ್ರಭು ಕೆಂಪೇಗೌಡರ ಪಠ್ಯಕ್ಕೆ ಜಾಗ ಇರಲಿಲ್ಲ, ನೆಹರೂಯೇ ಪಠ್ಯಕ್ಕೆ ಅವಕಾಶ ಇರಲಿಲ್ಲ, ಸಿಂಧೂ ನಾಗರಿಕತೆ ಪಾಠವೇ ಇರಲಿಲ್ಲ' ಎಂದು ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಬಿಜೆಪಿ, 'ಇವೆಲ್ಲವನ್ನೂ ಕೈಬಿಟ್ಟು ನೆಹರೂ ಅವರ ಬಗ್ಗೆ ಅತಿಯಾದ ಪಠ್ಯವನ್ನು ಅನಾವಶ್ಯಕವಾಗಿ ತುರುಕಿಸಲಾಗಿತ್ತು. ಇದರ ಉದ್ದೇಶವೇನು' ಎಂದು ಪ್ರಶ್ನಿಸಿದೆ.

ಡಾ.ಬಿ.ಆರ್. ಅಂಬೇಡ್ಕರ್

ಬರಗೂರು ಸಮಿತಿ ರಾಮಾಯಣದ ಬಗೆಗಿನ ಪಠ್ಯ ತೆಗೆದು ಇಸ್ಲಾಮಿಕ್ ಮತ್ತು ಸೂಫಿ ಪರಂಪರೆಯ ಪಠ್ಯ ಸೇರಿಸಲಾಗಿತ್ತು. ಇಸ್ಲಾಂ ಮತ್ತು ಕ್ರೈಸ್ತ ಧರ್ಮದ ಬಗ್ಗೆ ವೈಭವೀಕರಣ ಮಾಡಿದ್ದು ಅಲ್ಲದೆ, ಭಾರತದ ಸನಾತನ ಸಂಸ್ಕೃತಿ ಬಗ್ಗೆ ಕೀಳರಿಮೆ ಹುಟ್ಟಿಸುವ ಬರಹ ಸೇರ್ಪಡೆ ಮಾಡಲಾಗಿತ್ತು. ಇವೆಲ್ಲ ಕಾಂಗ್ರೆಸ್ ಸರ್ಕಾರ ನೇಮಿಸಿದ್ದ ಸಮಿತಿಯ ಸಾಧನೆ ಎಂದು ಟೀಕಿಸಿದೆ.

ಟಿಪ್ಪುವನ್ನು ವೈಭವೀಕರಿಸಿ, ಹೆಚ್ಚಿನ ಪುಟ ಸೇರಿಸಲು ಮೈಸೂರು ಒಡೆಯರ್ ವಂಶಸ್ಥರ ಪಠ್ಯಕ್ಕೆ ಕತ್ತರಿ ಹಾಕಿತ್ತು. ಅಲ್ಪಸಂಖ್ಯಾತರ ಮತ ಓಲೈಕೆಗಾಗಿ ಮೈಸೂರು ರಾಜಮನೆತನಕ್ಕೆ ಅವಮಾನ ಮಾಡಿದ್ದು ನಿಜವಲ್ಲವೇ ಎಂದು ಬಿಜೆಪಿ ಪ್ರಶ್ನಿಸಿದೆ.

ಶಂಕರರ ಪರಿಚಯದಲ್ಲೇಕೆ 'ಸಂಕರ'

9ನೇ ತರಗತಿಯ ಪ್ರಥಮ ಭಾಷೆ ಕನ್ನಡ ಪಠ್ಯ ಪುಸ್ತಕದಲ್ಲಿ ಅದ್ವೈತ ಮತದ ಪ್ರತಿಪಾದಕರಾದ ಶಂಕರಾಚಾರ್ಯರಿಗೂ ಅಪಮಾನ ಮಾಡಲಾಗಿದೆ ಎಂಬ ದೂರು ಕೇಳಿ ಬಂದಿದೆ.

ಶಂಕರಾಚಾರ್ಯರ ಬಗ್ಗೆ ಇರುವ ಸಾಲುಗಳು ಹೀಗಿವೆ– 'ಶಂಕರ ಎಂದರೆ ಮಂಗಳವನ್ನುಂಟು ಮಾಡುವವ, ಶಿವ ಎಂದು ಅರ್ಥ. ಮೂವರು ಪ್ರಮುಖ ಮತಾಚಾರ್ಯರಲ್ಲಿ ಮೊದಲನೆಯವರ ಹೆಸರು ಶಂಕರ. ಆದರೆ, 'ಸಂಕರ' ಎಂದರೆ ಬೆರಕೆ, ಕಲಬೆರಕೆ, ಏಪತ್ರ-ಕೃದ್ದಲ್ಲ, ಮಿಶ್ರಣ ಎಂಬ ಅರ್ಥವು ಹೊಮ್ಮುತ್ತದೆ'. ಶಂಕರರನ್ನು ಪರಿಚಯಿಸುವಾಗ 'ಸಂಕರ' ಪದವನ್ನು ಅನಗತ್ಯವಾಗಿ ಉಲ್ಲೇಖಿಸಿ, ಅನ್ಯಾರ್ಥ ಬರುವಂತೆ ವಿವರಿಸಿರುವುದು ಸರಿಯಲ್ಲ ಎಂಬ ಆಕ್ಷೇಪ ವ್ಯಕ್ತವಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಶಿಶು ಅಭಿವೃದ್ಧಿ ಯೋಜನೆ ತಿಪಟೂರು
ದೂರವಾಣಿ ಸಂಖ್ಯೆ: 08134–252991 email: cdpotiptur@gmail.com
ಸಂ:ಶಿಅಯೋ:ತಿಪ:ಡಿವಿಆರ್ಕ್ಷ:ಕಂಅ:ಮೆಸೆಂ:ಹುದ್ದೆ:2022–23 ದಿನಾಂಕ:07.06.2022
ಪ್ರಕಟಣೆ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ತಿಪಟೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ 2022–23ನೇ ಸಾಲಿನ ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಕಂಪ್ಯೂಟರ್ ಆಪರೇಟರ್ ಮತ್ತು ಮೆಸೆಂಜರ್ ಹುದ್ದೆಗೆ ಬಾಹ್ಯ ಮೂಲದಿಂದ ಸಿಬ್ಬಂದಿ ಸೇವೆ ಪಡೆದುಕೊಳ್ಳಲು ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಒದಗಿಸುವಂತ ನೊಂದಾಯಿತ ಅರ್ಹ ಹಾಗೂ ಅನುಭವವುಳ್ಳ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು e-procurement ಮೂಲಕ ದಿನಾಂಕ: 07.06.2022 ರಿಂದ 21.06.2022ರ ಸಂಜೆ 04:30 ಗಂಟೆಯೊಳಗೆ ಟೆಂಡರ್ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು www.eproc.karnataka.gov.in ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಯ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ತಿಪಟೂರು.
DIPR/TUM/186/MCA/22-23

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.
Tender Notification
The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from GST Compliant contractors for the proposed balance interiors works at Karnataka State Cricket Stadium at Hubli.
The details of issue/submission of tender document are as follows :-
1. Name of work :- Proposed Balance Interiors for Karnataka State Cricket Stadium at Hubli
2. Estimated Cost :- Rs. 2.50 Crores
3. Earnest Money Deposit :- Rs. 2,50,000/- should be enclosed in the technical bid cover
4. Cost of tender form :- Rs.15,000/- plus GST (Non Refundable) Two Bid System Technical & Commercial
5. Date of issue of tender form :- 9/6/2022 to 28/6/2022
6. Pre bid meeting :- 30/6/2022
7. Last date of submission of filled tender form :- 4/7/2022 before 4.30 p.m two covers bid system (Technical & Commercial Separately)
8. Completion of work by :- 3(Three) months from the date of work order
Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working days. For any clarification please contact Mr.H.A.Venkateshprasad , AGM Civil Engineering Dept, Mobile No. 9945604515/8150900022
Hon. Secretary, KSCA

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಎಸ್‌ಡಬ್ಲ್ಯೂಡಿ–ಮಹದೇವಪುರ ವಲಯ, ಬಿಬಿಎಂಪಿ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು–560002
ಸಂ: ಕಾಪಾಅ/ಎಸ್‌ಡಬ್ಲ್ಯೂಡಿ/ಮವ/ಟೆಂಡರ್/02/2022–23 ದಿನಾಂಕ: 08.06.2022
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ) (ಕರೆ–2)
ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ–ಮಹದೇವಪುರ ವಲಯ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ಮಹದೇವಪುರ ವಲಯದ ಕೆ.ಆರ್. ಪುರ ವಿಧಾನಸಭಾ ಕ್ಷೇತ್ರದಲ್ಲಿ ಮಳೆನೀರಿನ ಚರಂಡಿಗಳ ಭೇದ್ಯವಾಗುವಂತಹ ಉದ್ದಕ್ಕೆ ಮಣ್ಣಿನಿಂದ ಕೂಡಿದ ಚರಂಡಿಗಳ ತೋಡುವಿಕೆ ಕಾಮಗಾರಿ.	89.10	1,78,200/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ : 14.06.2022ರ ಸಂಜೆ 4.00 ಗಂಟೆಗೆ. 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.06.2022ರ ಸಂಜೆ 4.00 ಗಂಟೆಯವರೆಗೆ 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 17.06.2022ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ–ಮಹದೇವಪುರ ವಲಯ.
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602
ಸಂಖ್ಯೆ: ಯುಸಕ್ರೀಇ/ತಾಂಶಾಖೆ/ಕ್ರೀಯೋ/94/2022–23 ದಿನಾಂಕ: 06–06–2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿ ವಿವರ	ಟೆಂಡರ್ ಮೊತ್ತ	ಇ.ಎಂ.ಡಿ ಮೊತ್ತ
1	ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಕಲ್ಪತರು ತಾಲ್ಲೂಕು ಕ್ರೀಡಾಂಗಣದ ಆವರಣದಲ್ಲಿ ಈಜು ಕೊಳ ನಿರ್ಮಿಸುವ ಕಾಮಗಾರಿ ಕುರಿತು.	ರೂ. 216.76 ಲಕ್ಷಗಳು	ರೂ. 3,25,141/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: http://eproc.karnataka.gov.in ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 21–06–2022ರಂದು ಸಮಯ: 16.00 ಗಂಟೆಯವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22–06–2022ರಂದು ಸಮಯ: 16.30 ಗಂಟೆಗೆ.
3) ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ವಾಸಾಸಂಇ/ವಾ.ಪ್ರ/792/ಅಡ್ವರ್ಟೋ/2022–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಜೆಇ–3:ಟೆಂಡರ್–17:2022–23/808 ದಿನಾಂಕ: 07.06.2022
ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಗಳ ವಿವರ:– ಇ– ಪ್ರೊಕ್ಯೂರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ:– ಲೆಕ್ಕ ಶೀರ್ಷಿಕೆ: 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ:– (1) ಹಿರಿಯೂರು ತಾಲ್ಲೂಕು ಆಲೂರು ನಿಂದ ಹೊಸಯಳನಾಡುವರೆಗೆ ಕಿ.ಮೀ 1.80 ರಿಂದ 3.10 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ (ವ.ಇಂ. 152436) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–160.00
(2) ಹಿರಿಯೂರು ತಾಲ್ಲೂಕು ಹೊಸಯಳನಾಡು ನಿಂದ ಕಸವನಹಳ್ಳಿ ವರೆಗೆ ಕಿ.ಮೀ 0.00 ರಿಂದ 1.00 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ (ವ.ಇಂ. 152442) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–100.00
ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 21–06–2022 ಸಮಯ 17–30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 22–06–2022 ಸಮಯ 16–00 (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 23–06–2022 ಸಮಯ 16–01 (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 27–06–2022 ಸಮಯ 11–00 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.
DIPR/CTA/MCA/219/2022-23 ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಚಿತ್ರದುರ್ಗ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಕರ್ನಾಟಕ ಸರ್ಕಾರ
ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ಬಸವೇಶ್ವರ ವೃತ್ತ, ಕೆಳಗೋಟೆ ರಸ್ತೆ, ಅಂಬಾಭವಾನಿ ದೇವಸ್ಥಾನದ ಹತ್ತಿರ, ಚಿತ್ರದುರ್ಗ.
ದೂರವಾಣಿ: 08194–226559 E-mail: ttwocta@gmail.com
ಸಂಖ್ಯೆ: ತಾಪವಕಇ/ಬಾ.ವಾ.ಅಲ್ಪಾವಧಿ ಟೆಂಡರ್/ಸಿಆರ್–01/2022–23 ದಿನಾಂಕ: 01.06.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ಶಿವಾನಿ 2019, ಬೆಂಗಳೂರು ದಿನಾಂಕ: 31.03.2022ರನ್ವಯ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ ಇವರಿಗೆ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಜೂನ್–2022ರಿಂದ ಮಾರ್ಚ್–2023–ರ ವರೆಗೆ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ವಾಹನವನ್ನು (ಸ್ವಿಫ್ಟ್/ಫೋರ್ಡ್ ಇತರೆ ಮಾದರಿಯ) ಹೊರಗುತ್ತಿಗೆ ಆಧಾರದ ಮೇಲೆ ಪ್ರತಿ ಮಾಹೆಗೆ (2500 ಕಿ.ಮೀ. ಮಿತಿಗೊಳಪಟ್ಟು) ವಾಹನ ಮಾಲೀಕರು ಅಥವಾ ಅನುಮೋದಿತ ಟೂರ್ & ಟ್ರಾವೆಲ್ಸ್ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.
1) ಖಾಲಿ ಟೆಂಡರ್ ಅರ್ಜಿಗಳನ್ನು ಈ ಕಛೇರಿಯಿಂದ ವಿತರಿಸುವ ದಿನಾಂಕ ಮತ್ತು ಸಮಯ: 01.06.2022ರಿಂದ 15.06.2022. 2) ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಸಮಯ ಮತ್ತು ಸ್ಥಳ: 15.06.2022 ಮಧ್ಯಾಹ್ನ 04:30ರ ವರೆಗೆ ಸ್ಥಳ: ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ. 3) ಟೆಂಡರ್ ಪೆಟ್ಟಿಗೆಯನ್ನು ತೆರೆಯುವ ಸ್ಥಳ ಮತ್ತು ದಿನಾಂಕ: 16.06.2022 ಬೆಳಗ್ಗೆ 10:30ಕ್ಕೆ, ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ. 4) ಭದ್ರತಾ ಠೇವಣಿ: ತಾಲ್ಲೂಕು ಪಲಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ ಇವರ ಹೆಸರಿನಲ್ಲಿ ಇ.ಎಂ.ಡಿ ರೂ. 15000/–.
ಇಚ್ಛೆಯುಳ್ಳ ವಾಹನ ಮಾಲೀಕರು/ನೋಂದಾಯಿತ ಸಂಸ್ಥೆಯವರ ಟೆಂಡರ್ ಅರ್ಜಿ ನಮೂನೆಯನ್ನು ಪಡೆಯಲು ರೂ. 500/–ಗಳ ಮೊತ್ತದ ಡಿ.ಡಿ. (ರಾಷ್ಟ್ರೀಕೃತ ಬ್ಯಾಂಕ್)ಯನ್ನು ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಚಿತ್ರದುರ್ಗ ಇವರ ಹೆಸರಿನಲ್ಲ ಪಡೆದು ನಿಗಧಿತ ದಿನಾಂಕದೊಳಗಾಗಿ ಕಛೇಲಿ ಕೆಲಸದ ಸಮಯ ಬೆಳಗ್ಗೆ 10.00 ರಿಂದ ಸಂಜೆ: 5.30 ರವರೆಗೆ ಖುದ್ದಾಗಿ ಪಡೆಯಬಹುದಾಗಿದೆ. ಷರತ್ತು ಹಾಗೂ ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ.
RO No. 204: DIPR/CTA/MCA/2022-23 ಸಹಿ/– ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಚಿತ್ರದುರ್ಗ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91–80–22977666/276/433/216/217 ಟೆಲಿ–ಫ್ಯಾಕ್ಸ್:080–26534477
ಇ–ಮೇಲ್: director@jayadevacardiology.com/pstodirectorsjicr@gmail.com/pe.sjicrblr@gmail.com
ಅಲ್ಪಾವದಿ ಟೆಂಡರ್ ಪ್ರಕಟಣೆ
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಎಸ್‌ಜೆಐಸಿಆರ್) ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ವಿಷಯಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಟೆಂಡರ್ ವಿವರಗಳು
1	ಎಸ್‌ಜೆಐಸಿಆರ್/ಟಿಎಸ್/27/ 2022–23 ದಿನಾಂಕ:08.06.2022	ವೈದ್ಯಕೀಯ ಉಪಕರಣಗಳ ಪೂರೈಕೆ: 1) ಇಸಿಜಿ ಯಂತ್ರ–10 ಸಂಖ್ಯೆಗಳು, 2) ಪ್ರಿಂಟರ್ ಹೊಂದಿರುವ ಕಂಪ್ಯೂಟೆಡ್ ರೇಡಿಯೊಗ್ರಫಿ ಸಿಸ್ಟಮ್–1 ಸೆಟ್ ಮತ್ತು ಪೋರ್ಟಬಲ್ X-ray ಯಂತ್ರ–02 ಸಂಖ್ಯೆಗಳು.
2	ಎಸ್‌ಜೆಐಸಿಆರ್/ಟಿಎಸ್/28/ 2022–23 ದಿನಾಂಕ:08.06.2022	ಬೆಂಗಳೂರಿನ BG ರಸ್ತೆಯಲ್ಲಿರುವ SJICR ಗಾಗಿ x-ray, ECHO, TMT, CT, MRI ಇಮೇಜಸ್‌ಗಳ ವೀಕ್ಷಣೆಗೆ RIS (ರೇಡಿಯೊಲಜಿ ಇನ್‌ಫಾರ್‌ಮೇಷನ್ ಸಿಸ್ಟಮ್) ಮತ್ತು PACS ಸಿಸ್ಟಮ್ ಅನ್ನು ನೆಟ್‌ವರ್ಕಿಂಗ್ ಹಾಗೂ ಹಾರ್ಡ್‌ವೇರ್ ಸಮೇತ ಒದಗಿಸುವುದು.

1. ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು https://eproc.karnataka.gov.in ವೆಬ್‌ಸೈಟ್‌ನಿಂದ ದಿನಾಂಕ : 09.06.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : 24.06.2022ರ ಸಂಜೆ 4.00 ಗಂಟೆಯವರೆಗೆ.
2. ಪ್ರಿ–ಬಿಡ್ ಮೀಟಿಂಗ್ ದಿನಾಂಕ : 16.06.2022ರ ಬೆಳಿಗ್ಗೆ 11:30 ಗಂಟೆಗೆ.
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 27.06.2022ರ ಸಂಜೆ 4:00 ಗಂಟೆಗೆ.
4. ಇ.ಎಂ.ಡಿ. : ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಿರುವಂತೆ.
5. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: www.jayadevacardiology.com ನ್ನು ನೋಡಬಹುದು.
6. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.
ಸಹಿ/– ಮುಖ್ಯ ಆಡಳಿತಾಧಿಕಾರಿಗಳು.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625 Web: www.federalbank.co.in
BGRR/PvtSale/2022-23 PUBLIC NOTICE GOLD AUCTION 07/06/2022
Notice is hereby given to the public in general and the account holders in particular that e-auction of the pledged gold ornaments in the below mentioned account/s will be conducted by Federal Bank Ltd, on 21.06.2022 through online portal, https://gold.samil.in Interested buyers may log on to the auction portal or contact the Bank at contact@federalbank.co.in for further information.

Branch name	Account Number	Branch name	Account Number	Branch name	Account Number
Bangalore / Banashankari	17816100326925/2027637	Bangalore / Vijaya Nagar	16436100320702/109512	Bangalore J P Nagar	18276100268420/2133517
Bangalore / Banashankari	17816100316876/2127637	Bangalore / Vijaya Nagar	16436100322724/2076839	Bangalore J P Nagar	18276100268453/2136641
Bangalore / Banashankari	17816100329580/2107093	Bangalore / Vijaya Nagar	16436100327145/2092319	Bangalore J P Nagar	18276100269584/2137720
Bangalore / Banashankari	17816100329465/2121441	Bangalore / Vijaya Nagar	16436100316403/2136119	Bangalore J P Nagar	18276100269535/2137736
Bangalore / Banashankari	17816100323898/2138554	Bangalore / Vijaya Nagar	16436100325719/2146291	Bangalore J P Nagar	18276100270756/2138560
Bangalore / Banashankari	17816100324573/2139484	Bangalore / Vijaya Nagar	16436100310513/2128912	Bangalore J P Nagar	18276100274030/2141465
Bangalore / Banaswadi	14716100246748/2021553	Bangalore / Vijaya Nagar	16436100327327/2148467	Bangalore J P Nagar	18276100281357/2147602
Bangalore / Banaswadi	14716100243422/2104440	Bangalore / Vijaya Nagar	16436100316908/2136822	Bangalore J P Nagar	18276100281340/2147626
Bangalore / Banaswadi	14716100247035/2098792	Bangalore / Vijaya Nagar	16436100319555/2139491	Bangalore J P Nagar	18276100233143/2095879
Bangalore / Banaswadi	14716100249387/2116767	Bangalore / Vijaya Nagar	16436100319886/2139879	Bangalore J P Nagar	18276100233135/2095880
Bangalore / Banaswadi	14716100254049/2153367	Bangalore / Vijaya Nagar	16436100329885/2152648	Bangalore J P Nagar	18276100256615/2124696
Bangalore / Basavanagudi	13186100165333/2078166	Bangalore / Vijaya Nagar	16436100333721/2159765	Bangalore J P Nagar	18276100267810/2136150
Bangalore / Basavanagudi	13186100165374/2145780	Bangalore Hsr Layout	17696100227624/109940	Bangalore J P Nagar	18276100267687/83938
Bangalore / Basavanagudi	13186100167446/2153060	Bangalore Hsr Layout	17696100225818/2002224	Bangalore J P Nagar	18276800003358/2197364
Bangalore / Gandhi Nagar	11896100131414/81946	Bangalore Hsr Layout	17696100235858/2007244	Bangalore J P Nagar	18276100300512/2040899
Bangalore / Gandhi Nagar	11896100131422/81936	Bangalore Hsr Layout	17696100230610/2141439	Bangalore J P Nagar	18276100299011/2063429
Bangalore / Gandhi Nagar	11896100131000/112988	Bangalore Hsr Layout	17696100227129/2137495	Bangalore J P Nagar	18276100242854/80597
Bangalore / Gandhi Nagar	11896100132321/2092554	Bangalore Hsr Layout	17696100231774/2096215	Bangalore J P Nagar	18276100299029/2063036
Bangalore / Indiranagar	15356100079762/2130977	Bangalore Hsr Layout	17696100230289/2141128	Bangalore J P Nagar	18276100247358/2114357
Bangalore / Jalahalli	15826100542241/2141996	Bangalore Hsr Layout	17696100230537/2121519	Bangalore J P Nagar	18276100282314/2099695
Bangalore / Jalahalli	15826100535641/2136898	Bangalore Hsr Layout	17696100230545/2119375	Bangalore J P Nagar	18276100296454/102780
Bangalore / Jalahalli	15826100528026/2129711	Bangalore Hsr Layout	17696100235783/2148065	Bangalore/Rt Nagar	14726100203888/2136424
Bangalore / Jalahalli	15826100534982/2136281	Bangalore Hsr Layout	17696100226394/2136728	Bangalore/Rt Nagar	14726100196660/2148031
Bangalore / Jalahalli	15826100544973/2066559	Bangalore Hsr Layout	17696100226279/2136484	Bangalore/Rt Nagar	14726100193030/2140603
Bangalore / Jalahalli	15826100536086/2137174	Bangalore Hsr Layout	17696100228655/2139073	Bangalore/Rt Nagar	14726100193196/2140940
Bangalore / Jalahalli	15826100528364/2130058	Bangalore Hsr Layout	17696100227418/2137997	Bangalore/Rt Nagar	14726100193154/2091652
Bangalore / Jalahalli	15826100536979/2137905	Bangalore Hsr Layout	17696100230339/2141101	Bangalore/Rt Nagar	14726100197015/2044118
Bangalore / Jalahalli	15826100552885/2128415	Bangalore Hsr Layout	17696100233713/2145058	Bangalore/Rt Nagar	14726100197023/2044117
Bangalore / Jalahalli	15826100537753/2138643	Bangalore J P Nagar	18276100279757/89141	Bangalore/Rt Nagar	14726100196363/2096097
Bangalore / Jalahalli	15826100553735/2156011	Bangalore J P Nagar	18276100279765/89140	Bangalore/Rt Nagar	14726100196496/2147859
Bangalore / Jalahalli	15826100540971/2139251	Bangalore J P Nagar	18276100276860/91403	Bangalore/Rt Nagar	14726100195902/2122075
Bangalore / Jalahalli	15826100541730/2141644	Bangalore J P Nagar	18276100280631/2146991	Bangalore/Rt Nagar	14726100196298/2122297
Bangalore / Jaya Nagar	13876100367554/2138007	Bangalore J P Nagar	18276100280169/2036609	Bangalore/Rt Nagar	14726100195803/2122518
Bangalore / Jaya Nagar	13876100370327/2007021	Bangalore J P Nagar	18276100272141/2037477	Bangalore/Rt Nagar	14726100193352/2128491
Bangalore / Jaya Nagar	13876100366994/2021508	Bangalore J P Nagar	18276100277710/2048629	Bangalore/Sadashivanagar	21986100032734/2071213
Bangalore / Jaya Nagar	13876100368545/2023422	Bangalore J P Nagar	18276100281555/2110080	Bangalore/Sadashivanagar	21986100031041/2089968
Bangalore / Jaya Nagar	13876100368354/2105431	Bangalore J P Nagar	18276100281548/2099149	Bangalore/Sadashivanagar	21986100033757/2108569
Bangalore / Jaya Nagar	13876100367174/2136707	Bangalore J P Nagar	18276100293287/2122753	Bangalore/Sadashivanagar	21986100032643/2142037
Bangalore / Jaya Nagar	13876100369444/2024963	Bangalore J P Nagar	18276100273883/2141472	Kodathi Gate	21716100027065/2038662
Bangalore / Marathahalli	14546100130232/2142317	Bangalore J P Nagar	18276100301346/2162350	Kodathi Gate	21716100026943/2140090
Bangalore / Rajaji Nagar	13346100649823/2107466	Bangalore J P Nagar	18276100276894/2143724	Mysore	12816100296438/2117507
Bangalore / Rajaji Nagar	13346100644204/2040319	Bangalore J P Nagar	18276100276332/2143496	Mysore	12816100295182/2137482
Bangalore / Rajaji Nagar	13346100649203/2036693	Bangalore J P Nagar	18276100270665/2138582	Mysore	12816100295281/2138384
Bangalore / Rajaji Nagar	13346100650037/2126459	Bangalore J P Nagar	18276100281530/2091226	Mysore	12816100295794/2144426
Bangalore / Rajaji Nagar	13346100651365/2120640	Bangalore J P Nagar	18276100269774/2137960	Mysore	12816100296156/2148480
Bangalore / Rajaji Nagar	13346100648981/2143485	Bangalore J P Nagar	18276100284674/2115402	Mysore	12816100294987/2135511
Bangalore / Rajaji Nagar	13346100654393/2154165	Bangalore J P Nagar	18276100277058/2105961	Mysore / Jayalaxmipuram	16896100303042/2069470
Bangalore / Rajaji Nagar	13346100657339/2161279	Bangalore J P Nagar	18276100267273/2123650	Mysore / Jayalaxmipuram	16896100305161/2107799
Bangalore / Vignana Nagar	16296100185228/2130540	Bangalore J P Nagar	18276100280193/2125476	Mysore / Jayalaxmipuram	16896100303133/2114748
Bangalore / Vignana Nagar	16296100185509/2131593	Bangalore J P Nagar	18276100282009/2148326	Mysore / Jayalaxmipuram	16896100302119/2138234
Bangalore / Vijaya Nagar	16436100320983/82471	Bangalore J P Nagar	18276100267257/2135433	Mysore / Jayalaxmipuram	16896100302432/2141024
Bangalore / Vijaya Nagar	16436200124905/2162385	Bangalore J P Nagar	18276100294541/2162695	Wipro Park Koramangala	21996100025851/2129195
Bangalore / Vijaya Nagar	16436100319266/2139100	Bangalore J P Nagar	18276100267992/2136544	Wipro Park Koramangala	21996100033327/2124204
Bangalore / Vijaya Nagar	16436100323284/2143356	Bangalore J P Nagar	18276100267851/2136136	Wipro Park Koramangala	21996100028509/2053344
		Wipro Park Koramangala	21996100027576/2081087	Wipro Park Koramangala	21996100030109/2147031

Bangalore 07-06-2022 Vice President & Zonal Head

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವವರಿಗೆ ವಿಷಯ ಗ್ರಹಿಕೆ ಸಾಮರ್ಥ್ಯ ಉತ್ತಮವಾಗಿರಬೇಕು. ಅದಕ್ಕಾಗಿ ನಿತ್ಯ ವ್ಯಾಯಾಮ, ಪ್ರಾಣಾಯಾಮ- ಧ್ಯಾನ ಮಾಡುವ ಅಭ್ಯಾಸ ರೂಢಿಸಿಕೊಂಡರೆ ಉತ್ತಮ.



ಶ್ರದ್ಧೆ, ಶ್ರಮ, ಅಧ್ಯಯನ: ಯಶಸ್ಸಿನ ಮೆಟ್ಟಿಲು

ದಾವಣಗೆರೆಯ ಅವಿನಾಶ್ ವಿ. ಕೇಂದ್ರ ನಾಗರಿಕ ಸೇವಾ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲೇ 31ನೇ ರ‍್ಯಾಂಕ್ ಪಡೆದಿದ್ದಾರೆ. ಈ ಯಶಸ್ಸಿನ ಹಿಂದಿರುವ 'ಅಧ್ಯಯನ'ದ ಸಿದ್ಧತೆ ಕುರಿತು ಅವರು 'ಸ್ಪರ್ಧಾವಾಣಿ'ಯೊಂದಿಗೆ ಹಂಚಿಕೊಂಡಿದ್ದಾರೆ.

ಬಾಲಕೃಷ್ಣ ಪಿ.ಎಚ್.

ಯುಪಿಎಸ್‌ಸಿ ಟಾಪರ್ಸ್ ಟಿಪ್ಸ್

ಅವಿನಾಶ್ ವಿ.

● ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ್ದೀರಿ, ಅಭಿನಂದನೆಗಳು. ನಿಮ್ಮ ಮುಂದಿನ ಹೆಜ್ಜೆ?

ಐಎಫ್‌ಎಸ್(ಭಾರತೀಯ ವಿದೇಶಾಂಗ ಸೇವೆ) ಮಾಡಿ, ದೇಶದ ಅಂಬಾಸೆಡರ್ ಆಗಿ ಕಾರ್ಯನಿರ್ವಹಿಸಬೇಕೆಂಬ ಗುರಿ ಇಟ್ಟುಕೊಂಡಿದ್ದೆ. ಈಗ ಯುಪಿಎಸ್ಸಿಯಲ್ಲಿ 31ನೇ ರ‍್ಯಾಂಕ್ ಪಡೆದಿದ್ದೇನೆ. ಆ ಹುದ್ದೆ ಪಡೆಯುವುದು ಸುಲಭವಾಗಲಿದೆ. ನಮ್ಮ ದೇಶದ ವಿದೇಶಾಂಗ ಸಚಿವಾಲಯದ ಅಡಿಯಲ್ಲಿ ಕೆಲಸ ಮಾಡಲಿದ್ದೇನೆ.

● ಯುಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳನ್ನು ಎಷ್ಟನೇ ಪ್ರಯತ್ನದಲ್ಲಿ ಪೂರ್ಣಗೊಳಿಸಿದಿರಿ?

ಮೊದಲ ಪ್ರಯತ್ನದಲ್ಲಿಯೇ ಪೂರ್ಣಗೊಳಿಸಿದ್ದೇನೆ. ಮೊದಲ ಪ್ರಯತ್ನದಲ್ಲಿ ಈ ಪ್ರಮಾಣದ ರ‍್ಯಾಂಕ್ ಬರಬಹುದು ಎಂಬ ಕಲ್ಪನೆ ಇರಲಿಲ್ಲ. ಹಾಗಾಗಿ ಎರಡನೇ ಪ್ರಯತ್ನಕ್ಕಾಗಿ ಮತ್ತೆ ತಯಾರಿ ನಡೆಸಿದ್ದೆ. ಜೂ.5ಕ್ಕೆ ಪ್ರಿಲಿಮ್ಸ್ ಪರೀಕ್ಷೆ ಬರೆಯಬೇಕಿತ್ತು. ಅಷ್ಟರೊಳಗೆ ಯುಪಿಎಸ್‌ಸಿ ಫಲಿತಾಂಶ ಬಂತು. ಎರಡನೇ ಬಾರಿ ಬರೆಯುವ ಶ್ರಮ ತಪ್ಪಿತು.

● ನೀವು ಅನುಸರಿಸಿದ 'ಅಧ್ಯಯನ ತಂತ್ರ'ಗಳೇನು?

ದಿನಕ್ಕೆ ಆರೇಳು ಗಂಟೆ ಓದುತ್ತಿದ್ದೆ. ಓದಿನ ಜೊತೆಗೆ, ಯೋಗ, ಕ್ರೀಡೆ ಮತ್ತಿತರ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದೆ. ಓದುವ ಸಮಯದಲ್ಲಿ ಮಾತ್ರ ಗಮನವಿಟ್ಟು ಓದುತ್ತಿದ್ದೆ.

ನನ್ನ ಪ್ರಕಾರ ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ಗೆಲ್ಲುವ ಆತ್ಮವಿಶ್ವಾಸವಿರಬೇಕು. ಅದಕ್ಕೆ ತಕ್ಕಂತೆ ಬದ್ಧತೆ, ಶ್ರಮವಹಿಸಿ ಅಧ್ಯಯನ ಮಾಡಬೇಕು.

● ನಿಮ್ಮ ಅಧ್ಯಯನ ಪರಿಕರಗಳ ಬಗ್ಗೆ ತಿಳಿಸಿ

ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ಪತ್ರಿಕೆ ಓದುವ ಹವ್ಯಾಸ ಇರಲೇಬೇಕು. ನಾನು 'ದಿ ಹಿಂದೂ ಪತ್ರಿಕೆ'ಯನ್ನು ನಿತ್ಯ ಓದುತ್ತಿದ್ದೆ. ರಾಷ್ಟ್ರದ ಆಗುಹೋಗುಗಳ ಬಗ್ಗೆ ನೋಟ್ ಮಾಡಿಕೊಳ್ಳುತ್ತಿದ್ದೆ. ಯಾವ್ಯಾವುದೋ ಪುಸ್ತಕ ಓದುವ ಬದಲು ಸರ್ಕಾರ ಪ್ರಕಟಿಸಿರುವ ಮಾಹಿತಿಪೂರ್ಣ ಪುಸ್ತಕಗಳನ್ನೇ ಓದಬೇಕು.

● ಈ ಸ್ಪರ್ಧಾತ್ಮಕ ಪರೀಕ್ಷೆಗೆ ಕೋಚಿಂಗ್ ಅಗತ್ಯವಿದೆಯೇ? ನೀವು ಕೋಚಿಂಗ್‌ಗೆ ಹೋಗಿದ್ದೀರಾ? ಈ ತರಬೇತಿ ಯಾವ ರೀತಿ ನೆರವಾಗುತ್ತದೆ ?

ಕೋಚಿಂಗ್ ಬೇಕೇ ಬೇಕು ಎಂದೇನಿಲ್ಲ. ಆದರೆ, ಸರಿಯಾದ ಮಾರ್ಗದರ್ಶನ ಬೇಕೇಬೇಕು. ನಾನು ಬೆಂಗಳೂರಿನ 'ಇನ್‌ಸೈಟ್ಸ್ ಐಎಎಸ್' ಸಂಸ್ಥೆಯಲ್ಲಿ ತರಬೇತಿ ಪಡೆದೆ.

● ಎಷ್ಟು ಸಮಯದಿಂದ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದೀರಿ?

2020ರಲ್ಲಿ ನನ್ನ ಎಲ್‌ಎಲ್‌ಬಿ ಪದವಿ ಮುಗಿಯಿತು. ಅದೇ ವರ್ಷದ ಅಕ್ಟೋಬರ್‌ನಿಂದಲೇ ಯುಪಿಎಸ್‌ಸಿಗೆ ಸಿದ್ಧತೆ ಮಾಡಲು ಆರಂಭಿಸಿದೆ. ಒಟ್ಟು ಒಂದೂವರೆ ವರ್ಷದ ಪ್ರಯತ್ನದ ಫಲ ಇದು.

ಸಂದರ್ಶನ ವೀಕ್ಷಣೆಗೆ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

● ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ನಿಮ್ಮ ಸಲಹೆ?

ಕೆಲವರು ಒಂದೇ ಪ್ರಯತ್ನದಲ್ಲಿ ಉತ್ತೀರ್ಣರಾಗಬಹುದು. ಹಾಗೆಂದು ಅನುತ್ತೀರ್ಣರಾದವರು ನಿರಾಶರಾಗಬೇಕಿಲ್ಲ. ಮೂರು, ನಾಲ್ಕು ಪ್ರಯತ್ನಗಳನ್ನೂ ಮಾಡಬೇಕಾಗಬಹುದು. ನಿರಂತರ ಪ್ರಯತ್ನದಿಂದ ಗುರಿ ತಲುಪಬಹುದು.

ಸಾಧಿಸುವ ಮನಸ್ಸಿದ್ದರೆ ಸಾಕು, ಬಡತನ, ಗ್ರಾಮೀಣ ಪ್ರದೇಶದ ಹಿನ್ನೆಲೆಯಂತಹವು ಯುಪಿಎಸ್‌ಸಿ ಪಾಸಾಗಲು ಅಡ್ಡಿಯಾಗುವುದಿಲ್ಲ.

ಕೆಲವು ಕೋಚಿಂಗ್ ಸೆಂಟರ್‌ಗಳು ಚೆನ್ನಾಗಿ ಓದುವವರಿಗೆ ಸ್ಕಾಲರ್‌ಶಿಪ್ ನೀಡುತ್ತವೆ. ಅಂಥ ಅವಕಾಶವನ್ನು ಬಳಸಿಕೊಳ್ಳಬಹುದು.

ಕೋಚಿಂಗ್ ಸೆಂಟರ್‌ಗೆ ಹೋಗಲು ಆಗುವುದಿಲ್ಲ ಎಂದಾದರೆ, ಒಮ್ಮೆ ಕೋಚಿಂಗ್ ಸೆಂಟರ್‌ನವರನ್ನು ಭೇಟಿಯಾಗಿ ಅವರಿಂದ ಮಾರ್ಗದರ್ಶನ ಪಡೆದುಕೊಳ್ಳಬಹುದು. ನೀವು ಕೋಚಿಂಗ್‌ಗೆ ಸೇರಬೇಕಾಗಿಲ್ಲ. ಆದರೆ ಯಾವ ರೀತಿ ಓದಬೇಕೆಂಬುದನ್ನು ತಿಳಿದುಕೊಂಡು ಸ್ವತಂತ್ರವಾಗಿಯೂ ಅಧ್ಯಯನ ಮಾಡಬಹುದು.

ಗ್ರಾಮೀಣ ಬ್ಯಾಂಕ್ ಕೆಲಸ ಖಾಲಿ ಇದೆ!

ಪರೀಕ್ಷೆಗೆ ನೀವು ಈಗಲೇ ಸಿದ್ಧರಾಗಿ

ದೇಶದಾದ್ಯಂತ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಖಾಲಿಯಿರುವ 8106 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಕೆ, ಪರೀಕ್ಷಾ ಸಿದ್ಧತೆಯ ಪ್ರಾಥಮಿಕ ಮಾಹಿತಿ ಇಲ್ಲಿದೆ.

ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ದೇಶದಾದ್ಯಂತವಿರುವ 43 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಖಾಲಿ ಇರುವ 8106 ವಿವಿಧ ಹುದ್ದೆಗಳ ಭರ್ತಿಗಾಗಿ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) ಅರ್ಜಿ ಆಹ್ವಾನಿಸಿದೆ.

ಕರ್ನಾಟಕದ ಎರಡು ಗ್ರಾಮೀಣ ಬ್ಯಾಂಕ್‌ಗಳಾದ 'ಕರ್ನಾಟಕ ಗ್ರಾಮೀಣ ಬ್ಯಾಂಕ್' ಮತ್ತು 'ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕ್'ಗಳಲ್ಲಿ 832 ವಿವಿಧ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲಾಗುತ್ತಿದೆ.

ಒಟ್ಟು ಹುದ್ದೆಗಳಲ್ಲಿ ಆಫೀಸ್ ಅಸಿಸ್ಟೆಂಟ್ (ಮಲ್ಟಿಪರ್ಪಸ್(ವಿವಿಧೋದ್ದೇಶ)) (ಗ್ರೂಪ್ ಬಿ) 173, ಆಫೀಸರ್ ಸ್ಕೇಲ್-1 (ಅಸಿಸ್ಟೆಂಟ್ ಮ್ಯಾನೇಜರ್) (ಗ್ರೂಪ್ 'ಎ') 429 ಹಾಗೂ ಜನರಲ್ ಬ್ಯಾಂಕಿಂಗ್ ಅಧಿಕಾರಿ (ಮ್ಯಾನೇಜರ್ ಕೇಡರ್-ಗ್ರೂಪ್ ಎ-ಸ್ಕೇಲ್ II) 230 ಹುದ್ದೆಗಳಿವೆ.

ವಿದ್ಯಾರ್ಹತೆ, ವಯಸ್ಸು: ಯಾವುದೇ ವಿಷಯದಲ್ಲಿ ಪದವಿ ಪಡೆದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಜೂನ್ 27, 2022 ಅರ್ಜಿ ಸಲ್ಲಿಕೆಗೆ ಕೊನೆ ದಿನ.

ಹುದ್ದೆ, ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯಸ್ಸು ಕುರಿತ ವಿವರ

ಕ್ರ.ಸಂ.	ಹುದ್ದೆ ವಿವರ	ಶೈಕ್ಷಣಿಕ ಅರ್ಹತೆ ಮತ್ತು ಅನುಭವ	ವಯೋಮಿತಿ (01.06.2022 ರಂತೆ)*
1	ಆಫೀಸ್ ಅಸಿಸ್ಟೆಂಟ್ (ವಿವಿಧೋದ್ದೇಶ)	ಯಾವುದೇ ವಿಷಯದಲ್ಲಿ ಪದವಿ	18ರಿಂದ 28 ವರ್ಷ
2	ಆಫೀಸರ್ ಸ್ಕೇಲ್-1(ಅಸಿಸ್ಟೆಂಟ್ ಮ್ಯಾನೇಜರ್)	ಯಾವುದೇ ವಿಷಯದಲ್ಲಿ ಪದವಿ	18 ರಿಂದ 30 ವರ್ಷ
3	ಆಫೀಸರ್- ಸ್ಕೇಲ್ II & III (ಮ್ಯಾನೇಜರ್/ಸೀನಿಯರ್ ಮ್ಯಾನೇಜರ್)	1/2/5 ವರ್ಷಗಳ ಅನುಭವದೊಂದಿಗೆ ಪದವಿ/ ಸ್ನಾತಕೋತ್ತರ ಪದವಿ	21ರಿಂದ 40 ವರ್ಷ

ಕೋಷ್ಟಕದಲ್ಲಿ ಉಲ್ಲೇಖಿಸಿರುವ ಗರಿಷ್ಠ ವಯಸ್ಸಿನ ಮಿತಿಯು ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮತ್ತು ಆರ್ಥಿಕ ದುರ್ಬಲ ವರ್ಗದ(ಇಡಬ್ಲ್ಯುಎಸ್) ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

ವಯೋಮಿತಿ ಸಡಿಲಿಕೆ: ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳು.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ₹850, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ₹175.

ಆಯ್ಕೆ ವಿಧಾನ: ಆನ್‌ಲೈನ್ ಪರೀಕ್ಷೆಯ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಹುದ್ದೆಗಳಿಗಾಗಿ 80 ಅಂಕಗಳ ಪ್ರಿಲಿಮಿನರಿ ಪರೀಕ್ಷೆ ಆಗಸ್ಟ್ 2022ರಂದು ನಡೆಯಲಿದೆ. 200 ಅಂಕಗಳ ಮುಖ್ಯ ಪರೀಕ್ಷೆ ಸೆಪ್ಟೆಂಬರ್/ ಅಕ್ಟೋಬರ್ 2022ರಲ್ಲಿ ನಡೆಯುವ ಸಾಧ್ಯತೆ ಇದೆ.

ಸಂದರ್ಶನ: ಈ ಆಯ್ಕೆ ಪ್ರಕ್ರಿಯೆ ಅಧಿಕಾರಿಗಳ ಹುದ್ದೆಗೆ ಮಾತ್ರ ಅನ್ವಯಿಸುತ್ತದೆ (ಸ್ಕೇಲ್ I, II ಮತ್ತು III) ಅಸಿಸ್ಟೆಂಟ್ ಹುದ್ದೆಗಳಿಗೆ ಸಂದರ್ಶನ ಇರುವುದಿಲ್ಲ.

ಮುಖ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಮಾತ್ರ ಸಂದರ್ಶನ /ಅಂತಿಮ ಮೆರಿಟ್ ಲಿಸ್ಟಿಂಗ್ ಗಾಗಿ ಶಾರ್ಟ್ ಲಿಸ್ಟ್ ಮಾಡಲು ಪರಿಗಣಿಸಲಾಗುತ್ತದೆ.

ಪರೀಕ್ಷೆಯ ಪಠ್ಯ ವಿಷಯಗಳು

● ತಾರ್ಕಿಕತೆ ಸಾಮರ್ಥ್ಯ ● ಆಂಗ್ಲ ಭಾಷೆ ● ಸಾಂಖ್ಯಿಕ ಸಾಮರ್ಥ್ಯ ● ಸಾಮಾನ್ಯ ಅರಿವು (ಬ್ಯಾಂಕಿಂಗ್ ಉದ್ಯಮದ ವಿಶೇಷ ಉಲ್ಲೇಖದೊಂದಿಗೆ) ● ಕಂಪ್ಯೂಟರ್ ಜ್ಞಾನ

ಕನ್ನಡದಲ್ಲಿ ಬರೆಯಬಹುದು: ಕಚೇರಿ ಸಹಾಯಕರು (ವಿವಿಧೋದ್ದೇಶ) ಮತ್ತು ಆಫೀಸರ್ ಸ್ಕೇಲ್ I ಹುದ್ದೆಗಳಿಗಾಗಿ ಪರೀಕ್ಷೆ ಬರೆಯುವ ಕರ್ನಾಟಕದ ಅಭ್ಯರ್ಥಿಗಳಿಗೆ, ಇಂಗ್ಲಿಷ್, ಹಿಂದಿ, ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಪರೀಕ್ಷೆ ಬರೆಯುವ ಅವಕಾಶವಿದೆ .

ಹೆಚ್ಚಿನ ಮಾಹಿತಿಗೆ: https://www.ibps.in/crp-rrb-xi ಐಬಿಪಿಎಸ್ ಜಾಲತಾಣಕ್ಕೆ ಭೇಟಿ ನೀಡಿ.



ಪರೀಕ್ಷೆ ಸಿದ್ಧತೆಗೆ ಸಲಹೆಗಳು

- ಬ್ಯಾಂಕಿಂಗ್ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಅಭ್ಯರ್ಥಿಗಳಿಗೆ ಸೂಕ್ತ ಉತ್ತರ ನಿರ್ಧರಿಸುವ ಕೌಶಲ ಹಾಗೂ ಚುರುಕುತನವಿರಬೇಕು. ಈ ಕೌಶಲ ಕಲಿಯಲು ಸತತ ಅಭ್ಯಾಸದಿಂದ ಮಾತ್ರ ಸಾಧ್ಯ. ಇದಕ್ಕಾಗಿ ಅಭ್ಯರ್ಥಿಗಳು ಸಾಧ್ಯವಾದಷ್ಟು 'ಅಣಕು ಪರೀಕ್ಷೆ' ಗಳನ್ನು ಎದುರಿಸಬೇಕು.
- ಹಿಂದಿನ ವರ್ಷ ನಡೆದಿರುವ ವಿವಿಧ ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಬಿಡಿಸುವುದನ್ನು ಅಭ್ಯಾಸ ಮಾಡಬೇಕು.
- ಮುಖ್ಯವಾಗಿ, ತಾರ್ಕಿಕ ಪ್ರತಿಪಾದನೆ (Logical Reasoning), ಇಂಗ್ಲಿಷ್ ಭಾಷೆ (ವ್ಯಾಕರಣ, ಶಬ್ದಭಂಡಾರ, ಗ್ರಹಣಶಕ್ತಿ ಮತ್ತಿತರ ವಿಷಯಗಳು), ದತ್ತಾಂಶಗಳು (Quantitative Analysis) ಹಾಗೂ ಅರ್ಥವಿವರಣೆ (Data Interpretation) ವಿಷಯಗಳಲ್ಲಿ ಬಹಳಷ್ಟು ಅಧ್ಯಯನ ಮಾಡಬೇಕು. ಇದರೊಟ್ಟಿಗೆ ಸಾಮಾನ್ಯ ಜ್ಞಾನ /ಬ್ಯಾಂಕಿಂಗ್ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿ, ಪರಾಮರ್ಶಿಸುತ್ತಿರಬೇಕು.
- ಕಂಪ್ಯೂಟರ್ ಜ್ಞಾನದ ಪ್ರಾಥಮಿಕ ಜ್ಞಾನದ ಜೊತೆಗೆ, ಕಂಪ್ಯೂಟರ್ ತಂತ್ರಾಂಶಗಳಾದ DOS, ಮೈಕ್ರೊಸಾಫ್ಟ್ ವಿಂಡೋಸ್, ವಿಷುಯಲ್ ಬೇಸಿಕ್, ಎಂಎಸ್ ಆಫೀಸ್, ನೆಟ್ ವರ್ಕ್ ಜ್ಞಾನ ಹೊಂದಿದ್ದರೆ ಈ ವಿಷಯದಲ್ಲಿ ಹೆಚ್ಚುಅಂಕಗಳಿಸುವ ಸಾಧ್ಯ.

(ಮಾಹಿತಿ: ಬ್ರೆಟ್ ಸಲ್ಯೂಷನ್ಸ್ (www.brets.in), ಸ್ಪರ್ಧಾತ್ಮಕ ತರಬೇತಿ ಕೇಂದ್ರ, ಬೆಂಗಳೂರು)

(ಮುಂದಿನ ವಾರ: ಬ್ಯಾಂಕಿಂಗ್ ಪರೀಕ್ಷೆಗೆ ಅಧ್ಯಯನ ಸಿದ್ಧತೆ)

ಕೆಪಿಎಸ್‌ಸಿ ಗ್ರೂಪ್ 'ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1) ವಿದ್ಯುತ್ ಚಾಲಿತ ವಾಹನಗಳಲ್ಲಿ ಬಳಸುವ ಲಿಥಿಯಂ ಬ್ಯಾಟರಿಗಳ ಬದಲಿಗೆ ಹೊಸ ತಲೆಮಾರಿನ ಘನಸ್ಥಿತಿ (ಸಾಲಿಡ್ ಸ್ಟೇಟ್) ಬ್ಯಾಟರಿ ತಂತ್ರಜ್ಞಾನವನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಆವಿಷ್ಕರಿಸಿದ್ದಾರೆ.

2) ಬೆಂಗಳೂರಿನ ಸ್ಟಾರ್ಟ್‌ಅಪ್ ನಾರ್ಡಿಸ್ಚೆ ಟೆಕ್ನಾಲಜೀಸ್(NORDISCHE TECHNOLOGIES) ವಿಶ್ವದಲ್ಲಿಯೇ ಅತಿವೇಗವಾಗಿ ಚಾರ್ಜ್ ಆಗುವ ಹಾಗೂ ಬೆಂಕಿ ಹತ್ತಿಕೊಳ್ಳದ ಅಲ್ಯೂಮಿನಿಯಂ ಐಯಾನ್ ಗ್ರಾಫೇನ್ ಪೌಚ್ ಸೆಲ್ಸ್ (Aluminum Ion Graphene Pouch Cells) ತಂತ್ರಜ್ಞಾನವನ್ನು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿಯ ಜತೆಗೂಡಿ ಸಂಶೋಧನೆ ಮಾಡಿದೆ.

ಉತ್ತರ ಸಂಕೇತಗಳು

ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

2) ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಗುಣವಾಗಿ ಈ ಕೆಳಗೆ ಸೂಚಿಸಿರುವ ಯಾವ ಶಾಲೆಯನ್ನು ಆರಂಭಿಸಲು ನಿಶ್ಚಯಿಸಲಾಗಿದೆ?

ಎ) ಅಟಲ್ ಇನ್ನೋವೇಟಿವ್ ಸ್ಕೂಲ್ ಬಿ) ಪಿಎಂಶ್ರೀ ಸ್ಕೂಲ್
ಸಿ) ಶ್ರೀವಿದ್ಯಾಕೇಂದ್ರ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಬಿ

3) ವಿಶ್ವದ ಅತಿ ವೇಗದ ಸೂಪರ್ ಕಂಪ್ಯೂಟರ್ ಮತ್ತು ಕೃತಕ ಬುದ್ಧಿಮತ್ತೆ ಎಂದು ಯಾವುದನ್ನು ಗುರುತಿಸಲಾಗಿದೆ?

ಎ) ಫ್ರಾಂಟಿಯರ್(Frontier) ಬಿ) ಪರಮ್
ಸಿ) ಆಕಾಶ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

4) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಅರಬ್ಬೀ ಸಮುದ್ರದಲ್ಲಿ 3680 ಬಗೆಯ ಮೀನಿನ ಸಂತತಿಗಳಿವೆ. ಇದರಲ್ಲಿ ಶೇ 15ರಷ್ಟು ನಮ್ಮ ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿವೆ.

2) ನಮ್ಮ ರಾಜ್ಯದ ಮಂಗಳೂರಿನ ತಣ್ಣೀರು ಬಾವಿಯಲ್ಲಿ ಡಾಲ್ಫಿನ್ ಸಂರಕ್ಷಣಾ ಕೇಂದ್ರ ಆರಂಭವಾಗಲಿದೆ.

ಉತ್ತರ ಸಂಕೇತಗಳು

ಎ) 1ನೇ ಹೇಳಿಕೆ ಮಾತ್ರ ಸರಿಯಾಗಿವೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿವೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

5) ನವದೆಹಲಿಯ ಇಂಡಿಯಾ ಗೇಟ್ ಬಳಿಯಲ್ಲಿ ನಿರ್ಮಿಸಲಾಗುವ ನೇತಾಜಿ ಸುಭಾಷ್ ಚಂದ್ರ ಬೋಸ್ ಪ್ರತಿಮೆಯನ್ನು ಯಾರು ಕೆತ್ತಲಿದ್ದಾರೆ?

ಎ) ಜಯರಾಜ್ ಕುಮಾರ್ ಬಿ) ಅರುಣ್ ಯೋಗಿರಾಜ್
ಸಿ) ರಾಮಚರಣ ಪ್ರಸಾದ್
ಡಿ) ಮೇಲಿನ ಯಾರೂ ಅಲ್ಲ

ಉತ್ತರ: ಬಿ

6) ಇಸ್ರೇಲ್ ದೇಶದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿಹಾಕಿದ ಮೊದಲ ದೇಶ ಯಾವುದು?

ಎ) ಕತಾರ್ ಬಿ) ಇರಾನ್
ಸಿ) ಇರಾಕ್ ಡಿ) ಯು ಎ ಇ

ಉತ್ತರ: ಡಿ

7) ಭೂಮಿಯ ಮೇಲಿನ ಅತಿದೊಡ್ಡ ಸಮುದ್ರದ ಸಸ್ಯ ಎಲ್ಲಿ ಪತ್ತೆ ಹಚ್ಚಲಾಗಿದೆ?

ಎ) ಆಫ್ರಿಕಾದ ಕರಾವಳಿ ಬಿ) ಭಾರತದ ಕರಾವಳಿ
ಸಿ) ಜಪಾನ್ ದೇಷದ ಕರಾವಳಿ ಡಿ) ಆಸ್ಟ್ರೇಲಿಯಾದ ಕರಾವಳಿ

ಉತ್ತರ: ಡಿ

8) ದೇಶದಲ್ಲಿ ಶೇ 44ರಷ್ಟು ಚಿನ್ನದ ನಿಕ್ಷೇಪ ಇರುವುದಾಗಿ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ಸಮೀಕ್ಷೆ ತಿಳಿಸಿದೆ. ಯಾವ ರಾಜ್ಯದಲ್ಲಿ ಈ ನಿಕ್ಷೇಪ ಪತ್ತೆ ಹಚ್ಚಿರುವುದಾಗಿ ಅದು ತಿಳಿಸಿದೆ?

ಎ) ಉತ್ತರಪ್ರದೇಶ ಬಿ) ಬಿಹಾರ್
ಸಿ) ಮಹಾರಾಷ್ಟ್ರ ಡಿ) ಅಸ್ಸಾಂ

ಉತ್ತರ: ಬಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

'ನಿಮಗಿದು ಗೊತ್ತೆ?' ಕುರಿತ ಮಾಹಿತಿಗಾಗಿ prajavani.net/education-career

'ನಗರ ಉಷ್ಣದ್ವೀಪ'ಗಳೂ ಹವಾಮಾನ ಬದಲಾವಣೆಯೂ...

ಯುಪಿಎಸ್‌ಸಿ- ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ –2, ಕೆಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ –2 ಹಾಗೂ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಸುದ್ದಿಯಲ್ಲಿರುವ ಪರಿಸರ ಬಿಕ್ಕಟ್ಟಿನ ಕುರಿತ ಮಾಹಿತಿ ಇಲ್ಲಿದೆ.

ಯು.ಟಿ. ಆಯಿಶ ಫರ್ಝಾನ

ಇತ್ತೀಚೆಗೆ ದೇಶದ ವಿವಿಧ ಭಾಗಗಳು ತೀವ್ರ ಬಿಸಿಗಾಳಿಯ (Heat Wave) ಪರಿಣಾಮವನ್ನು ಅನುಭವಿಸಿದ್ದನ್ನು ಗಮನಿಸಲಾಗಿದೆ. ಅದರಲ್ಲೂ, ನಗರಗಳು, ತಮ್ಮ ಸನಿಹದ ಕೆಲವು ಪ್ರದೇಶಗಳಿಗಿಂತ ಮತ್ತು ವಿಶೇಷವಾಗಿ ಸುತ್ತಲಿನ ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚು ಬಿಸಿಯಾಗಿರುವುದನ್ನು ಗುರುತಿಸಲಾಗಿದೆ. ಈ ವಿದ್ಯಮಾನಗಳನ್ನು 'ನಗರ ಉಷ್ಣ ದ್ವೀಪಗಳು (Urban Heat Island)' ಎಂದು ಕರೆಯಲಾಗುತ್ತದೆ.

ಕಾರಣಗಳು ಮತ್ತು ಪರಿಣಾಮಗಳು

ಅನಿಯಂತ್ರಿತ ನಿರ್ಮಾಣ ಚಟುವಟಿಕೆಗಳು ಮತ್ತು ಕಾರ್ಬನ್-ಹೀರಿಕೊಳ್ಳುವಿಕೆ: ನಗರಗಳಲ್ಲಿ ರಸ್ತೆ ಮತ್ತು ಕಟ್ಟಡ ನಿರ್ಮಾಣಕ್ಕೆ ಕಾಂಕ್ರಿಟ್, ಡಾಂಬರು ಮತ್ತು ಟಾರ್‌ನಂತಹ ವಸ್ತುಗಳನ್ನು ಬಳಸಲಾಗುತ್ತದೆ. ಅವು ಸಾಕಷ್ಟು ಶಾಖವನ್ನು ಹಿಡಿದಿಟ್ಟುಕೊಳ್ಳುತ್ತಾ ನಗರಗಳ ಮೇಲ್ಮೈ ತಾಪಮಾನವನ್ನು ಸರಾಸರಿ ಹೆಚ್ಚಿಸುತ್ತವೆ.

ಆಲ್ಬೆಡೋದಲ್ಲಿನ ಕಡಿತ

ಅನೇಕ ನಗರ ಪ್ರದೇಶಗಳಲ್ಲಿನ ಕಟ್ಟಡಗಳು ಕಪ್ಪು ಗಾಜು ಅಳವಡಿಸಿರುವುದು ಅಥವಾ ಕಪ್ಪು ಗೋಡೆ ಬಣ್ಣದ ಮೇಲ್ಮೈಯನ್ನು ಹೊಂದಿರುವ ಕಾರಣ, ಇದು ಆಲ್ಬೆಡೊವನ್ನು(ಭಾಗಶಃ ಪ್ರತಿಫಲನ ಶಕ್ತಿಯನ್ನು) ಕಡಿಮೆ ಮಾಡುತ್ತದೆ ಮತ್ತು ಶಾಖ ಹೀರಿಕೊಳ್ಳುವ ಪ್ರಕ್ರಿಯೆಯನ್ನು ಹೆಚ್ಚಿಸುತ್ತದೆ.

'ನಗರ ಕಣಿವೆ' ಪರಿಣಾಮ

ಎತ್ತರದ ಕಟ್ಟಡಗಳಿಂದ ತುಂಬಿದ ನಗರಗಳ ಮಧ್ಯೆ ಇರುವ ಸಣ್ಣ ಬೀದಿಗಳಲ್ಲಿ ಗಾಳಿಯ ಪ್ರಸರಣಕ್ಕೆ ಅವಕಾಶವಿರುವುದಿಲ್ಲ. ಎತ್ತರದಲ್ಲಿ ವ್ಯತ್ಯಾಸವಿರುವ ಕಟ್ಟಡಗಳಿಂದಾಗಿ ಗಾಳಿಯ ಸಂಚಾರಕ್ಕೆ ತಡೆಯಾಗುತ್ತದೆ. ಅಲ್ಲಿನ ಗಾಳಿಯು ಬಿಸಿಯಾಗುತ್ತಾ ಹಗುರವಾಗುತ್ತಾ ಮೇಲ್ಮುಖವಾಗಿ ಚಲಿಸುತ್ತದೆ.



ಕಟ್ಟಡಗಳ ಗೋಡೆಗಳು ಗಾಳಿಯ ಸಂಚಾರಕ್ಕೆ ಅಡ್ಡಿಯುಂಟು ಮಾಡುತ್ತವೆ. ಬಿಸಿಗಾಳಿ ಒಂದೆಡೆ ಶೇಖರಣೆಗೊಂಡು ಕಣಿವೆಗಳೊಳಗಿನ ಬಿಸಿಗಾಳಿಯ ಅನುಭವವನ್ನು ನೀಡುತ್ತವೆ. ಇವು ವಾತಾವರಣ ನೈಸರ್ಗಿಕವಾಗಿ ತಂಪಾಗಿಸುವ ಸಾಧ್ಯತೆಗಳನ್ನು ಕಡಿಮೆ ಮಾಡುತ್ತವೆ. ಈ ಪರಿಣಾಮವನ್ನು 'ನಗರ ಕಣಿವೆಯ ಪರಿಣಾಮ' ಎಂದು ಕರೆಯಲಾಗುತ್ತದೆ.

ಪಳೆಯುಳಿಕೆ ಇಂಧನಗಳ ಬಳಕೆ: ಸಾರಿಗೆ ವ್ಯವಸ್ಥೆಗೆ, ಕೈಗಾರಿಕೆಗಳಿಗೆ ಪಳೆಯುಳಿಕೆ ಇಂಧನಗಳ ನಿರಂತರ ಬಳಕೆಯು ಶಾಖದ ಪರಿಣಾಮವನ್ನು ಹೆಚ್ಚಿಸುತ್ತದೆ.

ಹವಾನಿಯಂತ್ರಣ ವ್ಯವಸ್ಥೆಗಳು: ನಗರ ಪ್ರದೇಶದಲ್ಲಿನ ತಾಪಮಾನ ಹೆಚ್ಚಾಗುವುದು ಹವಾನಿಯಂತ್ರಣ ವ್ಯವಸ್ಥೆಗಳ ಬಳಕೆ ಹೆಚ್ಚಲು ಕಾರಣವಾಗುತ್ತದೆ. ಇದು ಒಂದು ವಿಷಚಕ್ರದ ರೀತಿಯಲ್ಲಿ ಸಾಗುತ್ತದೆ.

ಹವಾನಿಯಂತ್ರಕಗಳು ವಾತಾವರಣದ ಗಾಳಿಯನ್ನು ಹೀರಿಕೊಂಡು ತಂಪಾಗಿಸಿ ತಿರುಗಿ ಶಾಖಮಯ ಗಾಳಿಯನ್ನು ವಾತಾವರಣಕ್ಕೆ ಕಳಿಸುತ್ತವೆ. ಇದು ಮತ್ತಷ್ಟು ಸ್ಥಳೀಯ ತಾಪಮಾನದ ಹೆಚ್ಚಳಕ್ಕೆ ಕಾರಣವಾಗುತ್ತದೆ.

ಕಡಿಮೆಯಾದ ಮರಗಳ ಹೊದಿಕೆ ಮತ್ತು ಹಸಿರು ಪ್ರದೇಶಗಳು: ಹೆಚ್ಚುತ್ತಿರುವ ಅರಣ್ಯನಾಶ, ಮರಗಳ ಕಡಿಯುವಿಕೆ, ಹಸಿರು ಹೊದಿಕೆಯ ಕೊರತೆ, ಕೆರೆಗಳ ಅತಿಕ್ರಮಣ ಇತ್ಯಾದಿಗಳು ನಗರ ಉಷ್ಣ ದ್ವೀಪಗಳಿಗೆ ನೇರ ಕಾರಣಗಳಾಗಿವೆ.

ನಗರಗಳ ಮಾಲಿನ್ಯಗಳ ಕಾರಣದಿಂದ ವಾತಾವರಣ ಬಿಸಿಯಾಗಿ ಉಷ್ಣತೆ ಹೆಚ್ಚಾಗಿ ಬಾಷ್ಪೀಕರಣವಾಗಿ ಮಳೆ ಸುರಿಯುತ್ತದೆ. ಆದರೆ ಆ ಮಳೆಯ ನೀರು ಸಮರ್ಪಕವಾಗಿ ವಿಲೇವಾರಿಯಾಗುವ ರೀತಿಯಲ್ಲಿ ನಗರಗಳನ್ನು ವಿನ್ಯಾಸಗೊಳಿಸಿಲ್ಲ.

EXAM DH ಪ್ರಜಾವಾಣಿ MASTERMIND™

ಹವಾಮಾನ ಬದಲಾವಣೆ

ಹವಾಮಾನ ವೈಪರೀತ್ಯ ಸೇರಿದಂತೆ ಸುದ್ದಿಯಲ್ಲಿರುವ ಪರಿಸರ ಸಂಬಂಧಿ ವಿಚಾರಗಳ ಕುರಿತು ಸಿವಿಲ್ ಸರ್ವಿಸ್ ಪರೀಕ್ಷಾ ಕೇಂದ್ರಿತವಾಗಿ ಬರೆಯಲಾಗಿರುವ ಸಂಪೂರ್ಣ ಸರಳಗನ್ನಡ ವಿವರಣೆಗಳಿಗಾಗಿ ಪ್ರಜಾವಾಣಿ-ಡೆಕನ್‌ಹೆರಾಲ್ಡ್‌ನ 'ಮಾಸ್ಟರ್‌ಮೈಂಡ್'ಗೆ ಚಂದಾದಾರರಾಗಿ. ಚಂದಾಕ್ಕಾಗಿ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

www.exammastermind.com

ರಾಜ್ಯಸಭೆ ಚುನಾವಣೆ: ಕಾಂಗ್ರೆಸ್ – ಜೆಡಿಎಸ್ ಪಕ್ಷಗಳ ನಡುವೆ ಜೋರಾದ ಹಗ್ಗ ಜಗ್ಗಾಟ

ಬೆಂಬಲ ಕೋರಿದ ‘ಕೈ’; ಮಣಿಯದ ದಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆ ಚುನಾವಣೆಯ ಮತದಾನದ ದಿನ ಸಮೀಪಿಸುತ್ತಿದ್ದಂತೆಯೇ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ನಡುವಿನ ಹಗ್ಗ ಜಗ್ಗಾಟ ಜೋರಾಗಿದೆ. ತನ್ನ ಎರಡನೇ ಅಭ್ಯರ್ಥಿಗೆ ಬೆಂಬಲ ನೀಡುವಂತೆ ಕಾಂಗ್ರೆಸ್ ಮನವಿ ಮಾಡಿದ್ದರೆ, ಪಕ್ಷದ ಅಭ್ಯರ್ಥಿಯನ್ನು ಕಣದಿಂದ ನಿವೃತ್ತಿಗೊಳಿಸಲು ಜೆಡಿಎಸ್ ಸ್ಪಷ್ಟವಾಗಿ ನಿರಾಕರಿಸಿದೆ.

ಜೆಡಿಎಸ್ ಅಭ್ಯರ್ಥಿ ಡಿ. ಕುಪೇಂದ್ರ ರೆಡ್ಡಿ ಅವರನ್ನು ಸ್ಪರ್ಧೆಯಿಂದ ನಿವೃತ್ತಿಗೊಳಿಸಿ ತಮ್ಮ ಎರಡನೇ ಅಭ್ಯರ್ಥಿ ಮನ್ಸೂರ್ ಅಲಿಖಾನ್ ಅವರಿಗೆ ಬೆಂಬಲ ನೀಡುವಂತೆ ಕಾಂಗ್ರೆಸ್ ಬೇಡಿಕೆ ಇಟ್ಟಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸೇರಿದಂತೆ ಕಾಂಗ್ರೆಸ್‌ನ ಹಲವು ನಾಯಕರು ಜೆಡಿಎಸ್ ವರಿಷ್ಠರನ್ನು ಸಂಪರ್ಕಿಸಿ, ಈ ಪ್ರಸ್ತಾವವನ್ನು ಮುಂದಿಟ್ಟಿದ್ದಾರೆ.

ಆದರೆ, ತಮ್ಮ ಅಭ್ಯರ್ಥಿ ಕಣದಲ್ಲೇ ಉಳಿಯುತ್ತಾರೆ ಎನ್ನುವ ಮೂಲಕ ಕಾಂಗ್ರೆಸ್ ಬೇಡಿಕೆಗೆ ಮಣಿಯುವುದಿಲ್ಲ ಎಂಬ ಸಂದೇಶ ರವಾನಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ. ಕುಮಾರಸ್ವಾಮಿ, ಎರಡೂ ಪಕ್ಷಗಳ ಶಾಸಕರ ಎರಡನೇ ಪ್ರಾಶಸ್ತ್ಯದ ಮತಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಪ್ರಸ್ತಾವ ಮುಂದಿಟ್ಟಿದ್ದಾರೆ.

ಕಾಂಗ್ರೆಸ್ ಕಡೆ ಬೆರಳು ತೋರಿಸಬೇಡಿ: 'ಕೆಡಿಸುವ ಆಟ ಆಡುತ್ತಿರುವುದು ಜೆಡಿಎಸ್. ಕಾಂಗ್ರೆಸ್ ಅಧಿಕ ಸಂಖ್ಯೆಯಲ್ಲಿದ್ದಾಗಲೂ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲಾಗಿತ್ತು. ಹೀಗಿರುವಾಗ ಕುಮಾರಸ್ವಾಮಿ ಅವರು ಕಾಂಗ್ರೆಸ್ ಕಡೆ ಬೆರಳು ತೋರಿಸುವುದು ಸರಿಯಲ್ಲ' ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಧಾರವಾಡದಲ್ಲಿ ತಿಳಿಸಿದರು.

‘ಅಭ್ಯರ್ಥಿ ನಿವೃತ್ತಿಯ ಪ್ರಶ್ನೆಯೇ ಇಲ್ಲ’

ಬೆಂಗಳೂರು: ರಾಜ್ಯಸಭೆ ಚುನಾವಣಾ ಕಣದಿಂದ ತಮ್ಮ ಪಕ್ಷದ ಅಭ್ಯರ್ಥಿಯನ್ನು ನಿವೃತ್ತಿಗೊಳಿಸುವ ಪ್ರಶ್ನೆಯೇ ಇಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.


ಕುಮಾರಸ್ವಾಮಿ

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಜೆಡಿಎಸ್‌ನಲ್ಲಿ 32 ಶಾಸಕರಿದ್ದಾರೆ. ಕಾಂಗ್ರೆಸ್‌ನಲ್ಲಿ ಹೆಚ್ಚುವರಿ ಮತಗಳ ಸಂಖ್ಯೆ 25 ಮಾತ್ರ. ಅವರ ದಬ್ಬಾಳಿಕೆಗೆ ನಾವು ಬಗ್ಗಲು ಆಗುತ್ತದಾ’ ಎಂದು ಪ್ರಶ್ನಿಸಿದರು.

ಎಚ್.ಡಿ. ದೇವೇಗೌಡ ಅವರು ರಾಜ್ಯಸಭೆಗೆ ಆಯ್ಕೆಯಾಗಲು ಬೆಂಬಲ ನೀಡಿದ್ದಕ್ಕೆ ಪ್ರತಿಯಾಗಿ ಈಗ ಬೆಂಬಲ ನೀಡುವಂತೆ ಕಾಂಗ್ರೆಸ್ ನಾಯಕರು ಕೇಳುತ್ತಿದ್ದಾರೆ. ಆಗಿನ ಸನ್ನಿವೇಶ ಮತ್ತು ಈಗಿನ ಸನ್ನಿವೇಶ ಬೇರೆ ಬೇರೆ. ಆಗ ಬಿಜೆಪಿ ಕೂಡ ದೇವೇಗೌಡರ ಸ್ಪರ್ಧೆಯನ್ನು ಬೆಂಬಲಿಸಿತ್ತು. ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕಿಳಿಸುವ ಮುನ್ನ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರೊಂದಿಗೆ ಚರ್ಚೆ ನಡೆಸಲಾಗಿತ್ತು ಎಂದರು.

‘ಎರಡನೇ ಪ್ರಾಶಸ್ತ್ಯದ ಮತಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಅವಕಾಶವಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಜಿ.ಟಿ. ದೇವೇಗೌಡ, ಗುಬ್ಬಿ ಶ್ರೀನಿವಾಸ್, ಶ್ರೀನಿವಾಸ ಗೌಡ, ಕೆ.ಎಂ. ಶಿವಲಿಂಗೇಗೌಡ ಸೇರಿದಂತೆ ಜೆಡಿಎಸ್‌ನ ಎಲ್ಲ 32 ಶಾಸಕರೂ ಒಗ್ಗಟ್ಟಾಗಿ ಇದ್ದಾರೆ. ಗುರುವಾರ ಮಧ್ಯಾಹ್ನದ ವೇಳೆಗೆ ಏನಾಗುವುದೋ ನೋಡೋಣ’ ಎಂದು ಹೇಳಿದರು.

‘ಈಗ ಸ್ವಾಭಿಮಾನ ಕಾಡುತ್ತಿದೆಯೇ’

ಬೆಂಗಳೂರು: ರಾಜ್ಯಸಭೆ ಚುನಾವಣೆಗೆ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೊದಲು ಕಾಂಗ್ರೆಸ್ ನಾಯಕರ ಜತೆ ಮಾತುಕತೆಯನ್ನೇ ನಡೆಸದ ಜೆಡಿಎಸ್ ಪಕ್ಷಕ್ಕೆ ಈಗ ಸ್ವಾಭಿಮಾನದ ಪ್ರಶ್ನೆ ಕಾಡುತ್ತಿದೆಯೇ ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಡಿ.ಕೆ. ಶಿವಕುಮಾರ್

‘ಕಾಂಗ್ರೆಸ್ ತನ್ನ ಎರಡನೇ ಪ್ರಾಶಸ್ತ್ಯದ ಮತಗಳನ್ನು ಜೆಡಿಎಸ್ ಅಭ್ಯರ್ಥಿಗೆ ನೀಡಲಿ’ ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ಕುರಿತು ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಸಾಕಷ್ಟು ಭಿನ್ನಾಭಿಪ್ರಾಯಗಳ ನಡುವೆಯೂ ಹಿಂದೆ ಹಲವು ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಜೆಡಿಎಸ್ ಅಭ್ಯರ್ಥಿಗಳನ್ನು ಬೆಂಬಲಿಸಿತ್ತು. ಈಗ ಪಕ್ಷದ ನಾಯಕರ ತೀರ್ಮಾನದಂತೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಿದೆ’ ಎಂದರು.

‘ಜಾತ್ಯತೀತ ಸಿದ್ಧಾಂತ ಉಳಿಸಿಕೊಳ್ಳಲು ಜೆಡಿಎಸ್ ಈ ಬಾರಿ ನಮ್ಮ ಅಭ್ಯರ್ಥಿಗಳನ್ನು ಬೆಂಬಲಿಸಬೇಕು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮನವಿ ಮಾಡಿದ್ದಾರೆ. ಇದು ಕಾಂಗ್ರೆಸ್ ಪಕ್ಷದ ತೀರ್ಮಾನ. ಅದೇ ರೀತಿ ಜೆಡಿಎಸ್ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಲಿ ಎಂದು ಮನವಿ ಮಾಡುತ್ತೇನೆ. ಕುಮಾರಸ್ವಾಮಿ ಜೆಡಿಎಸ್ ನಾಯಕರಾಗಿ ಏನು ಬೇಕಾದರೂ ಮಾತನಾಡಬಹುದು. ನಾನು ಹಾಗೆ ಮಾತನಾಡಲು ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷ ಎಂದರೆ ನಾನೊಬ್ಬನೇ ಅಲ್ಲ. ನಾಯಕರು ಮತ್ತು ಕಾರ್ಯಕರ್ತರ ಜತೆ ಚರ್ಚಿಸಿ ಮಾತನಾಡಬೇಕಾಗುತ್ತದೆ. ವೈಯಕ್ತಿಕವಾಗಿ ಮಾತನಾಡಿ, ರಂಪಾಟ ಮಾಡಿಕೊಂಡು ಚುನಾವಣೆ ನಡೆಸಲು ಬಯಸುವುದಿಲ್ಲ’ ಎಂದು ಹೇಳಿದರು.

ವಚನ ಶಿಲಾ ಮಂಟಪ

ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ವಿರಕ್ತಮಠದಿಂದ ನಿರ್ಮಿಸಿರುವ ವಚನ ಶಿಲಾಮಂಟಪ ಕುರಿತು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಮಾಹಿತಿ ನೀಡಿದರು. ಸೊನ್ನದ ಶಿವಾನಂದ ಸ್ವಾಮೀಜಿ, ಚಡಚಣ ಷಡಕ್ಷರಿ ಸ್ವಾಮೀಜಿ, ಹರಸೂರ ಸ್ವಾಮೀಜಿ, ಹೊಸರಿತ್ತಿ ಸ್ವಾಮೀಜಿ, ಧಾರವಾಡ ಮುರಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಯರನಾಳ ವಿರಕ್ತಮಠದ ಸಂಗನಬಸವ ಸ್ವಾಮೀಜಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಇದ್ದಾರೆ - ಪ್ರಜಾವಾಣಿ ಚಿತ್ರ

‘ಕೋಮು ವೈರಸ್ ತುಂಬಲು ಸರ್ಕಾರದ ಯತ್ನ’

ಪಠ್ಯಪುಸ್ತಕ ತಿರುಚುವಿಕೆ ಪ್ರತಿಭಟನಾ ಸಮಾವೇಶ: ಎಸ್‌.ಜಿ. ಸಿದ್ದರಾಮಯ್ಯ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕೋಮು ವೈರಸ್ ತುಂಬುವ ಪ್ರಯತ್ನ ನಡೆಸುತ್ತಿದೆ’ ಎಂದು ಕವಿ ಎಸ್.ಜಿ.ಸಿದ್ದರಾಮಯ್ಯ ದೂರಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ) ಬುಧವಾರ ಇಲ್ಲಿ ಆಯೋಜಿಸಿದ್ದ ಪಠ್ಯಪುಸ್ತಕ ತಿರುಚುವಿಕೆ ವಿರೋಧಿಸಿ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಆರ್‌ಎಸ್‌ಎಸ್ ಶಾಖೆಗಳಲ್ಲಿ ಕಲಿಸುವುದನ್ನು ಶಾಲಾ ವಿದ್ಯಾರ್ಥಿಗಳಿಗೆ ಕಲಿಸಬೇಕೆ’ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ‘ಬಿಜೆಪಿ ಸರ್ಕಾರವು ದ್ವೇಷ ಬಿತ್ತುವ ಕೆಲಸಕ್ಕೆ ಮುಂದಾಗಿದೆ’ ಎಂದು ಆಪಾದಿಸಿದರು.

‘ವಿಷವರ್ತುಲದಲ್ಲಿ ಸಿಲುಕಿದ್ದೇವೆ. ವ್ಯವಸ್ಥೆಯ ಹಿತಕ್ಕಾಗಿ ಸತ್ಯವನ್ನು ಮಾತನಾಡಬೇಕಿದ್ದು, ಹೋರಾಟವು ಗುರಿ ಮುಟ್ಟುವ ತನಕ ಸ್ಥಗಿತವಾಗದು. ಸಂವಿಧಾನಬದ್ಧವಾಗಿ ಪಠ್ಯಪುಸ್ತಕ ಪರಿಷ್ಕರಣೆ ನಡೆದಿಲ್ಲ. ಬದಲಿಗೆ ಆರ್‌ಎಸ್‌ಎಸ್ ಶಾಖೆಯ ಸೂಚನೆಯಂತೆ ಪರಿಷ್ಕರಿಸಲಾಗಿದೆ. ಮಠಾಧೀಶರು, ಧ್ವನಿಯೆತ್ತಿದ ಮೇಲೆ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ವಿಸರ್ಜಿಸಿರುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ. ಕಣ್ಣೊರೆಸುವ ತಂತ್ರದ ಬದಲಿಗೆ ವಿದ್ಯಾರ್ಥಿಗಳಿಗೆ ಹಳೇ ಪಠ್ಯಪುಸ್ತಕವನ್ನೇ ವಿತರಿಸಬೇಕು’ ಎಂದು ಆಗ್ರಹಿಸಿದರು.

ಕವಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಿ, ‘ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯು 10 ದಲಿತ ಕವಿಗಳ ಪಾಠಕ್ಕೆ ಕತ್ತರಿ ಹಾಕಿ ಬ್ರಾಹ್ಮಣರು ಬರೆದ ಪಾಠ ಸೇರಿಸಿದೆ. ಮುಸ್ಲಿಂ ಲೇಖಕರ ಪಾಠಗಳೂ ಮಾಯವಾಗಿವೆ. ಸಮಿತಿಯಲ್ಲೂ 9 ಮಂದಿ ಬ್ರಾಹ್ಮಣರಿದ್ದಾರೆ. ಇತಿಹಾಸದ ಅರಿವಿಲ್ಲದ ವ್ಯಕ್ತಿಯನ್ನು ಪರಿಷ್ಕರಣೆ ಸಮಿತಿಗೆ ನೇಮಕ ಮಾಡಿದ್ದೇ ದುರಂತ’ ಎಂದು ಬೇಸರ ವ್ಯಕ್ತಪಡಿಸಿದರು.

‘ರಾಜ್ಯದಲ್ಲಿ ಗುಲಾಮಗಿರಿಯ ಸರ್ಕಾರವಿದೆ. ಕೇಶವಕೃಪಾದ ಸಂದೇಶಕ್ಕೆ ತಕ್ಕಂತೆ ಆದೇಶಗಳು ಬರುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಮಹಾನ್ ಸುಳ್ಳುಗಾರ’ ಎಂದು ಮಾಜಿ ಅಡ್ವೋಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್ ಅವರು ಆಪಾದಿಸಿದರು.

ಶಿಕ್ಷಣ ತಜ್ಞ ಡಾ.ವಿ.ಪಿ.ನಿರಂಜನಾರಾಧ್ಯ ಮಾತನಾಡಿ, ‘ಬದಲಾವಣೆಯನ್ನು ಯಾರೂ ನಿರಾಕರಿಸುತ್ತಿಲ್ಲ. ಪರಿಷ್ಕರಣೆಯು ಸಂವಿಧಾನಬದ್ಧವಾಗಿ ಇರಬೇಕು ಎಂಬುದು ಒತ್ತಾಸೆ. ಎಲ್ಲರೂ ಒಪ್ಪುವಂತೆ ಪರಿಷ್ಕರಣೆ ಮಾಡಬೇಕಿತ್ತು’ ಎಂದು ಅವರು ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ.ಎ.ಮುರಿಗೆಪ್ಪ, ‘ಸಾಹಿತಿಗಳು, ಚಿಂತಕರು ಸರ್ಕಾರದ ನಡೆಯನ್ನು ಖಂಡಿಸಬೇಕು. ಮಾತನಾಡುವ ಕಾಲ ಬಂದಿದ್ದು ಈಗ ಮೌನ ವಹಿಸುವುದು ಸರಿಯಲ್ಲ. ಪ್ರಶ್ನಿಸದಿದ್ದರೆ ಎಲ್ಲ ಮಹನೀಯರ ಪಠ್ಯಗಳೂ ಮಾಯವಾಗಲಿವೆ’ ಎಂದು ಪಠ್ಯಪುಸ್ತಕದ ಪರಿಷ್ಕರಣೆಯ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಪತ್ರಕರ್ತ ಬಿ.ಎಂ.ಹನೀಫ್ ಮಾತನಾಡಿ, ಸತ್ಯವನ್ನು ಮರೆಮಾಚಿ ಸುಳ್ಳುಗಳನ್ನು ಹೇರುವ ಪ್ರಯತ್ನವು ನಡೆಯುತ್ತಿದೆ ಎಂದು ಹೇಳಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯ ಉಪಾಧ್ಯಕ್ಷ ವಿ.ಎನ್. ರಾಜಶೇಖರ್, ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಹಾಗೂ ಅಜಯ್ ಕಾಮತ್ ಹಾಜರಿದ್ದರು.

ಬೆಂಗಳೂರಿನಲ್ಲಿ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ) ಬುಧವಾರ ಆಯೋಜಿಸಿದ್ದ ಪಠ್ಯಪುಸ್ತಕ ತಿರುಚುವಿಕೆ ವಿರೋಧಿಸಿ ಪ್ರತಿಭಟನಾ ಸಮಾವೇಶದಲ್ಲಿ ಶಿಕ್ಷಣ ತಜ್ಞ ಡಾ.ವಿ.ಪಿ.ನಿರಂಜನಾರಾಧ್ಯ ಹಾಗೂ ಕವಿ ಎಸ್‌ ಜಿ.ಸಿದ್ದರಾಮಯ್ಯ ಅವರು ಚರ್ಚಿಸಿದರು. ಡಾ.ಮೂಡ್ನಾಕೂಡು ಚಿನ್ನಸ್ವಾಮಿ (ಎಡದಿಂದ ಮೊದಲಿಗರು) ಇದ್ದರು.

ಶೀಘ್ರವೇ ಪರಿಷ್ಕೃತ ಪಠ್ಯ ಪೂರೈಕೆ: ನಾಗೇಶ್

ಧಾರವಾಡ: ‘ಪಠ್ಯ ಪುಸ್ತಕ ಪರಿಷ್ಕರಣೆಯಲ್ಲಿ ತಪ್ಪುಗಳಾಗಿದ್ದು, ಅವುಗಳನ್ನು ಒಪ್ಪಿಕೊಂಡು ಪರಿಷ್ಕರಣೆ ಮಾಡಲಾಗುತ್ತಿದೆ. ಆಗಿರುವ ಲೋಪದೋಷಗಳನ್ನು ಸರಿಪಡಿಸಿ, ಆದಷ್ಟು ಬೇಗ ಪರಿಷ್ಕೃತ ಪಠ್ಯಪುಸ್ತಕ ಪೂರೈಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ನಗರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಶೇ 80ರಷ್ಟು ಪರಿಷ್ಕೃತ ಪಠ್ಯ ಪುಸ್ತಕಗಳನ್ನು ಕೊಡಲಾಗಿದೆ. ಇನ್ನೊಂದು ತಿಂಗಳಲ್ಲಿ ಉಳಿದ ಎಲ್ಲ ಶಾಲೆಗಳಿಗೂ ಪುಸ್ತಕಗಳನ್ನು ಒದಗಿಸಲಾಗುವುದು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಈ ಬಾರಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಿದ್ದೇವೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ 27 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಿದ್ದೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎನ್‌ಎಸ್‌ಯುಐ ಕಾರ್ಯಕರ್ತರಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ತಿಪಟೂರು: ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಮನೆಗೆ ಮುತ್ತಿಗೆ ಹಾಕಿದ ಆರೋಪದ ಮೇಲೆ ಬಂಧಿಸಲಾಗಿದ್ದ ಎನ್‌ಎಸ್‌ಯುಐ 24 ಕಾರ್ಯಕರ್ತರಿಗೆ ಜಿಲ್ಲಾ ಹೆಚ್ಚುವರಿ ನ್ಯಾಯಾಲಯ ಬುಧವಾರ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದೆ.

ಪಠ್ಯ ಪರಿಷ್ಕರಣೆಯ ವಿರುದ್ಧ ಜೂನ್ 1ರಂದು ಎನ್‌ಎಸ್‌ಯುಐ ಕಾರ್ಯಕರ್ತರು ಸಚಿವರ ಮನೆ ಎದುರು ಪ್ರತಿಭಟನೆ ನಡೆಸಿದ್ದರು. ನಂತರ 24 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ತಿಪಟೂರಿನ ಹಿರಿಯ ಶ್ರೇಣಿ ನ್ಯಾಯಾಲಯ ಮುಂದೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಕಳೆದ ಕೆಲವು ದಿನಗಳಿಂದ ಜಾಮೀನಿಗಾಗಿ ಬಂಧಿತರ ಪರ ವಕೀಲರು ಅರ್ಜಿ ಸಲ್ಲಿಸಿದ್ದರು. ಶನಿವಾರ ಜಾಮೀನು ತಿರಸ್ಕೃತಗೊಂಡಿದ್ದು, ಸೋಮವಾರ ಮತ್ತೆ ಅರ್ಜಿ ಸಲ್ಲಿಸಿದ್ದರು. ಬುಧವಾರ ಜಾಮೀನು ಮಂಜೂರಾಗಿದೆ.

ಮೂರನೇ ಅಭ್ಯರ್ಥಿಯ ಗೆಲುವಿಗೆ ಬಿಜೆಪಿ ಪಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆ ಚುನಾವಣೆಯಲ್ಲಿ ಮೂರನೇ ಅಭ್ಯರ್ಥಿ ಲಹರ್ ಸಿಂಗ್ ಸಿರೋಯಾ ಅವರನ್ನು ಗೆಲ್ಲಿಸುವುದು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಒಂದೂ ಮತವೂ ವ್ಯರ್ಥ ಆಗದಂತೆ ಎಚ್ಚರಿಕೆ ವಹಿಸಲು ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಸೂಚನೆ ನೀಡಿದ್ದಾರೆ.

ಅಲ್ಲದೆ, ಕಡ್ಡಾಯವಾಗಿ ಹಾಜರಾಗಿ ಪಕ್ಷದ ಅಭ್ಯರ್ಥಿಗಳಿಗೆ ಮತ ಚಲಾವಣೆ ಮಾಡಲು ಶಾಸಕರಿಗೆ ವಿಪ್ ಜಾರಿ ಮಾಡಲಾಗಿದೆ.

ಅಭ್ಯರ್ಥಿಗಳಾದ ನಿರ್ಮಲಾ ಸೀತಾರಾಮನ್, ಜಗ್ಗೇಶ್ ಮತ್ತು ಲಹರ್ ಸಿಂಗ್ ಅವರಿಗೆ ಮತ ಹಾಕಿಸಲು ಸಚಿವರಾದ ಆರ್.ಅಶೋಕ, ವಿ.ಸುನಿಲ್ ಕುಮಾರ್ ಮತ್ತು ಬಿ.ಸಿ. ನಾಗೇಶ್ ಅವರನ್ನು ಒಳಗೊಂಡ ಮೂರು ತಂಡಗಳನ್ನು ರಚಿಸಲಾಗಿದೆ. ಆ ತಂಡದ ಮೂಲಕವೇ ಶಾಸಕರು ಮತ ಚಲಾಯಿಸಬೇಕಾಗುತ್ತದೆ ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದರು.

ನಿರ್ಮಲಾ ಅವರಿಗೆ 46, ಜಗ್ಗೇಶ್‌ಗೆ 45 ಮತ, ಲಹರ್ ಸಿಂಗ್‌ಗೆ ಮೊದಲ ಪ್ರಾಶಸ್ತ್ಯದ 32 ಮತಗಳನ್ನು ನೀಡಲಾಗುವುದು. ಯಾವ ಶಾಸಕರು ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎಂಬುದನ್ನು ಗುರುವಾರ ನಿರ್ಧರಿಸಲಾಗುವುದು ಎಂದೂ ಹೇಳಿದರು.

ಒಂದು ಮತವೂ ವ್ಯರ್ಥ ಆಗದಂತೆ ಎಚ್ಚರ ವಹಿಸಲು ಗುರುವಾರ ರಾತ್ರಿ 7ಕ್ಕೆ ಅಣುಕು ಮತದಾನದ ವ್ಯವಸ್ಥೆಯನ್ನೂ ಮಾಡಲಾಗಿದೆ. ಇದರಲ್ಲಿ ಎಲ್ಲ ಶಾಸಕರೂ ಭಾಗವಹಿಸಲಿದ್ದಾರೆ. ರಾತ್ರಿ 8ಕ್ಕೆ ನಿರ್ಮಲಾ ಸೀತಾರಾಮನ್ ಅವರು ಶಾಸಕರಿಗೆ ಭೋಜನ ಕೂಟ ಏರ್ಪಡಿಸಿದ್ದು, ಶಾಸಕರ ಜತೆ ಅವರು ಮಾತುಕತೆ ನಡೆಸಲಿದ್ದಾರೆ. ಶುಕ್ರವಾರ ಬೆಳಿಗ್ಗೆ ಉಪಾಹಾರದ ಬಳಿಕ ಮತ ಚಲಾವಣೆಗೆ ಒಟ್ಟಿಗೇ ಹೋಗುತ್ತೇವೆ ಎಂದೂ ಅವರ ಹೇಳಿದರು.

ಮೂರನೇ ಅಭ್ಯರ್ಥಿಗೆ ಎಷ್ಟು ಸಂಖ್ಯೆಯಲ್ಲಿ ಎರಡನೇ ಪ್ರಾಶಸ್ತ್ಯದ ಮತ ನೀಡಿದರೆ ಸೂಕ್ತ, ಮತ ಮೌಲ್ಯ ದಿಂದ ಅಭ್ಯರ್ಥಿಗೆ ಅನುಕೂಲವಾಗುತ್ತದೆ ಎಂಬುದರ ಲೆಕ್ಕಾಚಾರ ಇನ್ನೂ ನಡೆಯುತ್ತಿದೆ. ಸಣ್ಣ ಗೊಂದಲ ಇರುವುದರಿಂದ ಅಂತಿಮ ನಿರ್ಧಾರ ಆಗಿಲ್ಲ. ಗುರುವಾರ ಆ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳಲಾಗುತ್ತದೆ ಎಂದರು.

ನಾಲ್ಕನೆ ಸ್ಥಾನಕ್ಕೆ ಏನು ಬೇಕಾದರೂ ಆಗಬಹುದು: ಬೊಮ್ಮಾಯಿ

ಈ ಹಿಂದೆ ರಾಜ್ಯಸಭಾ ಚುನಾವಣೆಗಳಲ್ಲಿ ಕೊನೆ ಹಂತದಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ಹೀಗಾಗಿ ನಾಲ್ಕನೇ ಸ್ಥಾನಕ್ಕೆ ಏನು ಬೇಕಾದರೂ ಆಗಬಹುದು. ಚುನಾವಣೆಯ ಮಧ್ಯದಲ್ಲೇ ಏರುಪೇರು ಆದ ಉದಾಹರಣೆಗಳಿವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶಾಸಕಾಂಗ ಪಕ್ಷದ ಸಭೆಯ ಬಳಿಕ ಮಾತನಾಡಿದ ಅವರು, ಲಹರ್ ಸಿಂಗ್ ಅವರಿಗೆ ಮೊದಲ ಪ್ರಾಶಸ್ತ್ಯದ 32 ಮತಗಳು ಚಲಾವಣೆ ಆಗಿ, ಎರಡನೇ ಪ್ರಾಶಸ್ತ್ಯದ ಮತಗಳು ಯಥಾವತ್ತಾಗಿ ಚಲಾವಣೆಯಾದರೆ ಅವರ ಗೆಲುವು ನಿಶ್ಚಿತ ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ನ್ಯಾಯಮೂರ್ತಿಯಾಗಿ ಸಿ.ಎಂ.ಪೂಣಚ್ಚ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಮೂರ್ತಿಯನ್ನಾಗಿ ಸಿ.ಎಂ.ಪೂಣಚ್ಚ ಅವರನ್ನು ನೇಮಕ ಮಾಡಿ ಕೇಂದ್ರ ಕಾನೂನು ಸಚಿವಾಲಯ ಬುಧವಾರ ಆದೇಶಿಸಿದೆ.

ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳ ಮಂಜೂರಾತಿ ಸಂಖ್ಯೆ 62. ಸದ್ಯ 44 ನ್ಯಾಯಮೂರ್ತಿಗಳು ಕಾರ್ಯ ನಿರ್ವಹಿಸುತ್ತಿದ್ದು ಸಿ.ಎಂ.ಪೂಣಚ್ಚ ಅವರ ನೇಮಕದಿಂದ ಈ ಸಂಖ್ಯೆ 45ಕ್ಕೆ ತಲುಪಿದೆ. ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮುಂದಿನ ತಿಂಗಳ 3ಕ್ಕೆ ನಿವೃತ್ತರಾಗಲಿದ್ದಾರೆ.

‘ಲೋಕಾಯುಕ್ತರ ನೇಮಕ ಶೀಘ್ರ’

ಮೈಸೂರು: ‘ಲೋಕಾಯುಕ್ತರ ನೇಮಕಾತಿಗೆ ಸಂಬಂಧಿಸಿದ ಪ್ರಕ್ರಿಯೆಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಹೆಸರು ಪ್ರಕಟಿಸಲಾಗುವುದು’ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಲೋಕಾಯುಕ್ತ ನೇಮಕಕ್ಕೆ ಸಂಬಂಧಿಸಿ ಹೈಕೋರ್ಟ್ ಸೂಚನೆಯಂತೆ ಕ್ರಮ ವಹಿಸಲಾಗಿದೆ. ಇನ್ನು ಮುಂದೆ ವಿಳಂಬ ಮಾಡುವುದಿಲ್ಲ’ ಎಂದರು.

‘ವಿಧಾನಸಭಾ ಚುನಾವಣೆ: ವಿಜಯೇಂದ್ರ ಸ್ಪರ್ಧೆ’

ವಿಜಯಪುರ: ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಉಪಾಧ್ಯಕ್ಷರಾದ, ಪುತ್ರ ವಿಜಯೇಂದ್ರ ಸ್ಪರ್ಧಿಸಲಿದ್ದಾರೆ. ಅವರು ರಾಜ್ಯದ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಗೆಲ್ಲುವ ವಿಶ್ವಾಸ ತಮಗಿದೆ ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಪರಿಷತ್ ಚುನಾವಣೆಯಲ್ಲಿ ವಿಜಯೇಂದ್ರಗೆ ಟಿಕೆಟ್ ನೀಡದೇ ಕಡೆಗಣಿಸಲಾಗಿದೆ ಎಂಬ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹೇಳಿಕೆಗೆ ಬುಧವಾರ ಪ್ರತಿಕ್ರಿಯಿಸಿದ ಅವರು, ಒಂದೇ ಕುಟುಂಬದವರಿಗೆ ಟಿಕೆಟ್ ಕೊಡಬಾರದು ಎಂಬುದು ಪ್ರಧಾನಿ ಮೋದಿ ಅವರ ತೀರ್ಮಾನ. ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದರು.

ಪಿಯು ತರಗತಿ ಇಂದಿನಿಂದ: ಸಮವಸ್ತ್ರ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ವಿವಾದದಲ್ಲಿ ಹೈಕೋರ್ಟ್ ನೀಡಿದ ತೀರ್ಪಿನ ನಂತರ, 2022-23ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಪಿಯು ತರಗತಿಗಳು ಗುರುವಾರದಿಂದ (ಜೂನ್ 9) ಆರಂಭವಾಗಲಿವೆ.

ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಪದವಿಪೂರ್ವ ವಿದ್ಯಾರ್ಥಿಗಳು ಕಾಲೇಜು ಅಭಿವೃದ್ಧಿ ಸಮಿತಿ ಸೂಚಿಸಿದ ಸಮವಸ್ತ್ರ ಧರಿಸುವುದು ಕಡ್ಡಾಯ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಈಗಾಗಲೇ ಮಾರ್ಗಸೂಚಿ ಹೊರಡಿಸಿದೆ.

‘ಹಿಜಾಬ್’ ವಿವಾದದಂಥ ಘಟನೆ ಮರುಕಳಿಸದಂತೆ ಆರಂಭದಿಂದಲೇ ಎಚ್ಚರಿಕೆ ವಹಿಸಲು ಇಲಾಖೆ ಮುಂದಾಗಿದೆ. ಒಂದು ವೇಳೆ ಕಾಲೇಜು ಅಭಿವೃದ್ಧಿ ಸಮಿತಿ ಅಥವಾ ಆಡಳಿತ ಮಂಡಳಿ ಯಾವುದೇ ಸಮವಸ್ತ್ರ ಸೂಚಿಸದಿದ್ದರೆ, ಸಮಾನತೆ ಮತ್ತು ಏಕತೆ ಕಾಪಾಡುವ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಆಗದ ಉಡುಪು ಧರಿಸಬೇಕು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಮಾರ್ಗಸೂಚಿಯಲ್ಲಿ ತಿಳಿಸಿದೆ.

ಪದವಿ ಪೂರ್ವ ತರಗತಿಗೆ ಜೂನ್ 1ರಿಂದ ದಾಖಲಾತಿ ಪ್ರಕ್ರಿಯೆ ಆರಂಭವಾಗಿದ್ದು, ದಂಡ ಶುಲ್ಕವಿಲ್ಲದೆ ದಾಖಲಾತಿ ಪಡೆಯಲು ಜೂನ್ 15 ಕೊನೆಯ ದಿನ. ಬೆಳಿಗ್ಗೆ 9.30ರಿಂದ 3.30ರವರೆಗೆ ಅಥವಾ 10.30ರಿಂದ 4.30ರವರೆಗೆ ತರಗತಿಗಳನ್ನು ನಡೆಸಬೇಕು ಎಂದೂ ಇಲಾಖೆ ಸೂಚಿಸಿದೆ.

ಜೂನ್ 9ರಿಂದ ಸೆ.30ರವರೆಗೆ ಶೈಕ್ಷಣಿಕ ವರ್ಷದ ಮೊದಲ ಅವಧಿ ನಡೆಯಲಿದೆ. ಅ. 13ರಿಂದ 2023ರ ಮಾರ್ಚ್ 31ರವರೆಗೆ ಎರಡನೇ ಅವಧಿ. ಅ. 1ರಿಂದ 12ರ ವರೆಗೆ ಮಧ್ಯಂತರ ರಜೆ ಇದ್ದು, 2023 ಏಪ್ರಿಲ್ 1ರಿಂದ ಬೇಸಿಗೆ ರಜೆ ನಿಗದಿಪಡಿಸಲಾಗಿದೆ.

ದಾವಣಗೆರೆಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿಕೆ

‘ಉಗ್ರನಿಗೆ ಆಶ್ರಯ: ತನಿಖೆ ಆರಂಭ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಮ್ಮು-ಕಾಶ್ಮೀರದ ಉಗ್ರನಿಗೆ ಬೆಂಗಳೂರಿನಲ್ಲಿ ಆಶ್ರಯ ನೀಡಿದವರು ಯಾರು? ಯಾರ ಮನೆಯಲ್ಲಿದ್ದ? ಇವರಿಗೆ ಯಾರ ಬೆಂಬಲ ಇದೆ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ನಗರದಲ್ಲಿ ಬುಧವಾರ ಸುದಿಗಾರರೊಂದಿಗೆ ಮಾತನಾಡಿದ ಅವರು, ‘ದೇಶದ ಭದ್ರತೆಯ ದೃಷ್ಟಿಯಿಂದ ತನಿಖೆಯ ವಿವರ ನೀಡುವುದಿಲ್ಲ. ಕಾಶ್ಮೀರದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ನಮ್ಮ ಪೊಲೀಸ್ ಇಲಾಖೆ ಅವರ ಸಂಪರ್ಕದಲ್ಲಿದೆ. ಕೇಂದ್ರ ಸರ್ಕಾರಕ್ಕೆ ತನಿಖೆಯ ವರದಿ ನೀಡಲಾಗುತ್ತದೆ’ ಎಂದು ಹೇಳಿದರು.

‘ಶ್ರೀರಾಮ ಸೇನೆಯ ಪ್ರಮೋದ ಮುತಾಲಿಕ್ ಮತ್ತು ಬಿಜೆಪಿ ಮುಖಂಡ ಯಶಪಾಲ್ ಸುವರ್ಣ ಅವರಿಗೆ ಬಂದಿರುವ ಜೀವ ಬೆದರಿಕೆ ಕರೆ ಬಗ್ಗೆ ಮಾತನಾಡುವುದಿಲ್ಲ. ಪ್ರಚೋದನಕಾರಿಯಾಗಿ ಯಾರೂ ಮಾತನಾಡಬಾರದು’ ಎಂದರು.

‘ದೇವಸ್ಥಾನ,ಮಸೀದಿಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಚರ್ಚೆ ಮಾಡಬಾರದು ಎಂದು ಹೇಳಲಾಗುವುದಿಲ್ಲ. ಅದೇನಾದರೂ ವಿವಾದವಾಗಿ ಬೀದಿಗೆ ಬಂದರೆ ಆಗ ಶಾಂತಿ ಕಾಪಾಡುವುದು ನಮ್ಮ ಕರ್ತವ್ಯವಾಗುತ್ತದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಶಿಕ್ಷಣ ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸಲು ಯಾರೂ ಅನುಮತಿ ಪಡೆದಿಲ್ಲ. ಪ್ರತಿಭಟನಕಾರರು ಮನೆಗೆ ನುಗ್ಗಿ ನಿಕ್ಕರ್ ತಂದು ಬೆಂಕಿ ಹಚ್ಚಿದ್ದರು. ಪ್ರತಿಭಟನೆ ಮಾಡುವ ಹಕ್ಕು ಎಲ್ಲರಿಗೂ ಇದೆ. ನಾವೂ ಪ್ರತಿಭಟನೆ ಮಾಡಿದವರೇ. ಪ್ರತಿಭಟನೆಯ ಹೆಸರಲ್ಲಿ ಯಾರದೋ ಮನೆಗೆ ನುಗ್ಗುವುದು ಹೋರಾಟವಲ್ಲ. ಈ ಪ್ರತಿಭಟನೆಯಲ್ಲಿ ಭಾಗವಹಿಸಿದವರು ವಿದ್ಯಾರ್ಥಿಗಳೂ ಅಲ್ಲ, ಆ ಊರಿನವರೂ ಅಲ್ಲ. ತಿಪಟೂರಿನವರು ಒಬ್ಬರನ್ನು ಬಿಟ್ಟರೆ ಉಳಿದವರು ರಾಜ್ಯದ ಬೇರೆ ಕಡೆಗಳಿಂದ ಬಂದವರು. ಅದರಲ್ಲಿ ದಾವಣಗೆರೆಯ ಮೂವರು ಸೇರಿದ್ದಾರೆ’ ಎಂದು ತಿಳಿಸಿದರು.

‘ಪಿಎಸ್‌ಐ ಪರೀಕ್ಷೆ ಅಕ್ರಮದಲ್ಲಿ ಭಾಗಿಯಾದ ಯಾರನ್ನೂ ಬಿಡುವುದಿಲ್ಲ. ನಮ್ಮ ಇಲಾಖೆಯ ಡಿವೈಎಸ್‌ಪಿಯನ್ನೇ ಬಿಟ್ಟಿಲ್ಲ. ಈ ಬಗ್ಗೆ ಸಮಗ್ರ ತನಿಖೆ ನಡೆಯುತ್ತಿದೆ’ ಎಂದು ಸಚಿವರು ಸ್ಪಷ್ಟಪಡಿಸಿದರು.

‘ಕಾಂಗ್ರೆಸ್ ಲಂಗೋಟಿಯೂ ಉಳಿಯುವುದಿಲ್ಲ’

ಚಿತ್ರದುರ್ಗ: ಇಡೀ ದೇಶದ ಜನರು ಕಾಂಗ್ರೆಸ್ ಚಡ್ಡಿ ಬಿಚ್ಚಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್ ಲಂಗೋಟಿಯನ್ನು ಬಿಚ್ಚಿ ಮನೆಗೆ ಕಳುಹಿಸಲಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಕುಟುಕಿದರು.

‘ಇಷ್ಟು ವರ್ಷ ಅಧಿಕಾರ ನಡೆಸಿದ ಕಾಂಗ್ರೆಸ್ ಹೊಣೆಗಾರಿಕೆ ಮರೆತು ವರ್ತಿಸುತ್ತಿದೆ. ಸರ್ಕಾರವನ್ನು ಟೀಕಿಸಲು ಅವರಿಗೆ ಯಾವುದೇ ಅಸ್ತ್ರ ಸಿಗುತ್ತಿಲ್ಲ. ಹೀಗಾಗಿ ಆರ್‌ಎಸ್‌ಎಸ್ ಚಡ್ಡಿಯ ಬಗ್ಗೆ ಬೇಜವಾಬ್ದಾರಿಯಿಂದ ಟೀಕಿಸುತ್ತಿದ್ದಾರೆ. ಸಮರ್ಥ ವಿರೋಧ ಪಕ್ಷವಾಗಿ ಕೆಲಸ ಮಾಡುವ ಶಕ್ತಿಯನ್ನು ಕಾಂಗ್ರೆಸ್ ಕಳೆದುಕೊಂಡಿದೆ’ ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಸುಭಾಷಿತ

ಮನಸ್ಸಿನಲ್ಲಿರುವ ಪ್ರತ್ಯೇಕತೆಯ ಗೋಡೆಗಳು ಮುರಿದು ಬಿದ್ದಾಗಷ್ಟೇ ಹೃದಯದಾಳದಿಂದ ಕ್ಷಮಿಸಲು ಸಾಧ್ಯ.
– ದೀಪಕ್ ಚೋಪ್ರಾ

ಕಾಶ್ಮೀರದಲ್ಲಿ ಸರಣಿ ಹತ್ಯೆಗಳು ಭದ್ರತೆ ಕಲ್ಪಿಸುವಲ್ಲಿ ವೈಫಲ್ಯ

ಕಾಶ್ಮೀರದಲ್ಲಿ ನಿರ್ದಿಷ್ಟ ಸಮುದಾಯದವರನ್ನು ಗುರಿಯಾಗಿಸಿಕೊಂಡು ಹತ್ಯೆಗಳು ನಡೆಯುತ್ತಿವೆ. ಕೇಂದ್ರಾಡಳಿತ ಪ್ರದೇಶವಾದ ಕಾಶ್ಮೀರದಲ್ಲಿ ಪರಿಸ್ಥಿತಿಯು ಸಹಜವಾಗುತ್ತಿದೆ ಎಂದು ಕೇಂದ್ರ ಸರ್ಕಾರ ಪ್ರಚಾರಪಡಿಸುತ್ತಿರುವುದು ಸುಳ್ಳು ಎನ್ನುವಂತೆ ಇವೆ ಈ ಹತ್ಯೆಗಳು. ಅಲ್ಲದೆ, ಈ ಪ್ರದೇಶದ ಪರಿಸ್ಥಿತಿ 90ರ ದಶಕದ ಆರಂಭದಲ್ಲಿ ಇದ್ದಂತೆ ಮತ್ತೆ ಆಗಿಬಿಡಬಹುದೇನೋ ಎಂಬ ಭೀತಿಯೂ ಎದುರಾಗಿದೆ. ಕಳೆದ ಮೂರು ವಾರಗಳಲ್ಲಿ ಕನಿಷ್ಠ ಒಂಬತ್ತು ಮಂದಿಯನ್ನು ಉಗ್ರರು ಹತ್ಯೆ ಮಾಡಿದ್ದಾರೆ. ಈಚಿನ ವಾರಗಳಲ್ಲಿ ಹತ್ಯೆಗಳು ಜಾಸ್ತಿ ಆಗಿವೆಯಾದರೂ, ಇವು ಶುರುವಾಗಿದ್ದು ಹಿಂದಿನ ರಾಜ್ಯಕ್ಕೆ ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿ, ರಾಜ್ಯವನ್ನು ಜಮ್ಮು ಹಾಗೂ ಕಾಶ್ಮೀರವಾಗಿ ವಿಂಗಡಣೆ ಮಾಡಿದ ನಂತರದಲ್ಲಿ. ಜಮ್ಮುವಿನಲ್ಲಿ ಕಾಶ್ಮೀರಿ ಪಂಡಿತ ಸಮುದಾಯಕ್ಕೆ ಸೇರಿದ ಒಬ್ಬರನ್ನು, ಹಿಂದೂ ಶಿಕ್ಷಕಿಯೊಬ್ಬರನ್ನು, ರಾಜಸ್ಥಾನ ಮೂಲದ ಬ್ಯಾಂಕ್ ವ್ಯವಸ್ಥಾಪಕರೊಬ್ಬರನ್ನು ಹಾಗೂ ಬಿಹಾರ ಮೂಲದ ಕಾರ್ಮಿಕರೊಬ್ಬರನ್ನು ಹತ್ಯೆ ಮಾಡಲಾಗಿದೆ. ಈ ಮೂಲಕ ಸಂದೇಶವೊಂದನ್ನು ರವಾನಿಸುವ ಇರಾದೆ ಉಗ್ರರಿಗೆ ಇತ್ತು. ಉಗ್ರರ ಗುರಿಯಾಗಿರುವ ಸಮುದಾಯಗಳಲ್ಲಿ ಭೀತಿ ಮನೆ ಮಾಡಿದೆ. ಅವರು ಕಾಶ್ಮೀರದಿಂದ ಹೊರ ನಡೆಯುತ್ತಿದ್ದಾರೆ.

ಉಗ್ರರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದರ ಜೊತೆಯಲ್ಲೇ ಜನರಲ್ಲಿ ಮತ್ತೆ ವಿಶ್ವಾಸ ಮೂಡಿಸುವ ಕೆಲಸಗಳು ನಡೆಯಬೇಕು

2019ರ ಆಗಸ್ಟ್ ನಂತರದಲ್ಲಿ ಕಾಶ್ಮೀರದಲ್ಲಿ ನಡೆದಿರುವ ವಿದ್ಯಮಾನಗಳಿಗೆ ಸರ್ಕಾರವೂ ಹೊಣೆಯಾಗುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ಆಗದು. ಹಿಂದೆ ರಾಜ್ಯದ ಸ್ಥಾನಮಾನ ಹೊಂದಿದ್ದ ಈ ಪ್ರದೇಶಕ್ಕೆ ಇದ್ದ ಸಾಂವಿಧಾನಿಕ ಕೊಂಡಿಯನ್ನು ಕತ್ತರಿಸಿದ ಕೇಂದ್ರವು, ನಂತರದಲ್ಲಿ ಅದರ ಜೊತೆ ರಾಜಕೀಯ ಬಂಧವೊಂದನ್ನು ಬೆಸೆಯಲಿಲ್ಲ. ಬದಲಾವಣೆಗಳ ವಿಚಾರದಲ್ಲಿ ಅಲ್ಲಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಜನರ ಹಿತಾಸಕ್ತಿಗಳ ರಕ್ಷಣೆಗಾಗಿ ಈ ಬದಲಾವಣೆಗಳು ಎಂಬುದನ್ನು ಮನವರಿಕೆ ಮಾಡಿಕೊಡಲಿಲ್ಲ. ಸರ್ಕಾರ ಕೈಗೊಂಡ ಕೆಲವು ಕ್ರಮಗಳು ಅಲ್ಲಿನ ಜನರನ್ನು ಇನ್ನಷ್ಟು ದೂರ ಮಾಡಿದವು. ಇವೆಲ್ಲವೂ ಅಲ್ಲಿ ಉಗ್ರರ ಚಟುವಟಿಕೆಗಳು ಮತ್ತೆ ನೆಲೆ ಕಂಡುಕೊಳ್ಳಲು ಅವಕಾಶ ಸೃಷ್ಟಿಸಿಕೊಟ್ಟವು. ಜಮೀನಿನ ಮಾಲೀಕತ್ವ, ನೌಕರಿ ನೀಡುವಿಕೆ ವಿಚಾರದಲ್ಲಿ ಜಾರಿಗೆ ಬಂದ ಹೊಸ ನೀತಿಗಳು ಕಾಶ್ಮೀರದ ಮೇಲೆ ಹೊರಗಿನಿಂದ ಏನನ್ನೋ ಹೇರಲಾಗುತ್ತಿದೆ ಎಂಬ ಭಾವನೆ ಬೆಳೆಸಿದವು. ಕಣಿವೆ ನಾಡಿನಲ್ಲಿ ಒತ್ತಾಯದಿಂದ ಯಾವುದೋ ಬದಲಾವಣೆ ತರಲು ಯತ್ನಿಸಲಾಗುತ್ತಿದೆ ಎಂಬ ಸಂದೇಶ ರವಾನೆಯಾಯಿತು. ಹಿಂದೆ ಇದ್ದ ರಾಜಕೀಯ ವೇದಿಕೆಗಳು ಇಲ್ಲವಾದವು. ಜನರಿಗೆ ಸರ್ಕಾರದ ಜೊತೆ ತಮ್ಮನ್ನು ಗುರುತಿಸಿಕೊಳ್ಳಲು ಇದ್ದ ವೇದಿಕೆಗಳೇ ಮರೆಯಾದವು. ಅಲ್ಲಿನ ಕ್ಷೇತ್ರಗಳ ಮರುವಿಂಗಡಣೆ ಕೂಡ ರಾಜಕೀಯ ಸಮತೋಲನವನ್ನು ಕಾಶ್ಮೀರಿಗರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಬದಲಾಯಿಸಲು ಇರಿಸಿದ ಹೆಜ್ಜೆಯಂತೆ ಕಣಿವೆಯಲ್ಲಿ ಕಂಡುಬಂತು.

ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಹಾಗೂ ಡಾ. ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರವು ಕಾಶ್ಮೀರದ ವಿಚಾರವನ್ನು ಬಹಳ ಸೂಕ್ಷ್ಮವಾಗಿ ಮತ್ತು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮುಂದಡಿ ಇರಿಸುತ್ತಿದ್ದವು. ಅದರಿಂದಾಗಿ ಅಲ್ಲಿ ಉಗ್ರರ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿತ್ತು. ಪರಿಸ್ಥಿತಿಯು ಗಣನೀಯವಾಗಿ ಸುಧಾರಣೆ ಕಂಡಿತ್ತು. ಆದರೆ, 90ರ ದಶಕದ ಆರಂಭದಿಂದ ಅಲ್ಲಿ ಆಗಿದ್ದ ಸುಧಾರಣೆಗಳನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರದ ನೀತಿಗಳು ವ್ಯರ್ಥಗೊಳಿಸಿದವು. ಈಗ ಪರಿಸ್ಥಿತಿಯು ಅಲ್ಲಿ ಹಿಂದಿನ ಕಾಲಘಟ್ಟವೊಂದಕ್ಕೆ ಹೋಲುವ ಸ್ಥಿತಿ ತಲುಪಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕಾಶ್ಮೀರಿ ಪಂಡಿತರ ಸ್ಥಿತಿಯನ್ನು ಬಿಜೆಪಿಯು ರಾಜಕೀಯವಾಗಿ ಬಳಸಿಕೊಂಡಿದೆ. ಅಲ್ಲದೆ, ಪಂಡಿತ ಸಮುದಾಯ ಅನುಭವಿಸಿದ ಸಂಕಟದ ವಿವರಗಳನ್ನು, ಕೋಮು ಭಾವನೆ ಕೆರಳಿಸಲು 'ದಿ ಕಾಶ್ಮೀರ್ ಫೈಲ್ಸ್' ಚಿತ್ರದಲ್ಲಿ ಉತ್ಪ್ರೇಕ್ಷೆಯಾಗಿ ತೋರಿಸಲಾಯಿತು. ಈಗ ಬಿಜೆಪಿ ನೇತೃತ್ವದ ಸರ್ಕಾರದ ನೀತಿಗಳು ಹಿಂದೆ ಇದ್ದಂತಹ ಸ್ಥಿತಿಯನ್ನು ಮತ್ತೆ ಸೃಷ್ಟಿಸಿವೆ. ಆದರೆ ಸರ್ಕಾರವು ವಾಸ್ತವವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿದೆ. ತಮ್ಮನ್ನು ರಕ್ಷಿಸಿಕೊಳ್ಳಲು ಕಾಶ್ಮೀರವನ್ನು ತೊರೆಯಲು ಮುಂದಾಗಿರುವವರನ್ನು ತಡೆಯುತ್ತಿದೆ. ಮುಳ್ಳಿನ ತಂತಿಗಳ ಹಿಂದೆ ಅವರನ್ನು ನಿಲ್ಲಿಸುವುದರಿಂದ ಭದ್ರತೆ ಕೊಟ್ಟಂತೆ ಆಗುವುದಿಲ್ಲ. ರಕ್ಷಣೆ ಕೊಡಲು ಆಗದಿದ್ದಾಗ ಸುರಕ್ಷಿತ ಪ್ರದೇಶಕ್ಕೆ ತೆರಳಲು ಅವರಿಗೆ ಅವಕಾಶ ಕೊಡಬೇಕು, ಅದಕ್ಕೆ ನೆರವಾಗಬೇಕು. ಹೀಗೆ ಮಾಡುವುದು ತನ್ನ ನೀತಿಯ ಸೋಲು ಎಂದು ಭಾವಿಸಬೇಕಿಲ್ಲ. ಇದೇ ಸಂದರ್ಭದಲ್ಲಿ, ಉಗ್ರರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಇದರ ಜೊತೆಯಲ್ಲೇ, ಜನರಲ್ಲಿ ಮತ್ತೆ ವಿಶ್ವಾಸ ಮೂಡಿಸುವ ಕೆಲಸಗಳು ನಡೆಯಬೇಕು.

ದಿನದ ಟ್ವೀಟ್

ಸಾರಿಗೆ ವ್ಯವಸ್ಥೆ ಸುಗಮವಾಗಲಿ

ಸದೃಢವಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಹೊಂದದಿದ್ದರೆ ನಾವು ಅವನತಿ ಕಾಣುತ್ತೇವೆ. ಬಸ್‌ಗೆ ಆದ್ಯತೆ ನೀಡುವ ಪಥವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಬೆಂಗಳೂರಿನ ಬಿಎಂಟಿಸಿ ದೃಢ ಸಂಕಲ್ಪ ಮಾಡಿದರೆ, ಅನೇಕ ಕಾರು ಬಳಕೆದಾರರು ಬಸ್‌ಗಳತ್ತ ಮುಖ ಮಾಡಲು ಸಾಧ್ಯ.

ಯೋಗೀಶ್ ಪ್ರಭುಸ್ವಾಮಿ, ನಾಗರಿಕ

ಕಿಡಿನುಡಿ

ಅಲ್ ಕೈದಾದಂತಹ ಇಸ್ಲಾಮಿಸ್ಟ್ ಭಯೋತ್ಪಾದಕ ಗುಂಪುಗಳಿಂದ ಬರುವ ಬೆದರಿಕೆಗಳನ್ನು ಮಧ್ಯಪ್ರಾಚ್ಯ ರಾಷ್ಟ್ರಗಳು ನಿಸ್ಸಂದಿಗ್ಧವಾಗಿಯೂ ಖಂಡಿಸಬೇಕು. ಧಾರ್ಮಿಕ ಭಾವನೆಗಳನ್ನು ಗೌರವಿಸುವುದು ಒಂದು ಬಗೆಯಾದರೆ, ಅದರ ಆಧಾರದ ಮೇಲೆ ಬೆದರಿಕೆ ಒಡ್ಡುವುದು ಇನ್ನೊಂದು ಬಗೆ. ಯಾರೋ ಕೆಲವರ ಮಾತುಗಳಿಂದ ನಂಬಿಕೆಗೇ ಧಕ್ಕೆ ಬರುತ್ತದೆ ಎಂಬಷ್ಟು ದುರ್ಬಲವಾಗಿ ಯಾವ ಧರ್ಮವೂ ಇರುವುದಿಲ್ಲ.

ಪ್ರಿಯಾಂಕಾ ಚತುರ್ವೇದಿ, ರಾಜ್ಯಸಭಾ ಸದಸ್ಯೆ, ಶಿವಸೇನಾ ನಾಯಕಿ

25 ವರ್ಷಗಳ ಹಿಂದೆ

ಸೋಮವಾರ, 9-6-1997

- **ಕಾಂಗ್ರೆಸ್ ಅಧ್ಯಕ್ಷತೆ: ಇಂದು ಮತದಾನ**

ನವದೆಹಲಿ, ಜೂನ್ 8 (ಪಿಟಿಐ)– ಕಾಂಗ್ರೆಸ್ ಪಕ್ಷದಲ್ಲಿ ವರ್ಚಸ್ವಿ ಮುಖಂಡರ ಯುಗ ಕೊನೆಗೊಂಡ ನಂತರ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಕಳೆದ ಎರಡು ದಶಕಗಳಲ್ಲಿ ಮೊದಲ ಬಾರಿಗೆ ನೇರ ಚುನಾವಣೆ ನಡೆಯುತ್ತಿದ್ದು, ಪಕ್ಷದ ಪ್ರತಿನಿಧಿಗಳು ನಾಳೆ ನೂತನ ನಾಯಕನನ್ನು ಆಯ್ಕೆ ಮಾಡಲಿದ್ದಾರೆ.

ಸ್ಪರ್ಧೆ ತಪ್ಪಿಸಿ ಸರ್ವಸಮ್ಮತ ವ್ಯಕ್ತಿಯೊಬ್ಬರನ್ನು ಆಯ್ಕೆ ಮಾಡುವ ಪಕ್ಷದ ಕೆಲವು ನಾಯಕರ ಪ್ರಯತ್ನಗಳು ವಿಫಲವಾಗಿವೆ. ಸೀತಾರಾಮ ಕೇಸರಿ, ಶರದ್ ಪವಾರ್ ಹಾಗೂ ರಾಜೇಶ್ ಪೈಲಟ್ ಸ್ಪರ್ಧೆಯಲ್ಲಿದ್ದಾರೆ. ದೇಶದಾದ್ಯಂತ ಪಕ್ಷದ ಕೇಂದ್ರ ಕಚೇರಿಗಳಲ್ಲಿ ಚುನಾವಣೆ ನಡೆಯಲಿದೆ.

- **ಗದಗ ಜಿಲ್ಲೆ ವ್ಯಾಪ್ತಿಗೆ ನರಗುಂದ ವಿರೋಧಿಸಿ ಆತ್ಮಾಹುತಿಗೆ ಯತ್ನ**

ನವಲಗುಂದ, ಜೂನ್ 8– ನರಗುಂದ ತಾಲ್ಲೂಕನ್ನು ಗದಗ ಜಿಲ್ಲೆಗೆ ಸೇರಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ತಾಲ್ಲೂಕಿನಾದ್ಯಂತ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ.

ಸರ್ಕಾರದ ಈ ನಿರ್ಧಾರವನ್ನು ವಿರೋಧಿಸಿ ತಾಲ್ಲೂಕಿನ ಎನ್.ಎಸ್.ಯು.ಐ ಘಟಕದ ಕಾರ್ಯಕರ್ತರೊಬ್ಬರು ನಿನ್ನೆ ತಹಸೀಲ್ದಾರ ಕಚೇರಿಯ ಎದುರು ನೇಣು ಹಾಕಿಕೊಂಡು ಆತ್ಮಾಹುತಿಗೆ ಯತ್ನಿಸಿದಾಗ ಪೊಲೀಸರು ಅವರನ್ನು ತಡೆದರು.

50 ವರ್ಷಗಳ ಹಿಂದೆ

ಶುಕ್ರವಾರ, 9-6-1972

- **ಮೂಢ ಸಂಪ್ರದಾಯ ಹತ್ತಿಕ್ಕಲು ನಾಂದಿ: ಮಾದರಿ ವಿವಾಹ**

ವಿಶೇಷ ಪ್ರತಿನಿಧಿಯಿಂದ, ಜೂನ್ 8– ಮೂಢ ಸಂಪ್ರದಾಯ ವಿರೋಧಿ ಸಮ್ಮೇಳನವೇ ಶುಭ ಸಂದರ್ಭ, ಶುಭ ಮುಹೂರ್ತ. ಮಾರಿಯಮ್ಮನ ಗುಡಿಯ ಬಯಲೇ ಕಲ್ಯಾಣ ಮಂಟಪ, ಸುತ್ತಮುತ್ತಲ ಹಳ್ಳಿಗಳಿಂದ ಬಂದಿದ್ದ ಐದು ಸಾವಿರಕ್ಕಿಂತ ಹೆಚ್ಚು ಮಂದಿ ಪುರುಷರು, ಮಹಿಳೆಯರೇ 'ಹತ್ತು ಸಮಸ್ತರು.'

ನೆರೆದಿದ್ದವರ ಕರತಾಡನವೇ ಆರತಿ–ಅಕ್ಷತೆ ಹಾಗೂ ಆಶೀರ್ವಾದ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹರಿಜನ ಕೆ.ಎಚ್. ರಂಗನಾಥ್ ಅವರದ್ದೇ ಪೌರೋಹಿತ್ಯ. ಅಭಿವೃದ್ಧಿ ಸಚಿವ, ಮತ್ತೊಬ್ಬ ಹರಿಜನ ಎಂ.ಮಲ್ಲಿಕಾರ್ಜುನ ಸ್ವಾಮಿ ಅವರು ಉದ್ಘಾಟಿಸಿದುದೇ ಮಂಗಳವಾದ್ಯ.

ಈ ಮೂಲಕ, ಚನ್ನಪಟ್ಟಣ ತಾಲ್ಲೂಕಿನ ನಾಗವಾರದಲ್ಲಿ ಕಾಳೇಗೌಡ ಮತ್ತು ಕೆಂಪಮ್ಮ ಅವರು ವೈವಾಹಿಕ ಜೀವನಕ್ಕೆ ಕಾಲಿಟ್ಟರು.

- **ಅಗತ್ಯ ಆಧರಿಸಿ ಆಸ್ತಿ ಮಿತಿ ನಿರ್ಧಾರ**

ಪುಣೆ, ಜೂನ್ 8– ನಗರ ಆಸ್ತಿ ಮೇಲೆ ಮಿತಿ ನಿರ್ಧರಿಸುವುದಕ್ಕೆ ಆಸ್ತಿಯ ಬೆಲೆಗಿಂತ ಅಗತ್ಯವೇ ಮಾನದಂಡವಾಗಿರಬೇಕು ಎಂದು ಯೋಜನಾ ಆಯೋಗ ಅಭಿಪ್ರಾಯಪಟ್ಟಿದೆ.

'ಆಸ್ತಿ ಅಂದಾಜಿಸುವಲ್ಲಿ ಬೆಲೆಯನ್ನೇ ಆಧಾರವಾಗಿಡುವುದು ಅವೈಜ್ಞಾನಿಕ. ಇದರಿಂದ ಉದ್ದೇಶ ಈಡೇರದು' ಎಂದು ಯೋಜನಾ ಶಾಖೆ ರಾಜ್ಯ ಸಚಿವ ಮೋಹನಧಾರಿಯ ತಿಳಿಸಿದರು.

ನಾಳಿನವರ ಪಾಲಿಗೆ ನಾವು ಶ್ಲಾಘನೀಯರಾಗುವುದು ದಿನದಿನಕ್ಕೆ ಕಷ್ಟವಾಗಲಿದೆ

ಉತ್ತಮ ಪೂರ್ವಜರಾಗೋಣ ಹೇಗೆ?

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಐವತ್ತು ವರ್ಷಗಳ ಹಿಂದೆ ಜಪಾನೀಯರ ನಿಘಂಟಿಗೆ 'ಕೊಗಾಯ್' ಎಂಬ ಹೊಸ ಪದವೊಂದು ಸೇರಿಕೊಂಡಿತು. ಅದರ ಸರಿಯಾದ ಅರ್ಥ ಬೇಕೆಂದರೆ ನಾವು ಕನ್ನಡದಲ್ಲೂ 'ದುಸ್ಪುಧಾರಣೆ' ಎಂಬ ಹೊಸ ಪದವನ್ನು ಟಂಕಿಸಬೇಕು. ಅಥವಾ ಅಪಸೌಲಭ್ಯ ಎಂದರೂ ಸರಿ. ಅಭಿವೃದ್ಧಿಯ ಹೆಸರಿನಲ್ಲಿ ಒಂದು ಸಮಾಜ ತನ್ನ ಮೇಲೆ ಎಳೆದುಕೊಳ್ಳುತ್ತಿರುವ ಸಂಕಟಗಳಿಗೆ 'ಕೊಗಾಯ್' ಪದ ಅಲ್ಲಿ ಬಳಕೆಗೆ ಬಂದಿತ್ತು. ಆಕಾಶದಲ್ಲಿ ಕೊಳಕು ಗಾಳಿ, ಸಮುದ್ರದಲ್ಲಿ ಕೊಳಕು ನೀರು, ನದಿಯಲ್ಲಿ ಕೊಳಕು ಧಾರೆ, ಮಣ್ಣೆಂದರೆ ಕೊಳಕು ಮಣ್ಣು.

ಅಂದು ಜಪಾನಿನಲ್ಲಿ ಎಲ್ಲೆಲ್ಲೂ ಕೈಗಾರಿಕಾ ಕ್ರಾಂತಿಯ ಈ ಎಲ್ಲ ದುರ್ಲಕ್ಷಣಗಳು ಕಾಣುತ್ತಿದ್ದವು. ಪಾದರಸದ ಅತಿ ಬಳಕೆಯಿಂದ 'ಮಿನಾಮಾಟಾ ಕಾಯಿಲೆ' ಮೈದಳೆದಿತ್ತು. ಕಡಲಂಚಿನ ಮಿನಾಮಾಟಾ ಎಂಬ ಊರಿನಲ್ಲಿ ಮೀನನ್ನು ತಿನ್ನುವ ಎಲ್ಲ ಜೀವಿಗಳೂ (ಬೆಕ್ಕು, ನಾಯಿ, ಮನುಷ್ಯ ಜೀವಿಗಳು, ಹಾರಾಡುವ ಪಕ್ಷಿಗಳು) ಕುಣಿಕುಣಿದು ತಲೆತಿರುಗಿ ಬಿದ್ದು ಸಾಯುತ್ತಿದ್ದವು. ಅದು ಅಂದು ಜಗತ್ತಿನ ಅತಿ ದೊಡ್ಡ ಔದ್ಯಮಿಕ ದುರಂತವಾಗಿತ್ತು. ನಮ್ಮ ಭೋಪಾಲ್ ದುರಂತದಂತೆ ಅದೇನೂ ಹಠಾತ್ ಸಂಭವಿಸಿರಲಿಲ್ಲ. ಕಾರ್ಖಾನೆಯೊಂದು ಮೀಥೈಲ್ ಮರ್ಕ್ಯುರಿ ಹೆಸರಿನ ಕೊಳೆಯನ್ನು ನೀರಿಗೆ ಹರಿಸುತ್ತಿರುವುದೇ ಕಾರಣ ಎಂಬುದು ಗೊತ್ತಾಗಲು ಇಪ್ಪತ್ತು ವರ್ಷಗಳೇ ಬೇಕಾದವು. ಇಂದು ಅಲ್ಲಿ 'ಕೊಗಾಯ್' ಪದ ಬಳಕೆಯಲ್ಲಿಲ್ಲ. ಜಪಾನ್ ಅದೆಷ್ಟು ತ್ವರಿತವಾಗಿ, ಅದೆಷ್ಟು ದಕ್ಷತೆಯಿಂದ ಮಾಲಿನ್ಯ ನಿವಾರಣಾ ಕ್ರಮಗಳನ್ನು ಜಾರಿಗೆ ತಂದಿತೆಂದರೆ- ಉದಾಹರಣೆಗೆ, ಕಾರುಗಳ ತಯಾರಿಕೆಗೆ ಬೇಕಿದ್ದ ಎಲ್ಲ ಲೋಹ, ಗಾಜು, ಪ್ಲಾಸ್ಟಿಕ್, ರಬ್ಬರ್ ಉತ್ಪಾದನಾ ಘಟಕಗಳೂ ಚೊಕ್ಕಟಗೊಂಡವು; ಹಾಗೆ ತಯಾರಾಗಿ ರಸ್ತೆಗಿಳಿಯುವ ಕಾರಿನ ಹೊಗೆ ಕೊಳವೆ, ಇಂಧನ ಕ್ಷಮತೆಯೂ ಸುಧಾರಿಸುತ್ತ, ಅಲ್ಲಿ ತಯಾರಾಗುವ ಉತ್ಪನ್ನಗಳು ಇತರ ದೇಶಗಳಿಗೂ ಮಾದರಿಯಾದವು.

ನಾವೆಲ್ಲಿದ್ದೇವೆ? ನಿನ್ನೆಯ ಪಿಟಿಐ ವರದಿಯ ಪ್ರಕಾರ, ಜಗತ್ತಿನ 180 ದೇಶಗಳ 'ಪರಿಸರ ನಿರ್ವಹಣಾ ಸೂಚ್ಯಂಕ'ದ ಪ್ರಕಾರ ಡೆನ್ಮಾರ್ಕ್ ದೇಶ 78 ಅಂಕಗಳನ್ನು ಪಡೆದು ಮೊದಲ ಸ್ಥಾನದಲ್ಲಿದ್ದರೆ, ಇಂಡಿಯಾ 19 ಅಂಕಗಳನ್ನು ಪಡೆದು ಕೊನೆಯ 180ನೇ ಸ್ಥಾನದಲ್ಲಿದೆ. ಬಾಂಗ್ಲಾದೇಶ, ಟರ್ಕಿ, ಸುಡಾನ್, ಹೈಟಿ, ಇಥಿಯೋಪಿಯಾದಂಥ ದೇಶಗಳು ಭಾರತಕ್ಕಿಂತ ಹೆಚ್ಚು ಗೌರವದ ಸ್ಥಾನದಲ್ಲಿವೆ. ಹಾಗೆಂದು ನಮ್ಮ ಸರ್ಕಾರ ಘೋಷಿಸಿದ ಯೋಜನೆಗಳ ಸಂಖ್ಯೆಯೇನೂ ಕಡಿಮೆಯಿಲ್ಲ. ಸ್ವಚ್ಛ ಭಾರತ್, ಸಶಕ್ತ ಭಾರತ್, ಸಕ್ಷಮ ಭಾರತ್, ಸಮಗ್ರ ಭಾರತ್, ಸನಾತನ ಭಾರತ್ ಮುಂತಾದ ಸ-ಕಾರಾತ್ಮಕ ಯೋಜನೆಗಳು ಸಾಲುಗಟ್ಟಿ ಬರುತ್ತಿವೆ. ಆದರೂ ಅಂತರರಾಷ್ಟ್ರೀಯ ಮಾನದಂಡಗಳ ಪ್ರಕಾರ ಭಾರತದ ಶ್ರೇಯಾಂಕ ಪದೇ ಪದೇ ಕುಸಿಯುತ್ತಿದೆ ಯಾಕೊ?

ಜಗತ್ತಿನ ಅತಿ ದೊಡ್ಡ ಔದ್ಯಮಿಕ ದುರಂತ 1984ರಲ್ಲಿ ಭೋಪಾಲ್‌ನಲ್ಲಿ ಸಂಭವಿಸಿತು. ಅದು ಕೀಟನಾಶಕ ವಿಷಗಳ ಉತ್ಪಾದನೆಗೆ ಬೇಕಿದ್ದ ಮೂಲ ಸಂಯುಕ್ತವನ್ನು (ಮೀಥೈಲ್ ಐಸೊಸೈನೇಟ್) ತಯಾರಿಸುತ್ತಿತ್ತು. ಆ ದುರಂತ ನಡೆದ 15 ವರ್ಷಗಳ ನಂತರ ಎಂಡೊಸಲ್ಫಾನ್ ದುರಂತವೂ ಕಾಸರಗೋಡಿನಲ್ಲಿ ಬೆಳಕಿಗೆ ಬಂತು. ನಾವು ಪಾಠ ಕಲಿತೆವೆ? ಬೇರೆ ದೇಶಗಳಲ್ಲಿ ನಿಷೇಧಿಸಲಾದ 66 ಬಗೆಯ ಕೀಟವಿಷಗಳು ಈಗಲೂ ನಮ್ಮಲ್ಲಿ ಬಳಕೆಯಲ್ಲಿವೆ. ಆ 66ರ ಪೈಕಿ ಮನುಷ್ಯನಿಗೆ ಮತ್ತು ಪ್ರಾಣಿಗಳಿಗೆ ಅಪಾಯ ತರಬಲ್ಲ 27ನ್ನು ನಿಷೇಧಿಸುವ ಪ್ರಸ್ತಾವವೇನೋ ಇದೆ. ವಿಷವಸ್ತುಗಳ ಉತ್ಪಾದಕರಿಗೆ ಒಳ್ಳೆಯದಾಗಲೆಂದು ಈ ಪ್ರಸ್ತಾವವನ್ನೇ ಆದಷ್ಟು ದುರ್ಬಲಗೊಳಿಸುವ ಮತ್ತು ನೆಪಮಟ್ಟಕ್ಕಿಳಿಸುವ ಹುನ್ನಾರ ಕಾಣುತ್ತದೆಂಬ ಟೀಕೆ ಆಗಲೇ ಬಂದಿತ್ತು. ಈಗಂತೂ ನಿಷೇಧ ಎಂದರೆ ಹಿಜಾಬ್ ನಿಷೇಧ, ಧ್ವನಿವರ್ಧಕ ನಿಷೇಧದ ಚರ್ಚೆಗಳೇ ಮುನ್ನೆಲೆಗೆ ಬರುತ್ತಿವೆ ವಿನಾ ಜೀವರಕ್ಷಕ ವಿಷಯಗಳೆಲ್ಲ ಹಿನ್ನೆಲೆಗೆ ಹೋಗಿಬಿಟ್ಟಿವೆ.

ನಮ್ಮಲ್ಲಿ ಅರಣ್ಯ ವಿಸ್ತೀರ್ಣ ಹೆಚ್ಚಾಗಿದೆ ಎಂದು ಉಪಗ್ರಹ ಚಿತ್ರಗಳ ಆಧರಿಸಿ ಸರ್ಕಾರಿ ಅಂಕಿ ಅಂಶಗಳ ಘೋಷಣೆಯಾಗುತ್ತದೆ. ಅಂಥ ಅರಣ್ಯದಲ್ಲಿ ಜೀವಾವಾಸ ನಿಜಕ್ಕೂ ಹೆಚ್ಚಾಗಿದೆಯೆ, ಪಶುಪಕ್ಷಿಗಳ ಸಂಖ್ಯೆ, ದುಂಬಿ-ಜೇನ್ನೊಣಗಳ ಸಾಂದ್ರತೆ ಹೆಚ್ಚಿದೆಯೆ, ನದಿ ಕೊಳ್ಳಗಳಲ್ಲಿ ಜಲಚರಗಳ ಸಂಖ್ಯೆ ಹೆಚ್ಚಾಗಿದೆಯೆ, ಅದು ಗೊತ್ತಿರುವುದಿಲ್ಲ. ಮಳೆ ಚೆನ್ನಾಗಿ ಸುರಿದಾಗ ಎಲ್ಲ ಕೆರೆಕಟ್ಟೆಗಳಲ್ಲೂ ನೀರು ತುಂಬಿ ಹೊರಕ್ಕೆ ಹರಿಯುತ್ತದೆ; ಆದರೆ ಅಂಥ ಕೆರೆಗಳಲ್ಲಿ ಹೂಳು ಎಷ್ಟು ತುಂಬಿದೆ ಎಂಬುದು ಲೆಕ್ಕಕ್ಕೆ ಬರುವುದೇ ಇಲ್ಲ. ಹಾಗೆಯೇ ಕೊಳಕು ಗಾಳಿಯ ವಿಸರ್ಜನೆಯ ಪ್ರಮಾಣ ಕಡಿಮೆಯಾಗಿದೆ ಎಂದು ನಮ್ಮ ದೊಡ್ಡ ನಗರಗಳಲ್ಲಿನ ಉಪಕರಣಗಳು ಸಾರುತ್ತವೆ. ಆದರೆ ಲಕ್ಷಾಂತರ ಸಣ್ಣಪುಟ್ಟ ನಗರಗಳಲ್ಲಿ ಗಾಳಿಯ ಗುಣಮಟ್ಟವನ್ನು ಅಳೆಯುವವರೇ ಇಲ್ಲ. ಅದರ ಬದಲು ಒಟ್ಟೊಟ್ಟು ಎಷ್ಟು ವಾಹನಗಳು ಮಾರಾಟವಾಗಿವೆ, ರಸ್ತೆಯಲ್ಲಿ 15 ವರ್ಷಗಳಿಗಿಂತ ಹಳೇ ವಾಹನಗಳು ಎಷ್ಟಿವೆ ಎಂಬುದರ ಲೆಕ್ಕ ಹಿಡಿದು ಹೊರಟರೆ ಗಾಳಿಯ ಗುಣಮಟ್ಟದ ನೈಜ ಚಿತ್ರಣ ಸಿಗುತ್ತದೆ. ಇಂಥ ಎಲ್ಲ ಲೆಕ್ಕಾಚಾರಗಳಲ್ಲೂ ನಮ್ಮ ದೇಶ ನಪಾಸಾದಂತಿದೆ.

ಈ ವರ್ಷದ 'ವಿಶ್ವ ಪರಿಸರ ದಿನ' ಹಿಂದೆಂದಿಗಿಂತ ವಿಶೇಷದ್ದಾಗಿತ್ತು. ಐವತ್ತು ವರ್ಷಗಳ ಹಿಂದೆ, 1972ರಲ್ಲಿ ಸ್ವೀಡನ್ನಿನ ಸ್ಟಾಕ್‌ಹೋಮ್ ನಗರದಲ್ಲಿ 'ಇರುವುದೊಂದೇ ಭೂಮಿ' ಹೆಸರಿನ ಮೊದಲ ಪರಿಸರ ಸಮ್ಮೇಳನ ನಡೆದಿತ್ತು. ಈ 50ನೇ ವರ್ಷದಲ್ಲಿ ಮತ್ತೊಮ್ಮೆ 'ಸ್ಟಾಕ್‌ಹೋಮ್ + 50' ಹೆಸರಿನಲ್ಲಿ ಅಲ್ಲೇ ಅದೇ 'ಇರುವುದೊಂದೇ ಭೂಮಿ' ಹೆಸರಿನ ಸಮಾವೇಶ ನಡೆಯಿತು. ಮನುಕುಲ ತನ್ನ ಹೊಣೆಯನ್ನು ಸೂಕ್ತವಾಗಿ ನಿಭಾಯಿಸುವುದನ್ನು ಕಲಿತಿದೆಯೆ ಎಂಬುದರ ಮೌಲ್ಯಮಾಪನ ನಡೆಯಿತು. ಕೆಲವು ರಾಷ್ಟ್ರಗಳು ಕಟ್ಟುನಿಟ್ಟಿನ ಕಾನೂನುಗಳನ್ನು ಜಾರಿಗೆ ತಂದು ತಂತಮ್ಮ ನೆಲಜಲವನ್ನು ತಕ್ಕಮಟ್ಟಿಗೆ ಚೊಕ್ಕಟ ಇಟ್ಟುಕೊಂಡಿವೆ. ಯುರೋಪಿನ ಆರು ದೇಶಗಳ ಮೂಲಕ ಹಾದು ಹೋಗುವ ರೈನ್ (Rhine) ನದಿ ಸಮುದ್ರಕ್ಕೆ ಸೇರುವವರೆಗೂ ಚೊಕ್ಕಟವಾಗಿಯೇ ಇದೆ. ಆ ನದಿಯ ಒಂದೊಂದು ಹನಿಯೂ ಎಂಬತ್ತು ಬಾರಿ ಬಳಕೆಯಾಗಿ ಮತ್ತೆ ನದಿಗೆ ಸ್ವಚ್ಛ ಸ್ಥಿತಿಯಲ್ಲೇ ಸೇರುತ್ತದೆ ಎಂಬ ಪ್ರತೀತಿ ಇದೆ. ಅಲ್ಲಿನವರ ಆ ಮಟ್ಟಿನ ಪರಿಸರ ಪ್ರಜ್ಞೆಯನ್ನು ಮೆಚ್ಚಲೇಬೇಕು. ಆದರೆ ಇಡೀ ಪೃಥ್ವಿಯ ಸಾಮೂಹಿಕ ಆಸ್ತಿ ಎನಿಸಿದ ವಾಯುಮಂಡಲ ಮತ್ತು ಸಪ್ತಸಾಗರಗಳು ಈ 50 ವರ್ಷಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕೊಳೆಯನ್ನು ಸೇರಿಸಿಕೊಂಡಿವೆ. ಶ್ರೀಮಂತ, ಶಕ್ತಿವಂತ ದೇಶಗಳ ಬೇಜವಾಬ್ದಾರಿ ಜಾಸ್ತಿಯಾಗುತ್ತಿದೆ. ನಮ್ಮ ದೇಶದಲ್ಲೂ ಶ್ರೀಮಂತರು ತುಂಬಾ ದೊಡ್ಡ ಪ್ರಮಾಣದಲ್ಲಿ ಬಿಸಿಗಾಳಿಯನ್ನು ಹೊರ ಹೊಮ್ಮಿಸುತ್ತಾರೆ. ತಾಪಮಾನ ಏರಿಕೆಯ ದುಷ್ಫಲ ಮಾತ್ರ ಜಗತ್ತಿನೆಲ್ಲೆಡೆ ದುರ್ಬಲರಿಗೇ ಹೆಚ್ಚಾಗಿ ಬಡಿಯುತ್ತದೆ.

ಕಳೆದ ವಾರ ಜಗತ್ತಿನ ಪ್ರತಿಷ್ಠಿತ 17 ವಿಜ್ಞಾನ ಸಂಸ್ಥೆಗಳ ತಜ್ಞರು ಒಂದು ಜಂಟಿ ಹೇಳಿಕೆಯನ್ನು ಪ್ರಕಟಿಸಿದರು. ಭೂಮಿಯನ್ನು ಮತ್ತೆ ಸುಸ್ಥಿತಿಗೆ ತರಲು ಹೆಚ್ಚು ಸಮಯ ಉಳಿದಿಲ್ಲ ಎಂದು ಎಚ್ಚರಿಸಿದರು. ನಾವೆಲ್ಲರೂ 'ಉತ್ತಮ ನೆರೆಹೊರೆಯವರಾಗೋಣ, ಉತ್ತಮ ಪೂರ್ವಜರಾಗೋಣ' ಎಂದು ಕರೆ ಕೊಟ್ಟರು. ಪೂರ್ವಜರು ಅಂದಾಕ್ಷಣ ನಮಗಿಂತ ಹಿರಿಯರು ಎಂತಲೋ ಅಥವಾ ಇನ್ನೂ ಹಿಂದಿನ ವಾನರರೋ ಎಂಬ ಭಾವನೆ ಮೂಡುತ್ತದೆ. ಅದು ಹಾಗಲ್ಲ. ಮುಂದಿನ ಪೀಳಿಗೆಯ ಮಟ್ಟಿಗೆ ನಾವೂ ಒಂದಲ್ಲ ಒಂದು ದಿನ ಪೂರ್ವಜರೇ ಆಗುತ್ತೇವೆ ತಾನೆ?

ನಮ್ಮ ಪೂರ್ವಜರ ಸಾಧನೆಗಳನ್ನು ಕೊಂಡಾಡಲು ಈಗೀಗ ನಾಮುಂದು, ತಾಮುಂದು ಎನ್ನುತ್ತ ಅನೇಕ ಸ್ವಯಂಘೋಷಿತ ಇತಿಹಾಸಕಾರರು ಉದ್ಭವಿಸುತ್ತಿದ್ದಾರೆ. ನಾಳಿನ ಇತಿಹಾಸ ನಮ್ಮನ್ನು ಹೇಗೆ ಬಣ್ಣಿಸಬಹುದು? ಉತ್ಖನನ ಮಾಡಿದಲ್ಲೆಲ್ಲ ಪ್ಲಾಸ್ಟಿಕ್ ಕಚಡಾ, ಹಳೇ ಟೈರ್, ಸ್ಯಾನಿಟರಿ ಪ್ಯಾಡ್, ಕಾಂಕ್ರೀಟ್ ಕಂಬಿ, ಕೇಬಲ್ ತಂತಿಗಳೇ ಸಿಗುತ್ತಿದ್ದರೆ?

ಚುರುಮುರಿ



ಕತ್ತೆಯ ಕಾಲ!

• ಚಂದ್ರಕಾಂತ ವಡ್ಡು

'ಪ್ರೈಮರಿ ಶಾಲೆಯಲ್ಲಿ ಚೆನ್ನಬಸಯ್ಯ ಮೇಷ್ಟ್ರ ಮಾತು ಕೇಳಬಾರದಿತ್ತು...' ಪಶ್ಚಾತ್ತಾಪದಿಂದ ನಿಡುಸುಯ್ದ ಬದ್ರಿ. ಅವನ ದನಿಯಲ್ಲಿ, ಪಕ್ಷಾಂತರ ಮಾಡಿಯೂ ಅಧಿಕಾರ ವಂಚಿತನಾದ ರಾಜಕಾರಣಿಯ ಸಂಕಟವಿತ್ತು.

'ಯಾಕಪಾ? ಅವರು ಅಷ್ಟು ಕಟ್ಟುನಿಟ್ಟಾಗಿ ಕಲಿಸಿದ್ದರಿಂದಲೇ ನೀನು ಇವತ್ತು ಇಂಜಿನಿಯರ್...'

ತಿಂಗಳೇಶನ ಮಾತು ತುಂಡರಿಸಿದ ಬದ್ರಿ, 'ಸರಿಯಾಗಿ ಓದಿದರೆ ಅಧಿಕಾರಿ ಆಗುತ್ತೀ, ಇಲ್ಲದಿದ್ದರೆ ಕತ್ತೆ ಕಾಯಲು ಹೋಗಬೇಕಾಗುತ್ತದೆ ಎಂದಿದ್ದರು ಮೇಷ್ಟ್ರು. ನಾನು ಮೊದಲನೆಯದ್ದು ಆಯ್ಕೆ ಮಾಡಿಕೊಂಡು ತಪ್ಪು ಮಾಡಿದೆ'.

'ಕತ್ತೆ ಕಾಯಲು ಹೋಗಿದ್ದರೆ ಚೆನ್ನಾಗಿತ್ತೇನು?'

'ಈಗ ಅತ್ತೆಯ ಕಾಲವೂ ಇಲ್ಲ, ಸೊಸೆಯ ಕಾಲವೂ ಅಲ್ಲ, ಈಗೇನಿದ್ದರೂ ಕತ್ತೆಯ ಕಾಲ! ಕತ್ತೆ ಸಾಕಣೆಯಲ್ಲಿ ಇರುವಷ್ಟು ಲಾಭ ಯಾವುದರಲ್ಲೂ ಇಲ್ಲ. 30 ಮಿಲಿ ಲೀಟರ್ ಕತ್ತೆ ಹಾಲಿಗೆ 150 ರೂಪಾಯಿ ಬೆಲೆ. ಒಂದು ಲೀಟರ್ ಬೆಲೆ ನೀನೇ ಲೆಕ್ಕ ಹಾಕು. ಜನ ಮಾಹಿತಿ ತಂತ್ರಜ್ಞಾನ ಕ್ಷೇತ್ರ ತೊರೆದು ಕತ್ತೆ ಸಾಕ ತೊಡಗಿದ್ದಾರೆ'.

'ಅಂತೂ ಕತ್ತೆಯ ಕಾಲು ಹಿಡಿಯುವ ಸಮಯ ಬಂದಿದೆ'.

'ಹಾಲಿಗಷ್ಟೇ ಅಲ್ಲ ಮಾರಾಯ, ಕತ್ತೆಯ ಮೂತ್ರಕ್ಕೂ ಲೀಟರಿಗೆ 600 ರೂಪಾಯಿ ದರ!'

'ಹಾಗಾದರೆ ಈಗಿನ ಮೇಷ್ಟ್ರು, 'ಸರಿಯಾಗಿ ಕತ್ತೆ ಕಾಯೋದನ್ನ ಕಲಿಯಿರಿ, ಸ್ವಾವಲಂಬಿ ಜೀವನ ಮಾಡಬಹುದು. ಇಲ್ಲದಿದ್ದರೆ ಅಧಿಕಾರಿಯಾಗಿ ಕತ್ತೆಯಂತಹ ರಾಜಕಾರಣಿಗಳ ಕಾಲು ಹಿಡಿಯಬೇಕಾಗುತ್ತದೆ' ಎಂದು ಬೋಧಿಸಬಹುದು'.

'ಈ ಸತ್ಯವನ್ನು ಕತ್ತೆಗಳ ಮೆರವಣಿಗೆ ಮೂಲಕ ಸಾರಲು ವಾಟಾಳು ಬಹುಕಾಲದಿಂದ ಪ್ರಯತ್ನಪಟ್ಟರು. ಜನ ಅರ್ಥ ಮಾಡಿಕೊಳ್ಳಲಿಲ್ಲ!'

'ವೇದ ಸುಳ್ಳಾಯಿತೋ ಇಲ್ಲವೋ ಕಾಲಕ್ಕೆ ತಕ್ಕಂತೆ ಗಾದೆಯಂತೂ ಬದಲಾಗಿದೆ. 'ಅತ್ತೆಗೊಂದು ಕಾಲ, ಕತ್ತೆಗೊಂದು ಕಾಲ'.

'ಮೂರು ಕೊಟ್ಟರೆ ಹಸುವಿನ ಹಾಲು, ಆರು ಕೊಟ್ಟರೆ ಕತ್ತೆ ಹಾಲು', 'ಕತ್ತೆಯ ಕಾಲಾದರೂ ಹಿಡಿ ಅಥವಾ ಕತ್ತೆಯ ಹಾಲಾದರೂ ಕುಡಿ!' ತಿಂಗಳೇಶನೂ ಕೆಲವು ಗಾದೆಗಳನ್ನು ತಿರುಚಿದ.

ಸಂಗತ

ಸ್ವಪ್ರೀತಿಯಿಂದ ಸ್ವವಿವಾಹದೆಡೆಗೆ

ಇದಕ್ಕೆ ವಿಶ್ವದಾದ್ಯಂತ ಹೆಣ್ಣುಮಕ್ಕಳೇ ಹೆಚ್ಚಾಗಿ ಮುಂದೆ ಬರುತ್ತಿರುವುದು, ಒಂದು ಪ್ರಗತಿಪರ ಸಮಾಜ ತನ್ನ ವೈವಾಹಿಕ ವ್ಯವಸ್ಥೆಯನ್ನು ಪುನರ್‌ಪರಿಶೀಲಿಸುವ ಅಗತ್ಯವನ್ನು ಒತ್ತಿಹೇಳುತ್ತಿದೆ

• ಡಾ. ಜ್ಯೋತಿ

ನಿಮ್ಮನ್ನು ನೀವು ಎಷ್ಟು ಪ್ರೀತಿಸಬಹುದು? ಈ ಪ್ರೀತಿ, ನಿಮ್ಮನ್ನು ನೀವೇ ವಿವಾಹವಾಗುವ ಮಟ್ಟಕ್ಕೆ ಕೊಂಡೊಯ್ಯಬಲ್ಲದೇ? ಹಿಂದಿಯ 'ಕ್ವೀನ್' ಸಿನಿಮಾದಲ್ಲಿ ನಾಯಕಿ ತನ್ನ ಮುರಿದುಹೋದ ಮದುವೆಯಿಂದ ವಿಚಲಿತಳಾಗದೆ, ಒಬ್ಬಳೇ ಹನಿಮೂನ್‌ಗೆ ಹೋಗುವ ನಿರ್ಧಾರ ತೆಗೆದುಕೊಳ್ಳುವುದು, ಪ್ರೇಕ್ಷಕರಿಗೆ ಅರ್ಥೈಸಿಕೊಳ್ಳಲು ಸ್ವಲ್ಪ ಕಷ್ಟವೆನಿಸಿತ್ತು. ಈಗ ವಾಸ್ತವದಲ್ಲಿ, 24 ವರ್ಷದ ಗುಜರಾತ್ ಮಹಿಳೆ ಕ್ಷಮಾ ಬಿಂದು, ಇದೇ 11ರಂದು ತನ್ನನ್ನು ತಾನೇ ಮದುವೆಯಾಗುವುದಾಗಿ ಘೋಷಿಸಿದ್ದಾರೆ. ಈ ಮೂಲಕ, ಆಕೆ ವಿವಾಹಿತ ಒಂಟಿ ಮಹಿಳೆ ಎನಿಸಿಕೊಳ್ಳುತ್ತಾರೆ.

ಇಂತಹ ವಿವಾಹ ಪದ್ಧತಿಯನ್ನು ಸ್ವವಿವಾಹ (ಸೋಲೋಗಮಿ) ಎಂದು ಕರೆಯುತ್ತಾರೆ. ಇದು, ಭಾರತದ ಮೊದಲ ಸ್ವವಿವಾಹ ಪ್ರಕರಣವಾಗಲಿದೆ. ಇತ್ತೀಚಿನ ದಿನಗಳಲ್ಲಿ ಸ್ವವಿವಾಹ ಪದ್ಧತಿ ಪಾಶ್ಚಾತ್ಯ ದೇಶಗಳಲ್ಲಿ ಮತ್ತು ಜಪಾನಿನಲ್ಲಿ ಜನಪ್ರಿಯತೆ ಪಡೆಯುತ್ತಿದ್ದು, ಸಾವಿರಾರು ಪ್ರಕರಣಗಳು ದಾಖಲಾಗಿವೆ. ಇದು ಕಾನೂನಿನ ನೆಲೆಯಲ್ಲಿ ಅಧಿಕೃತ ಸ್ಥಾನಮಾನ ಪಡೆಯದಿದ್ದರೂ ಮದುವೆಯಾಗಬೇಕಾದ ಬಾಹ್ಯ ಒತ್ತಡ ಕಡಿಮೆ ಮಾಡಿಕೊಳ್ಳಲು ಅನೇಕರು ಈ ಮಾರ್ಗ ಅನುಸರಿಸುವುದು ಹೆಚ್ಚಾಗುತ್ತಿದೆ.

ಸುಮಾರು 20 ವರ್ಷಗಳ ಹಿಂದೆ, ಅಮೆರಿಕದ ಜನಪ್ರಿಯ ಧಾರಾವಾಹಿ 'ಸೆಕ್ಸ್ ಆ್ಯಂಡ್ ದಿ ಸಿಟಿ'ಯ ಪಾತ್ರವಾದ ಕ್ಯಾರಿ ಬ್ರಾಡ್ ಶಾ ಸ್ವವಿವಾಹ ಆಗುವುದರ ಮೂಲಕ ಇದು ಜನಪ್ರಿಯತೆ ಪಡೆಯಿತು. ಇದಕ್ಕೆ ಸ್ಫೂರ್ತಿ, 1993ರಲ್ಲಿ ಸ್ವವಿವಾಹವಾದ ವಿಶ್ವದ ಮೊದಲ ಮಹಿಳೆ ಅಮೆರಿಕದ ಲಿಂಡಾ ಬೇಕರ್ ಎನ್ನಬಹುದು. ಅವರು ತಮ್ಮ ಸ್ನೇಹಿತರ ಸಮ್ಮುಖದಲ್ಲಿ, 'ನಾನು ನನ್ನ ಜೀವನದ ಕೊನೆಯ ಕ್ಷಣಗಳವರೆಗೆ ನನ್ನನ್ನು ಪ್ರೀತಿಸುತ್ತೇನೆ ಮತ್ತು ಗೌರವಿಸುತ್ತೇನೆ' ಎನ್ನುವ ವೈವಾಹಿಕ ಪ್ರತಿಜ್ಞೆ ತೆಗೆದುಕೊಂಡರು. ವಿಸ್ಮಯವೆಂದರೆ, ಇದರಲ್ಲಿ ವಿಚ್ಛೇದನ ಪ್ರಕರಣವೊಂದು ನಡೆದಿದೆ. ಬ್ರೆಜಿಲ್‌ನ ಕ್ರಿಸ್ ಗಲೇರಾ ಸ್ವವಿವಾಹವಾದ 90 ದಿನಗಳ ನಂತರ ವ್ಯಕ್ತಿಯೊಬ್ಬನನ್ನು ಪ್ರೀತಿಸಿ, ತನಗೆ ತಾನು ವಿಚ್ಛೇದನ ಕೊಟ್ಟುಕೊಂಡು ಆ ವ್ಯಕ್ತಿಯನ್ನು ವಿವಾಹವಾದರು!

ಈ ಸ್ವವಿವಾಹ ಹೇಗೆ ನಡೆಯುತ್ತದೆಂದರೆ, ಒಬ್ಬ ವ್ಯಕ್ತಿ ತನ್ನ ಧಾರ್ಮಿಕ ಸಂಪ್ರದಾಯದಂತೆ ಸಾರ್ವಜನಿಕ ಸಮಾರಂಭದಲ್ಲಿ ತನ್ನನ್ನೇ ವಿವಾಹವಾಗುತ್ತಾರೆ. ಹಲವು ದೇಶಗಳಲ್ಲಿ ಇಂತಹ ವಿವಾಹ ಆಯೋಜಿಸುವ ಸಂಘಟನೆಗಳೂ ಅಸ್ತಿತ್ವಕ್ಕೆ ಬಂದಿವೆ. ಈಗ, ಭಾರತದಲ್ಲಿ ಸ್ವವಿವಾಹವಾಗುತ್ತಿರುವ ಕ್ಷಮಾ ಕೂಡ ಹಿಂದೂ ಧಾರ್ಮಿಕ ವಿಧಿ ವಿಧಾನಗಳಂತೆ ಅರಿಶಿನ, ಮೆಹೆಂದಿ ಕಾರ್ಯಕ್ರಮಗಳೊಂದಿಗೆ, ಸಪ್ತಪದಿ ತುಳಿದೇ ತನ್ನನ್ನು ವಿವಾಹವಾಗುತ್ತಿರುವುದಾಗಿ ಹೇಳಿದ್ದಾರೆ. ಅವರೇ ಹೇಳಿದಂತೆ, 'ನನಗೆ ಇನ್ನೊಬ್ಬರನ್ನು ಮದುವೆಯಾಗಲು ಇಷ್ಟವಿಲ್ಲ. ಆದರೆ, ವಧುವಾಗಿ ಕಾಣಿಸಿಕೊಳ್ಳುವ ಆಸೆ. ಇಲ್ಲಿ ನನ್ನ ಸಂದೇಶವೆಂದರೆ, ನನ್ನನ್ನು ನನಗಿಂತ ಇನ್ಯಾರೂ ಹೆಚ್ಚು ಪ್ರೀತಿಸುವುದು ಅಸಾಧ್ಯ'.

ವಿಶೇಷವೆಂದರೆ, ಹೆಚ್ಚಾಗಿ ಹೆಣ್ಣುಮಕ್ಕಳೇ ಸ್ವವಿವಾಹವಾಗಲು ಮುಂದೆ ಬರುತ್ತಿದ್ದಾರೆ. ಯಾಕೆಂದು ಕಳೆದ ಕೆಲವು ದಶಕಗಳ ಮಹಿಳಾ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಹೆಣ್ಣುಮಕ್ಕಳು ಸ್ವತಂತ್ರವಾಗಿ ಬದುಕುವುದನ್ನು ಕಲಿಯುತ್ತಿದ್ದಾರೆ. ಆದರೆ, ಒಬ್ಬ ಮಹಿಳೆ 'ಸರಿಯಾದ' ವಯಸ್ಸಿನಲ್ಲಿ ಮದುವೆಯಾಗದಿದ್ದಲ್ಲಿ ಸಮಾಜವು ಅವಳನ್ನು ಜೀವನದಲ್ಲಿ ಸೋತಿರುವವಳಂತೆ ನೋಡುತ್ತದೆ. ಇಂತಹ ಸಾಮಾಜಿಕ ಮತ್ತು ಕೌಟುಂಬಿಕ ಒತ್ತಡಗಳಿಂದ ಹೊರಬರಲು, ಮಹಿಳೆಯರು ಈ ಹೊಸ ಸಂಪ್ರದಾಯಕ್ಕೆ ಮನಸ್ಸು ಮಾಡುತ್ತಿದ್ದಾರೆ. ಸ್ವವಿವಾಹದಲ್ಲಿ ಮುಖ್ಯವಾಗಿ ಇರುವುದು, ತಾನು ಇನ್ನೊಬ್ಬ ವ್ಯಕ್ತಿಯ ಅಗತ್ಯವಿಲ್ಲದೆ ತನ್ನನ್ನು ಪ್ರೀತಿಸುವ ಮತ್ತು ಕಾಳಜಿಯಿಂದ ನೋಡಿಕೊಳ್ಳುವ ಭರವಸೆ ಪಡೆದುಕೊಳ್ಳುವುದು, ತನ್ನಲ್ಲಿರುವ ದೌರ್ಬಲ್ಯಗಳನ್ನು ಒಪ್ಪಿಕೊಂಡು, ತನ್ನನ್ನು ಕ್ಷಮಿಸಿ, ಸಂಪೂರ್ಣವಾಗಿ ಪ್ರೀತಿಸುವುದು.

ಪ್ರತಿಯೊಬ್ಬರೂ ಇನ್ನೊಬ್ಬರನ್ನು ವಿವಾಹವಾಗುವ ಮೊದಲು ಸ್ವವಿವಾಹದ ಆಶಯಗಳನ್ನು ಅಳವಡಿಸಿಕೊಳ್ಳುವುದು ಉತ್ತಮ. ಯಾಕೆಂದರೆ, ನಮ್ಮನ್ನು

ನಾವು ಪ್ರೀತಿಸದ, ಒಪ್ಪಿಕೊಳ್ಳದ ವಿನಾ ಇನ್ನೊಬ್ಬರನ್ನು ಹೇಗೆ ಸಂಪೂರ್ಣವಾಗಿ ಪ್ರೀತಿಸಬಲ್ಲೆವು? ನಮ್ಮನ್ನು ನಾವು ಅರಿತುಕೊಳ್ಳದಿದ್ದಲ್ಲಿ, ಇನ್ನೊಬ್ಬರನ್ನು ಅರಿಯಲು ಸಾಧ್ಯವೇ? ಅಲ್ಲದೆ, ಜಗತ್ತೆಲ್ಲಾ ಕೈಬಿಟ್ಟಿದೆ ಎನಿಸಿದಾಗ, ನಮ್ಮೊಂದಿಗೆ ಜೊತೆಗಿರುವುದು ನಮ್ಮ ದೇಹ, ಮನಸ್ಸು, ಮತ್ತು ಆತ್ಮ ಮಾತ್ರ.

ಒಟ್ಟಿನಲ್ಲಿ, ಸ್ವವಿವಾಹ ಪದ್ಧತಿ ಸಾಮಾಜಿಕ ವ್ಯವಸ್ಥೆಗಳ ವಿರುದ್ಧ ಹೆಣ್ಣುಮಕ್ಕಳ ದಂಗೆಯೆನ್ನಬಹುದು. ಯಾಕೆಂದರೆ, ಮದುವೆಯಾಗಬೇಕೆಂಬ ಒತ್ತಡವು ಗಂಡಿಗಿಂತ ಹೆಣ್ಣಿನ ಮೇಲೆ ಜಾಸ್ತಿ ಇರುತ್ತದೆ. ಅದೇ ರೀತಿ, ಒಂಟಿಯಾಗಿರುವ ಗಂಡಿಗಿಂತ ಒಂಟಿಯಾಗಿರುವ ಹೆಣ್ಣನ್ನು ಸಮಾಜ ಕುಹಕ ದೃಷ್ಟಿಯಿಂದ ನೋಡುತ್ತದೆ. ಇವುಗಳಿಂದ ಬಿಡಿಸಿಕೊಳ್ಳಲು, ಸ್ವತಂತ್ರ ಮನೋಭಾವದ ಹೆಣ್ಣುಮಕ್ಕಳು ಸ್ವವಿವಾಹಕ್ಕೆ ಮುಂದಾಗುತ್ತಿದ್ದಾರೆ.

ಈಗಾಗಲೇ, ಹಲವಾರು ಧಾರ್ಮಿಕ ಮುಖಂಡರು ಮತ್ತು ಸಂಪ್ರದಾಯಸ್ಥರು, ಇದು ಧರ್ಮಕ್ಕೆ ವಿರುದ್ಧವಾದುದೆಂದು ಹೇಳಿದ್ದಾರೆ. ಆದರೆ, ಕ್ಷಮಾ ಈ ಬೆದರಿಕೆಗಳಿಗೆ ತಲೆಕೆಡಿಸಿಕೊಳ್ಳದೆ, ತನ್ನ ವಿವಾಹ ತಯಾರಿ ಮುಂದುವರಿಸಿದ್ದಾರೆ. ಈ ವಿನೂತನ ವಿವಾಹಕ್ಕೆ ನಮ್ಮ ಸಮಾಜ ಹೇಗೆ ಸ್ಪಂದಿಸುತ್ತದೆ ಎನ್ನುವುದನ್ನು ಮುಂದಿನ ದಿನಗಳಲ್ಲಿ ಕಾದು ನೋಡಬೇಕಾಗಿದೆ.

ವಾಚಕರ ವಾಣಿ

ಉಗ್ರನಿಗೆ ಉಗ್ರ ಶಿಕ್ಷೆಯಾಗಲಿ

ಕೂಲಿ ವೇಷದಲ್ಲಿದ್ದ 'ಎ ದರ್ಜೆ' ಉಗ್ರ ಸುದ್ದಿ (ಪ್ರ.ವಾ., ಜೂನ್ 8) ಓದಿ ಎದೆ ಝಲ್ಲೆಂದಿತು. ಕಾಶ್ಮೀರದಿಂದ ಬಂದ ಈ ಪಾತಕಿ ನಮ್ಮ ಕರುನಾಡನ್ನು ಆಶ್ರಯಿಸಿ ಅದ್ಯಾವ ಕುಕೃತ್ಯಕ್ಕೆ ಹೊಂಚು ಹಾಕಿದ್ದನೋ ಅದೆಷ್ಟು ಜೀವಗಳ ಬಲಿಗೆ ಕಾದಿದ್ದನೋ. ಶಾಂತಿ, ಸೌಹಾರ್ದ ವಾತಾವರಣದ ಕನ್ನಡನಾಡನ್ನು ರಕ್ತಸಿಕ್ತಗೊಳಿಸುವ ದುಷ್ಟ ಮನಃಸ್ಥಿತಿಯ ಇಂತಹ ನೀಚ ಉಗ್ರರಿಗೆ ಅತ್ಯಂತ ಉಗ್ರವಾದ ಶಿಕ್ಷೆಯಾಗುವಂತೆ ಸರ್ಕಾರ ನೋಡಿಕೊಳ್ಳಲಿ. ಇಂತಹ ಇನ್ಯಾರಾದರೂ ಭಯೋತ್ಪಾದನೆಯ ಖೂಳರು ಬೆಂಗಳೂರಿನಲ್ಲಿ ಅಡಗಿದ್ದರೆ ತನಿಖೆಯಿಂದ ಅರಿಯಲಿ. ಜೊತೆಯಲ್ಲಿ ಈತನಿಗೆ ಸಹಕರಿಸಿದವರು ಹಾಗೂ ಜೊತೆಯಿದ್ದವರಿಗೂ ಕಾನೂನು ತಕ್ಕ ಪಾಠ ಕಲಿಸಲಿ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಪಾಠ ಬಿಜೆಪಿಗೆ ಮಾತ್ರವಲ್ಲ

'ಆಕ್ಷೇಪಾರ್ಹ ಹೇಳಿಕೆಗೆ ಸಂಬಂಧಿಸಿದಂತೆ ಬಿಜೆಪಿ ಪಾಠ ಕಲಿಯಲಿ' ಎಂಬ ಸಂಪಾದಕೀಯ (ಪ್ರ.ವಾ., ಜೂನ್ 8) ಸಕಾಲಿಕವಾಗಿದೆ. ಆದರೆ ಈ ಪ್ರಕರಣದಲ್ಲಿ ಕಲಿಯಬೇಕಾದದ್ದು ಬಿಜೆಪಿ ಮಾತ್ರವಲ್ಲ, ಎಲ್ಲ ರಾಜಕೀಯ ಪಕ್ಷಗಳಿಗೂ ಪಾಠ ಇದೆ. ಯಾವ ರಾಜಕೀಯ ಪಕ್ಷವೂ ಭಾರತವನ್ನು ವೈಶ್ವಿಕ ಮಟ್ಟದಲ್ಲಿ, ಒಂದು ಆರ್ಥಿಕ ಅಥವಾ ಸ್ವತಂತ್ರ ರಾಜಕೀಯ ಘಟಕವಾಗಿ ಕಂಡಂತೆಯೇ ಇಲ್ಲ. ದೇಶ ನಡೆಸುತ್ತೇವೆಂಬ ನಮ್ಮ ಜಂಬದ ಹುರಿಯಾಳುಗಳಿಗೆ ತಮ್ಮ ಕ್ಷೇತ್ರದಾಚೆಗಿನ ಪ್ರಪಂಚ ಕಾಣಿಸುತ್ತದೆಯೇ ಎನ್ನುವುದೇ ಅನುಮಾನ. ಅವರ ವಿದ್ಯೆ, ಬುದ್ಧಿ, ದೃಷ್ಟಿಕೋನವೆಲ್ಲಾ ಎದುರಾಳಿಗಿಂತ ನಾಲ್ಕಾರು ಮತಗಳನ್ನು ಹೆಚ್ಚು ಪಡೆದು ಸೀಟು ಗೆಲ್ಲುವಷ್ಟಕ್ಕೇ ಸೀಮಿತ. ಗೆದ್ದ ಮೇಲೆ ಅದನ್ನು ಉಳಿಸಿಕೊಳ್ಳುವ ಹುಸಿ ಕಸರತ್ತು. ಅದಕ್ಕಾಗಿ ಭಾವೋದ್ರೇಕವನ್ನು ಬಡಿದೆಬ್ಬಿಸಿ, ಅಮಾಯಕರನ್ನು ಬಲಿ ಕೊಟ್ಟು, ಅವರು ಗಳಿಸುವ ಹೀರೊ ಪಟ್ಟ ಶಾಶ್ವತವೇ?

ಒಂದು ಪಕ್ಷವನ್ನು ಹಣಿಯುವ ಆವೇಶದಲ್ಲಿ, ಯಾವತ್ತೋ ಯಾವ ದೇಶದಲ್ಲೋ ಹುಟ್ಟಿ ತತ್ವಾಚಾರಗಳನ್ನು ಹೇಳಿದ ಒಬ್ಬ ಪ್ರವಾದಿಯ ಖಾಸಗಿ ಬದುಕಿನ ವದಂತಿಯನ್ನು ಕೆದಕುವುದು, ಆ ಮೂಲಕ ಜಾಗತಿಕ ಸಮುದಾಯವೊಂದನ್ನು ಎದುರು ಹಾಕಿಕೊಳ್ಳುವುದು ಪ್ರಬುದ್ಧತೆಯೆನಿಸೀತೇ ಎಂಬ ಬಗ್ಗೆ ರಾಜಕೀಯ ಪಕ್ಷಗಳು ಚಿಂತಿಸಬೇಕು. 'ವೋಟ್ ಬ್ಯಾಂಕ್' ಪರಿಕಲ್ಪನೆಯ ತಾಯಿ, ಕಾಂಗ್ರೆಸ್ ಪಕ್ಷವೇ. ಅದನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಸಾಹಸ ಬಿಜೆಪಿಯದ್ದಾಗಿದೆ.

ಆರ್.ಕೆ.ದಿವಾಕರ, ಬೆಂಗಳೂರು

ಎಲ್ಲ ಉಪಯುಕ್ತ ಮರಗಳ ಸ್ಥಿತಿ ಅರಿಯಬೇಕಿದೆ

ಪಠ್ಯಪುಸ್ತಕ ಗಲಾಟೆಯ ನಡುವೆ ಬಂದ 'ಕರ್ನಾಟಕದ ಕಾಡಿನ ಸ್ವರೂಪ ಬದಲು' ಎಂಬ ವಿಶ್ಲೇಷಣಾತ್ಮಕ ಲೇಖನ (ಪ್ರ.ವಾ., ಜೂನ್ 6) ಆತಂಕ ಹುಟ್ಟಿಸುವಂತಿದೆ. 60 ಸೆಂ.ಮೀ.ಗಿಂತಲೂ ಹೆಚ್ಚು ಕಾಂಡದ ಸುತ್ತಳತೆ ಇರುವ ಬೃಹತ್ ಮರಗಳ ಪ್ರದೇಶ ಹೆಚ್ಚಿದೆ, ಪೊದೆ, ಕಳೆ ಸಸ್ಯಗಳದು ಶೇ 50ರಷ್ಟು ಕಡಿಮೆಯಾಗಿದೆ... ಇದು ಕೊರೊನಾ ಕಾಲದಲ್ಲಿ ಆರ್ಥಿಕವಾಗಿ ಯಾವ್ಯಾವ ವರ್ಗಗಳಿಗೆ ಏನಾಯಿತು ಎಂಬ ವಿಶ್ಲೇಷಣೆಯನ್ನು ಹೋಲುತ್ತದೆ. ಬಿದಿರಿನ ಪ್ರದೇಶದಲ್ಲಿ ಆಗಿರುವ ಇಳಿಕೆ (ಶೇ 15) ಆಳುವವರ ಕಣ್ತೆರೆಸಬೇಕು.

'ಸ್ಟೇಟ್ ಆಫ್ ಎನ್ವಿರಾನ್‌ಮೆಂಟ್'ನಂತಹ ವರದಿಗಳು ಹೊರಬಂದಾಗ ಒಂದಿಷ್ಟು ಗಮನ ನೀಡಿದಂತೆ ಮಾಡಿ, ಮತ್ತೆ ಆಸಕ್ತಿ ಕಳೆದುಕೊಳ್ಳುವ ಉನ್ನತ ಅಧಿಕಾರಿಗಳಿದ್ದಾರೆ. ಕಾಡು ಹೆಚ್ಚಾಯಿತು ಎಂದು ಬೆನ್ನು ತಟ್ಟಿಕೊಳ್ಳುವ ಬದಲು, ಐದು ಜಾತಿಯ ಬೃಹತ್ ಮರಗಳನ್ನು ಹೊರತುಪಡಿಸಿ ಇತರ ಉಪಯುಕ್ತ ಮರಗಳ ಸ್ಥಿತಿಯನ್ನೂ ತಿಳಿಯುವ ಅಗತ್ಯ ಇದೆ. ಮುಖ್ಯವಾಗಿ ಕಾಡು ವಿವಿಧ ಜೀವಿಗಳಿಗೆ ಆಸರೆ ಎಂಬ ಪರಿಗಣನೆ ಅಗತ್ಯ.

ಮಹಾನಗರಗಳಲ್ಲಂತೂ ಅಭಿವೃದ್ಧಿಯ ಭರದಲ್ಲಿ ಟ್ರೀ ಕವರ್ ತೆಳುವಾಗುತ್ತಲೇ ಇದೆ. ಗ್ರಾಮೀಣ, ಅರೆಪಟ್ಟಣ ಪ್ರದೇಶಗಳಲ್ಲಿ ಹೆದ್ದಾರಿ, ಹೈಟೆನ್ಷನ್ ಲೈನ್, ಕೈಗಾರಿಕಾ ಪ್ರದೇಶ ಸ್ಥಾಪನೆಯಂತಹ ಕಾರಣ ಇರುವಾಗ ಈಗಾಗಲೇ ಇರುವ ಮರಗಳ ಭವಿಷ್ಯದ ಬಗೆಗೂ ಗಮನ ನೀಡಬೇಕಾಗಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸಮಿತಿ ರಚಿಸಿ ಸ್ವಾಯತ್ತತೆ ಕೊಡಿ

ಶಾಲೆಗಳು ಪ್ರಾರಂಭವಾಗಿವೆ, ಪಠ್ಯದ ಗೊಂದಲಕ್ಕೆ ಮಕ್ಕಳು ಬಲಿಪಶುವಾಗಹತ್ತಿದ್ದಾರೆ. ವಿಷಯ ತಜ್ಞರು, ಮಕ್ಕಳ ಮಾನಸಿಕ ತಜ್ಞರು, ಶಿಕ್ಷಕರು ಚಿಂತಿಸಬೇಕಾದ ವಿಷಯ ರಾಜಕೀಯದಲ್ಲಿ, ರಾಜಕೀಯ ಸಾಹಿತಿಗಳ ಕೈಯಲ್ಲಿ ಬಿದ್ದು ಒದ್ದಾಡುತ್ತಿದೆ. ಮಕ್ಕಳ ವಯಸ್ಸಿಗೆ ತಕ್ಕಂತೆ ಯಾವ ಗದ್ಯ, ಪದ್ಯ ಸೇರಿಸಬೇಕು, ಸೇರಿಸಬಾರದು ಎನ್ನುವುದನ್ನು ನಿರ್ಣಯಿಸುವ ಕೆಲಸ ಈ ಮೊದಲು ಪಠ್ಯಪುಸ್ತಕ ನಿರ್ದೇಶಕರದ್ದಾಗಿತ್ತು. ಉಪನ್ಯಾಸಕರು, ಶಿಕ್ಷಕರನ್ನು ಈ ಕೆಲಸಕ್ಕೆ ಕರೆಸಿ ಮುಖಾಮುಖಿ ಕೆಲಸ ಮಾಡಿಸಲಾಗುತ್ತಿತ್ತು. 1-5ನೇ ತರಗತಿವರೆಗಿನ ಪಠ್ಯಗಳನ್ನು ರಚಿಸುತ್ತಿದ್ದವರೇ ಬೇರೆ, ಮೇಲಿನ ತರಗತಿಗಳಿಗೆ ಪಠ್ಯಗಳನ್ನು ರೂಪಿಸುತ್ತಿದ್ದವರೇ ಬೇರೆ. ನಾನೊಮ್ಮೆ 3ನೇ ತರಗತಿ ಸಮಾಜ ವಿಜ್ಞಾನ ಪಠ್ಯ ತಯಾರಿಕೆಯಲ್ಲಿ ಪರಿಶೀಲಕನಾಗಿ ಹೋಗಿದ್ದೆ. ಅಲ್ಲಿ ಸಣ್ಣ ಮಕ್ಕಳ ಪಠ್ಯ ತಯಾರಿಸಲು ಉಪನ್ಯಾಸಕರನ್ನು ಆಹ್ವಾನಿಸಿದ್ದರು. ಅವರು ವಿಷಯವಾರು ಕುರಿತು ಪುಟ ತುಂಬಿಸಿದ್ದರು. ಅದು ಅವಶ್ಯವಿರಲಿಲ್ಲ, ಬೇರೆ ಬೇರೆ ಎಷ್ಟು, ಯಾವ ವಿಷಯಗಳನ್ನು ಆ ಮಕ್ಕಳು ಕಲಿಯಬಲ್ಲರು ಎಂಬುದನ್ನು ಅರಿತು ಪಠ್ಯ ತಯಾರಿಸಬೇಕು. ಬಿ.ಇಡಿ., ಎಂ.ಇಡಿ.ಯಂತಹ ತರಬೇತಿ ಪಡೆದವರಿಂದ ಸರಿಯಾದ ನ್ಯಾಯ ದೊರಕಿಸಲು ಸಾಧ್ಯ. ಕೊನೆಗೆ ವರದಿ ಕೊಡಬೇಕಿತ್ತು. ಇದ್ದ ವಿಷಯ ಇದ್ದಂತೆ ಬರೆದುಕೊಟ್ಟೆ. ಆ ಸಮಿತಿಯನ್ನೇ ರದ್ದುಪಡಿಸಿದರು. ನನ್ನನ್ನು ಕೈಬಿಟ್ಟರು. ಇದು ಅಧಿಕಾರಿಗಳ ರಾಜಕಾರಣ.

ಪಠ್ಯಪುಸ್ತಕಗಳಲ್ಲಿ ಯಾರ್‍ಯಾರೋ ನನ್ನದನ್ನು ಹಾಕಿ, ನನ್ನದನ್ನು ತೆಗೆಯಿರಿ, ಅದು ಬೇಡ, ಇದು ಬೇಕು ಎನ್ನಲು ಇದೇನು ತರಕಾರಿ ಸಂತೆಯೇ? ಮೀಸಲಾತಿಯು ಇಲ್ಲೂ ಕಾಲಿರಿಸಿತು. ಮಕ್ಕಳ ಮನಸ್ಸಿಗೆ ಪಠ್ಯವೋ ಮೀಸಲಾತಿಗಾಗಿ ಪಠ್ಯವೋ ತಿಳಿಯದು. ಪಠ್ಯಪುಸ್ತಕ ಪರಿಷ್ಕರಣೆಗಾಗಿ ತಜ್ಞರನ್ನು ಒಳಗೊಂಡ ಸಮಿತಿ ರಚಿಸಿ ಸ್ವಾಯತ್ತತೆ ಕೊಡಿ. ಪಾಲಕರು ಹಾಗೂ ಮಕ್ಕಳ ಅಭಿಪ್ರಾಯಕ್ಕೆ ಅವಕಾಶ ಇರಲಿ. ಆದರೂ ಸಮಸ್ಯೆಗಳು ಇದ್ದೇ ಇರುತ್ತವೆ. ಆದರೆ ಈ ಗಾಳಿ, ಈ ವಾತಾವರಣ ಅಲ್ಲಿ ಸುಳಿಯದು.

ಡಾ. ಕೆ.ಬಿ.ಬ್ಯಾಳಿ, ಕುಕನೂರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶದಲ್ಲಿ ರಾಜೀನಾಮೆ ಮಹಾ ಪರ್ವ

ಪ್ರಜಾವಾಣಿ ವಾರ್ತೆ

ಭಾರತದ ಸೇವಾ ಮತ್ತು ತಯಾರಿಕಾ ವಲಯದಲ್ಲಿ ಮುಂದಿನ ಆರು ತಿಂಗಳಲ್ಲಿ, ಶೇ 86ರಷ್ಟು ಜನರು ವಿವಿಧ ಕಾರಣಗಳಿಗೆ ಕೆಲಸ ಬದಲಿಸುವ ಯೋಚನೆಯಲ್ಲಿದ್ದಾರೆ ಎಂದು ಅಧ್ಯಯನ ವರದಿಯೊಂದು ಹೇಳಿದೆ. ಹೀಗೆ ಸಮೂಹಸನ್ನಿಯಂತೆ ಉದ್ಯೋಗ ಬದಲಿಸುವ ಮತ್ತು ಉದ್ಯೋಗ ಬಿಡುವ ಟ್ರೆಂಡ್ ಅನ್ನು 'ಮಹಾ ರಾಜೀನಾಮೆ' ಎಂದು ಕರೆಯಲಾಗುತ್ತದೆ. ಕೋವಿಡ್ ಅವಧಿಯಲ್ಲಿ ವಿಶ್ವದ ಮುಂದುವರಿದ ಆರ್ಥಿಕತೆಗಳಲ್ಲಿ ಮಹಾ ರಾಜೀನಾಮೆ ತನ್ನ ಪ್ರತಾಪ ತೋರಿತ್ತು. ಐರೋಪ್ಯ ದೇಶಗಳು, ಅಮೆರಿಕ, ಆಸ್ಟ್ರೇಲಿಯಾದಲ್ಲಿ ಜನರು ಹಲವು ಕಾರಣಗಳಿಂದ ಸಾಮೂಹಿಕವಾಗಿ ಉದ್ಯೋಗ ತೊರೆದಿದ್ದರು ಮತ್ತು ಉದ್ಯೋಗ ಬದಲಿಸಿದ್ದರು. ಈಗ ಭಾರತದಲ್ಲೂ ಈ ಅಲೆ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಅದರ ತೀವ್ರತೆ ಹೆಚ್ಚಾಗಲಿದೆ ಎಂದು ನೇಮಕಾತಿ ಸೇವೆಗಳನ್ನು ನೀಡುವ ಮೈಕಲ್ ಪೇಜ್ ಸಂಸ್ಥೆಯು ತನ್ನ ಅಧ್ಯಯನ ವರದಿಯಲ್ಲಿ ಹೇಳಿದೆ.

ಭಾರತವೂ ಸೇರಿ ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಹಲವು ದೇಶಗಳಲ್ಲಿ ಮೈಕಲ್ ಪೇಜ್ ಈ ಸಂಬಂಧ ಸಮೀಕ್ಷೆ ನಡೆಸಿದೆ. ಭಾರತದಲ್ಲಿ ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದವರಲ್ಲಿ ಶೇ 86ರಷ್ಟು ತಮ್ಮ ಉದ್ಯೋಗಕ್ಕೆ ರಾಜೀನಾಮೆ ನೀಡುವ ಯೋಚನೆಯಲ್ಲಿದ್ದೇವೆ ಎಂದು ಹೇಳಿದ್ದಾರೆ. ಈಗಿನ ಉದ್ಯೋಗದಲ್ಲಿ ದೊರೆಯುತ್ತಿರುವ ಸಂಬಳ ಸಾಲುತ್ತಿಲ್ಲ, ತಮ್ಮ ಅರ್ಹತೆ ಮತ್ತು ಸಾಮರ್ಥ್ಯಕ್ಕೆ ತಕ್ಕುದಾದ ಹುದ್ದೆ ಇಲ್ಲ, ಬಡ್ತಿ ದೊರೆಯುತ್ತಿಲ್ಲ, ಕಂಪನಿಯ ಸಂಸ್ಕೃತಿ–ಧೋರಣೆಗಳು ಇಷ್ಟವಾಗುತ್ತಿಲ್ಲ, ಒಟ್ಟಾರೆಯಾಗಿ ಬೇರೆ ವಲಯದಲ್ಲೇ ಕೆಲಸ ಹುಡುಕಬೇಕು ಎಂಬುದು ಉದ್ಯೋಗ ಬಿಡಲು ಈ ಜನರು ನೀಡುತ್ತಿರುವ ಹಲವು ಕಾರಣಗಳಾಗಿವೆ.

ಇವೆಲ್ಲವುಗಳಲ್ಲಿ ಯಾವುದೋ ಒಂದು ಕಾರಣಕ್ಕೂ ಜನರು ಉದ್ಯೋಗ ಬಿಡಲು ತಯಾರಿದ್ದಾರೆ. ಕೆಲವರು ಈಗಿರುವ ಕಂಪನಿ ಅಥವಾ ಸಂಸ್ಥೆಯಲ್ಲೇ ಸಂಬಳ ಹೆಚ್ಚಿಸಿದರೆ, ಬಡ್ತಿ ನೀಡಿದರೆ ಅಲ್ಲೇ ಉಳಿಯುತ್ತೇವೆ ಎಂದು ಹೇಳಿದ್ದಾರೆ. ಕೋವಿಡ್ ಸಂದರ್ಭದ ಎರಡು ವರ್ಷಗಳ ಅವಧಿಯಲ್ಲಿ ಸಂಬಳ ಹೆಚ್ಚಿಸದೇ ಇರುವುದು, ಹೆಚ್ಚಿನ ಕೆಲಸ ಮಾಡಿಸಿರುವುದು, ಬಡ್ತಿ ನೀಡದೇ ಇರುವುದು, ವರ್ಕ್ ಫ್ರಂ ಹೋಂ ಅವಧಿಯಲ್ಲಿ ವಿಪರೀತ ಪ್ರಮಾಣದ ಕಿರುಕುಳ ನೀಡಿರುವುದು, ವರ್ಕ್ ಫ್ರಂ ಹೋಂಗೆ ಒಗ್ಗಿಕೊಂಡಿದ್ದವರನ್ನು ಮತ್ತೆ ಕೆಲಸಕ್ಕೆ ಕಚೇರಿಗೆ ಕರೆಸಿಕೊಂಡಿರುವುದು ಇವೆಲ್ಲವೂ ಈ ಜನರ ಅಸಮಾಧಾನವನ್ನು ಹೆಚ್ಚಿಸಿದೆ. ಹೀಗಾಗಿ ಅವರು ಉದ್ಯೋಗ ಬದಲಿಸುವ ಯೋಚನೆಯಲ್ಲಿ ಇದ್ದಾರೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಒಂದೇ ಕಂಪನಿಯಲ್ಲಿ ದೀರ್ಘಾವಧಿಯವರೆಗೆ ಉದ್ಯೋಗಿಗಳಾಗಿರುವವರಲ್ಲಿ ಕೆಲಸ ಬಿಡುವ ಯೋಚನೆ ಕಡಿಮೆ ಇದೆ. ಒಂದೇ ಕಂಪನಿಯಲ್ಲಿ ಎರಡು ವರ್ಷಕ್ಕಿಂತ ಕಡಿಮೆ ಅವಧಿಯವರೆಗೆ ಕೆಲಸ ಮಾಡಿದವರಲ್ಲಿ ಉದ್ಯೋಗ ಬಿಡುವ ಯೋಚನೆಯಲ್ಲಿರುವವರ ಪ್ರಮಾಣ ಹೆಚ್ಚು. ಭಾರತದ ಔದ್ಯೋಗಿಕ ವಲಯದಲ್ಲಿ ಇಂತಹ ಉದ್ಯೋಗಿಗಳ ಪ್ರಮಾಣ ಶೇ 38ರಷ್ಟು ಇದೆ. ಹೊಸ ಉದ್ಯೋಗ ಹುಡುಕಿಕೊಳ್ಳುವ ಮತ್ತು ಬೇರೆ ವಲಯದಲ್ಲೇ ಕೆಲಸ ಆರಂಭಿಸುವ ಸಾಧ್ಯತೆ ಈ ವರ್ಗದ ಉದ್ಯೋಗಿಗಳಲ್ಲಿ ಇರುವ ಕಾರಣ, ಇವರು ಉದ್ಯೋಗ ಬದಲಾವಣೆಗೆ ಎದುರು ನೋಡುತ್ತಿದ್ದಾರೆ ಎಂದು ವ್ಯಾಖ್ಯಾನಿಸಲಾಗಿದೆ.

ವರ್ಕ್ ಫ್ರಂ ಹೋಂ ಪರಿಣಾಮ

ವರ್ಕ್ ಫ್ರಂ ಹೋಂ ಬಗ್ಗೆ ಉದ್ಯೋಗಿಗಳು ಏನನ್ನುತ್ತಾರೆ...



ಕೋವಿಡ್ ಬಳಿಕ, 'ವರ್ಕ್ ಫ್ರಂ ಹೋಂ' ಎಂಬುದು ಜಾಗತಿಕ ಒಪ್ಪಿತ ಸಹಜ ಕೆಲಸದ ವಿಧಾನವಾಗಿ ಬೆಳೆದಿದೆ. ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಬಹುತೇಕ ಕಚೇರಿಗಳು ತೆರೆದಿವೆ. ಮನೆಯಿಂದ ಹಾಗೂ ಅಗತ್ಯಬಿದ್ದರೆ ಕಚೇರಿಯಿಂದ ಕೆಲಸ ಮಾಡುವ ಹೈಬ್ರಿಡ್ ವಿಧಾನ ಈಗ ಪ್ರಚಲಿತದಲ್ಲಿದೆ. ಇದನ್ನು ಬೆಂಬಲಿಸುವವರ ಪ್ರಮಾಣ ಭಾರತದಲ್ಲಿ ಶೇ 68ರಷ್ಟಿದೆ ಎನ್ನುತ್ತದೆ ವರದಿ.

ಕೋವಿಡ್ ಸಮಯದಲ್ಲಿ ಕಚೇರಿಗೆ ಹೋಗಲು ಬಹುತೇಕ ಉದ್ಯೋಗಿಗಳು ಸಿದ್ಧರಿರಲಿಲ್ಲ. ಸೋಂಕು ಕಡಿಮೆಯಾದ ಬಳಿಕವೂ ಅದೇ ಧೋರಣೆಯಿತ್ತು. ಆದರೆ ಉದ್ಯೋಗಿಗಳನ್ನು ಕೆಲಸದಲ್ಲಿ ಉಳಿಸಿಕೊಳ್ಳುವ ಹಾಗೂ ಉತ್ಪಾದಕತೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಹೈಬ್ರಿಡ್ ವಿಧಾನವನ್ನು ಬಹುತೇಕ ಕಂಪನಿಗಳು ಅಳವಡಿಸಿಕೊಂಡಿವೆ. ಇದರಿಂದ ನೌಕರರು ರಾಜೀನಾಮೆ ನೀಡುವ ಪ್ರಮೇಯ ಉದ್ಭವವಾಗುವುದಿಲ್ಲ. ಹಾಗೆಯೇ, ಉದ್ಯೋಗಿಯು ಯಾವುದೇ ಮೂಲೆಯಲ್ಲಿದ್ದರೂ, ಕಂಪನಿಯ ಕೆಲಸ ಕಾರ್ಯಗಳಿಗೆ ಅಡ್ಡಿಯಾಗುವುದಿಲ್ಲ ಎಂಬುದನ್ನು ಕಂಪನಿಗಳು ಮನಗಂಡಿವೆ.

ಉದ್ಯೋಗ ಬದಲಿಸಲು ಕಾರಣಗಳು

ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರು, ಉದ್ಯೋಗ ಬದಲಾವಣೆ ಬಗ್ಗೆ ಯೋಚಿಸಲು ಹಲವು ಕಾರಣಗಳನ್ನು ಪಟ್ಟಿ ಮಾಡಿದ್ದಾರೆ. ಕೆಲವರು ಒಂದೆರಡು ಕಾರಣಗಳನ್ನು ಮಾತ್ರ ಪಟ್ಟಿ ಮಾಡಿದ್ದರೆ, ಇನ್ನೂ ಕೆಲವರು ಐದಾರು ಕಾರಣಗಳನ್ನು ಪಟ್ಟಿ ಮಾಡಿದ್ದಾರೆ. ಬಡ್ತಿ ದೊರೆಯುತ್ತಿಲ್ಲ, ಸಂಬಳ ಸಾಲುತ್ತಿಲ್ಲ ಎನ್ನುವ ಕಾರಣವನ್ನು ಹೆಚ್ಚು ಜನರು ಆಯ್ಕೆ ಮಾಡಿದ್ದಾರೆ ಎಂದು ಸಮೀಕ್ಷೆಯಲ್ಲಿ ವಿವರಿಸಲಾಗಿದೆ.

48%ರಷ್ಟು ಜನರು ಬಡ್ತಿ ದೊರೆಯುತ್ತಿಲ್ಲ ಎಂಬುದು ಕೆಲಸ ಬದಲಾವಣೆ ಬಗ್ಗೆ ಯೋಚಿಸಲು ಒಂದು ಕಾರಣ ಎಂದು ಹೇಳಿದ್ದಾರೆ

48%ರಷ್ಟು ಜನರು ಬೇರೆ ವಲಯ/ಕ್ಷೇತ್ರದಲ್ಲಿ ಕೆಲಸ ಮಾಡಲು ಬಯಸುತ್ತಿದ್ದೇವೆ. ಕೆಲಸ ಬದಲಾವಣೆಗೆ ಇದೂ ಒಂದು ಕಾರಣ ಎಂದು ಹೇಳಿದ್ದಾರೆ

38%ರಷ್ಟು ಜನರು ಸಂಬಳದ ಬಗ್ಗೆ ತೃಪ್ತಿ ಇಲ್ಲದೇ ಇರುವುದೂ ಕೆಲಸ ಬದಲಾವಣೆಗೆ ಒಂದು ಕಾರಣ ಎಂದು ಹೇಳಿದ್ದಾರೆ

23%ರಷ್ಟು ಜನರು ಕಂಪನಿಯ ನೀತಿ–ನಿರ್ದೇಶನಗಳ ಬಗ್ಗೆ ಅಸಮಾಧಾನವಿದೆ ಎಂದು ಹೇಳಿದ್ದಾರೆ.

ಪರಿಣಾಮಗಳು

ಬಹುತೇಕ ಎಲ್ಲ ವಲಯಗಳಲ್ಲಿಯೂ ಉದ್ಯೋಗ ಬದಲಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಆದರೆ ಈ ಪ್ರವೃತ್ತಿಯನ್ನು ಸಮರ್ಥವಾಗಿ ನಿಭಾಯಿಸುವ ಸವಾಲು ಉದ್ಯೋಗದಾತರ ಮೇಲಿದೆ. ಕೆಲಸಕ್ಕೆ ರಾಜೀನಾಮೆ ನೀಡುವವರ ಸಂಖ್ಯೆ ನಿಧಾನಗತಿಯಲ್ಲಿ ಹೆಚ್ಚಾದಂತೆಲ್ಲಾ, ಆ ಕೆಲಸಕ್ಕೆ ಹೊಸಬರನ್ನು ಹುಡುಕುವ, ಅವರಿಗೆ ತರಬೇತಿ ನೀಡುವ ಹಾಗೂ ಅವರು ಸಮರ್ಥವಾಗಿ ಕೆಲಸ ನಿರ್ವಹಿಸುವವರೆಗೆ ಕಾಯಬೇಕಾದ ಸವಾಲುಗಳಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

ಕೌಶಲಯುಕ್ತ ಹೊಸ ಉದ್ಯೋಗಿಗಳು ಕಂಪನಿಯನ್ನು ಸೇರುತ್ತಿರಬೇಕು ಎಂಬುದು ಉದ್ಯೋಗದಾತರ ನಿರೀಕ್ಷೆಯಾಗಿದ್ದರೂ, ಇರುವ ಕೆಲಸಗಾರರನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳುವುದೂ ಅಷ್ಟೇ ಮುಖ್ಯ ಎನ್ನುತ್ತದೆ ಈ ವರದಿ. ಇದು ಸಾಧ್ಯವಾಗಬೇಕಾದರೆ, ಕೆಲಸದ ವಾತಾವರಣವನ್ನು ಇನ್ನಷ್ಟು ಆಕರ್ಷಕವಾಗಿ, ಉದ್ಯೋಗಿ ಸ್ನೇಹಿಯಾಗಿರುವಂತೆ ರೂಪಿಸುವ ತಂತ್ರಗಾರಿಕೆ ಮುಖ್ಯ. ಉದ್ಯೋಗಿಯ ಕೆಲಸದ ಗುಣಮಟ್ಟವನ್ನು ಹೆಚ್ಚಿಸಲು ಕಾರಣವಾಗುವ ಎಲ್ಲ ರೀತಿಯ ಕ್ರಮಗಳನ್ನು ಉದ್ಯೋಗದಾತ ಕಂಪನಿಗಳು ತೆಗೆದುಕೊಳ್ಳಬೇಕಿದೆ. ಇದರಿಂದ ಉದ್ಯೋಗಿಯ ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ ಹಾಗೂ ವೃತ್ತಿಪರ ಬೆಳವಣಿಗೆಗಳು ಸಾಧ್ಯವಾಗುತ್ತವೆ. ಅವರು ಉದ್ಯೋಗವನ್ನು ಬದಲಿಸುವ ಆಲೋಚನೆಯನ್ನು ಮುಂದೂಡುವ ಸಾಧ್ಯತೆಯಿರುತ್ತದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಕೆಲಸಕ್ಕೆ ಸೇರಿ ವರ್ಷ ಕಳೆಯುವ ಮುನ್ನ, ಆ ಉದ್ಯೋಗಿಯ ಜೊತೆ ವೃತ್ತಿಗೆ ಸಂಬಂಧಿಸಿದ ಹಾಗೂ ವೇತನ ಕುರಿತು ಸಮಾಲೋಚನೆ ನಡೆಸುವ ತಂತ್ರಗಾರಿಕೆಯಿಂದ ರಾಜೀನಾಮೆಯನ್ನು ತಪ್ಪಿಸಬಹುದು ಎಂದು ವರದಿ ಅಭಿಪ್ರಾಯಪಟ್ಟಿದೆ. ಸಾಂಪ್ರದಾಯಿಕ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೌಕರರ ವಿಶೇಷ ಕೌಶಲಗಳನ್ನು ಗುರುತಿಸಿ, ಅವರಿಗೆ ಹೊಸ ಜವಾಬ್ದಾರಿಗಳನ್ನು ಹಂಚಿಕೆ ಮಾಡುವುದೂ ಇಂತಹ ಕ್ರಮಗಳಲ್ಲಿ ಒಂದು ಎಂದು ಶಿಫಾರಸು ಮಾಡಲಾಗಿದೆ.

ಸಂಸ್ಥೆಯೊಂದರಲ್ಲಿ ಅತ್ಯುತ್ತಮವಾಗಿ ಕೆಲಸ ಮಾಡುವ ಶೇ 20ರಷ್ಟು ಕೆಲಸಗಾರರು ಆ ಕಂಪನಿಯ ಅರ್ಧದಷ್ಟು ಬೆಳವಣಿಗೆಯ ದರವನ್ನು ನಿರ್ಧರಿಸುತ್ತಾರೆ. ಈ ವರ್ಗದ ಉದ್ಯೋಗಿಗಳು ಕಂಪನಿಯ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಇಂತಹವರನ್ನು ಗುರುತಿಸಿ ಅಗತ್ಯ ಸೌಲಭ್ಯಗಳ ಜತೆ ಉನ್ನತ ಸ್ಥಾನಗಳನ್ನು ನೀಡುವುದು ಅವಶ್ಯಕ ಎಂದು ವರದಿ ಅಭಿಪ್ರಾಯಪಟ್ಟಿದೆ.

ನೇಮಕಾತಿ ಜಟಿಲ:

ತಮ್ಮ ಕಂಪನಿಯ ಸ್ವರೂಪ, ವೇತನ ಹಾಗೂ ಕೆಲಸದ ವಾತಾವರಣಕ್ಕೆ ಹೊಂದಿಕೆಯಾಗುವ ಹೊಸ ಕೆಲಸಗಾರರನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ಕಠಿಣವಾದುದು ಎಂದು ವರದಿಯಲ್ಲಿ ಹೇಳಲಾಗಿದೆ.

ಕೋವಿಡ್ ನಂತರದ ವರ್ಷದಲ್ಲಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸುವವರ ಆದ್ಯತೆ ಹಾಗೂ ನಿರೀಕ್ಷೆಗಳು ಬದಲಾಗಿವೆ. ಹೊಸ ನೌಕರರು ಹೆಚ್ಚು ವೇತನವನ್ನು ಎದುರು ನೋಡುತ್ತಿದ್ದಾರೆ. ಹೀಗಾಗಿ ಹೊಸ ಉದ್ಯೋಗಿಗಳ ವೇತನವನ್ನು ಸರಿದೂಗಿಸಬೇಕಿದೆ. ಬಹುತೇಕ ಸಂದರ್ಭಗಳಲ್ಲಿ ಅಪೇಕ್ಷಿತ ಕೌಶಲದ ಕೆಲಸಗಾರರು ಸಿಗುವುದಿಲ್ಲ. ಕಂಪನಿಯ ಸಂಸ್ಕೃತಿಗೆ ಹೊಂದಾಣಿಕೆಯಾಗುವ ಉದ್ಯೋಗಿಗಳನ್ನೇ ಹುಡುಕಬೇಕಾದ ಸವಾಲೂ ಇರುತ್ತದೆ. ತೀವ್ರ ಪೈಪೋಟಿಯಿಂದ ಕೂಡಿರುವ ಹುದ್ದೆಯನ್ನು ಬಯಸುವ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿರುತ್ತದೆ. ಇವರೆಲ್ಲರ ಅರ್ಜಿಗಳನ್ನು ಪರಿಶೀಲಿಸಿ, ಹುದ್ದೆಗೆ ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಜಟಿಲ ಸವಾಲನ್ನು ಮಾನವ ಸಂಪನ್ಮೂಲ ವಿಭಾಗ (ಎಚ್.ಆರ್) ಎದುರಿಸುತ್ತಿದೆ.

ಆಧಾರ: ದಿ ಗ್ರೇಟ್ ಎಕ್ಸ್ ಟ್ಯಾಲೆಂಟ್ ಟ್ರೆಂಡ್ ವರದಿ–2022

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 142

ದಕ್ಷನ ತಪಸ್ಸಿಗೆ ಒಲಿದ ಆದಿಶಕ್ತಿ

ದೇವಿಯು ದಕ್ಷಬ್ರಹ್ಮನ ಪುತ್ರಿಯಾಗಿ ಹೇಗೆ ಜನಿಸಿದಳು – ಎಂಬುದನ್ನು ಹೇಳು ಎಂದು ನಾರದ ಕೇಳುತ್ತಾನೆ. ಅದಕ್ಕೆ ಬ್ರಹ್ಮ 'ಎಲೈ ನಾರದ! ದಕ್ಷಬ್ರಹ್ಮನು ನನ್ನ ಅಪ್ಪಣೆಯಂತೆ ಶಕ್ತಿದೇವಿಯನ್ನು ತನ್ನ ಮಗಳಾಗಿ ಪಡೆಯುವ ಉದ್ದೇಶದಿಂದ ತಪಸ್ಸು ಪ್ರಾರಂಭಿಸಿದ. ಕ್ಷೀರಸಮುದ್ರದ ದಡದಲ್ಲಿ ಕುಳಿತು ದೇವಮಾನದಿಂದ ಮೂರುಸಾವಿರ ವರ್ಷಗಳವರೆಗೆ ದೃಢವಾದ ನಿಯಮದಿಂದ ಜಿತೇಂದ್ರಿಯನಾಗಿ ತಪಸ್ಸನ್ನಾಚರಿಸಿದ.

ಕೆಲವು ಕಾಲ ಗಾಳಿಯನ್ನೇ ಆಹಾರವಾಗಿ ಸೇವಿಸುತ್ತ, ಕೆಲವು ಕಾಲ ಯಾವ ಆಹಾರವೂ ಇಲ್ಲದೆ, ಕೆಲವು ಕಾಲ ಜಲವನ್ನು, ಕೆಲವು ಕಾಲ ಎಲೆಗಳನ್ನು ಸೇವಿಸುತ್ತಾ, ಜಗದ್ರೂಪಳಾದ ಚಂಡಿಕೆಯನ್ನು ಧ್ಯಾನಿಸುತ್ತಾ ಕಾಲವನ್ನು ಕಳೆದ. ಇದರಿಂದ ದೇವಿಯು ಪ್ರಸನ್ನಳಾಗಿ ಪ್ರತ್ಯಕ್ಷಳಾದಳು. ಜಗದ್ರೂಪಳೂ ಜಗನ್ಮಾತೆಯೂ ಆದ ದೇವಿಯನ್ನು ನೋಡಿ ದಕ್ಷಬ್ರಹ್ಮ ಕೃತಾರ್ಥನಾದೆನೆಂದು ಸಂಭ್ರಮಿಸಿದ. ಸಿಂಹದ ಮೇಲೆ ಕುಳಿತ ದೇವಿ ನೀಲವರ್ಣದ ಶರೀರಕಾಂತಿಯಿಂದ ಬೆಳಗುತ್ತಿದ್ದಳು. ನಾಲ್ಕು ಬಾಹುಗಳಲ್ಲಿ ಒಂದು ಕೈ ವರದಮುದ್ರೆಯನ್ನು, ಮತ್ತೊಂದು ಕೈ ಅಭಯಮುದ್ರೆಯನ್ನು ತೋರಿಸುತ್ತಿದ್ದರೆ, ಉಳಿದೆರಡು ಕೈಗಳು ಕನ್ನೈದಿಲೆ ಮತ್ತು ಖಡ್ಗ ಹಿಡಿದಿದ್ದವು. ಸುಂದರವಾದ ಆಕೆಯ ಮೊಗದಲ್ಲಿ ಕಣ್ಣುಗಳೆರಡು ನಸುಗೆಂಪಾಗಿ ಹೊಳೆಯುತ್ತಿದ್ದವು. ಕೆದರಿದ ಅವಳ ಕೇಶಪಾಶವು ಅಪೂರ್ವಕಾಂತಿಯನ್ನು ಬೀರುತ್ತಿತ್ತು.

ಜಗನ್ಮಾತೆಯನ್ನು ದಕ್ಷಬ್ರಹ್ಮ ಸ್ತುತಿಸಿದ. ಪರಮೇಶ್ವರಿಯು ದಕ್ಷನ ಇಷ್ಟವನ್ನು ತಿಳಿದವಳಾದರೂ ತಿಳಿಯದವಳಂತೆ 'ಎಲೈ ದಕ್ಷನೇ! ನಿನ್ನ ಸದ್ಭಕ್ತಿಯಿಂದ ಸಂತುಷ್ಟಳಾಗಿರುವೆ. ಬೇಕಾದ ವರವನ್ನು ಕೇಳು' ಎಂದಳು.

ಆಗ ದಕ್ಷಬ್ರಹ್ಮ 'ಓ ದೇವಿ! ಜಗತ್ಪ್ರಭುವಾದ ಶಂಕರನು ಬ್ರಹ್ಮನ ಪುತ್ರನಾಗಿ ರುದ್ರನೆಂಬ ಹೆಸರಿನಿಂದ ಜನಿಸಿರುವನು. ಅವನು ಪರಮಾತ್ಮನಾದ ಶಿವನ ಸಂಪೂರ್ಣವಾದ ಅವತಾರ. ಆದರೆ ಇದುವರೆಗೂ ನಿನ್ನ ಅವತಾರವೇ ಆಗಿಲ್ಲ. ಅದಕ್ಕಾಗಿ ನೀನು ಭೂಮಿಯಲ್ಲಿ ಅವತರಿಸಿ ರುದ್ರನನ್ನು ಮೋಹಗೊಳಿಸಬೇಕು. ನಿನ್ನ ಹೊರತು ಬೇರೆ ಯಾವುದೇ ಸ್ತ್ರೀ ರುದ್ರನನ್ನು ಮೋಹಗೊಳಿಸಲಾರರು. ಆದಕಾರಣ ನೀನು ನನ್ನ ಪುತ್ರಿಯಾಗಿ ಜನಿಸಿ, ಮುಂದೆ ಹರನ ಪತ್ನಿಯಾಗಬೇಕು. ರುದ್ರನು ಸಂಸಾರಿಯಾಗದಿದ್ದರೆ ಲೋಕಕಲ್ಯಾಣವಾಗುವುದಿಲ್ಲ. ಇದು ನನ್ನ ಸ್ವಾರ್ಥದ ಕೋರಿಕೆಯಲ್ಲ, ಜಗಕ್ಕೆ ಉಪಕಾರದ ಬೇಡಿಕೆ' ಎಂದು ಪ್ರಾರ್ಥಿಸಿದ.

ಜಗನ್ಮಾತೆಯು ದಕ್ಷಬ್ರಹ್ಮನಿಗೆ ಮನಸ್ಸಿನಲ್ಲಿಯೇ ಶಿವನನ್ನು ಸ್ಮರಿಸಿ ಹೇಳಿದಳು 'ಎಲೈ ದಕ್ಷಬ್ರಹ್ಮನೇ, ಪರಮೇಶ್ವರಿಯಾದ ನಾನು ನಿನ್ನ ಭಕ್ತಿಗೆ ಮೆಚ್ಚಿ, ನಿನ್ನ ಪತ್ನಿಯಲ್ಲಿ ಮಗಳಾಗಿ ಜನಿಸಿ ನಿನ್ನ ಅಧೀನಳಾಗಿರುವೆ. ಯೌವನ ಕಾಲದಲ್ಲಿ ಅಸಾಧ್ಯವಾದಂತಹ ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ ಅವನ ಪತ್ನಿಯಾಗಲು ಪ್ರಯತ್ನಿಸುತ್ತೇನೆ. ಆ ಪರಮೇಶ್ವನು ಯಾವ ವಿಕಾರವೂ ಇಲ್ಲದವನು. ಬ್ರಹ್ಮ, ವಿಷ್ಣು ಸಹಿತ ದೇವತೆಗಳು ಪೂಜಿಸುವ ಶಿವನು ಪೂರ್ಣಪರಬ್ರಹ್ಮಸ್ವರೂಪನು. ಸದಾ ಮಂಗಳಸ್ವರೂಪನಾದ ಅವನಿಗೆ ನಾನು ಚರಣದಾಸಿ. ಪ್ರತಿ ಅವತಾರದಲ್ಲೂ ನಾನೇ ಅವನ ಪ್ರಿಯೆ. ಅನೇಕ ಅವತಾರಗಳನ್ನು ಧರಿಸಿದರೂ ಆ ಶಿವನೇ ನನ್ನ ಸ್ವಾಮಿ. ಪರಮಶಿವನು ಬ್ರಹ್ಮನಿಗೆ ಕೊಟ್ಟ ವರವನ್ನು ಈಡೇರಿಸುವುದಕ್ಕಾಗಿ ಬ್ರಹ್ಮನ ಲಲಾಟದಿಂದ ಜನಿಸಿ ರುದ್ರನಾಗಿ ಅವತಾರ ತಾಳಿದ್ದಾನೆ. ಈಗ ನಾನು ಸಹ ಆ ವರದಂತೆ ಅವತಾರ ಮಾಡುವೆ. ಸ್ವಲ್ಪಕಾಲದಲ್ಲಿಯೇ ಶಿವದೂತಿಯಾದ ನಾನು ನಿನ್ನ ಪುತ್ರಿಯಾಗಿ ಜನಿಸಿ ಶಿವನ ಪತ್ನಿಯಾಗುವೆ. ಆದರೆ ಒಂದು ಮಾತು ನೆನಪಿಟ್ಟುಕೋ, ನಿನ್ನ ಪುತ್ರಿಯಾದ ನನ್ನಲ್ಲಿ ನೀನು ಯಾವಾಗಲಾದರೂ ತಿರಸ್ಕಾರ ಭಾವವನ್ನು ತೋರಿಸಿದರೆ ಆ ಕೂಡಲೇ ಶರೀರವನ್ನು ತ್ಯಜಿಸುವೆನು' ಎಂದು ಜಗನ್ಮಾತೆ ಆದಿಶಕ್ತಿಯು ದಕ್ಷಬ್ರಹ್ಮನನ್ನು ಎಚ್ಚರಿಸುತ್ತಾಳೆ.

ಇದಕ್ಕೆ ದಕ್ಷ ಬ್ರಹ್ಮನು ಒಪ್ಪಿ ಕೃತಜ್ಞತಾಭಾವದಿಂದ ನಮಸ್ಕರಿಸುತ್ತಿರುವಂತೆಯೇ ಪರಮೇಶ್ವರಿಯು ಅಂತರ್ಧಾನಳಾದಳು. ದಕ್ಷಬ್ರಹ್ಮ ತುಂಬಾ ಸಂತೋಷದಿಂದ ತನ್ನ ಆಶ್ರಮಕ್ಕೆ ತೆರಳಿದ. ಮಹಾಶಕ್ತಿದೇವಿಯು ತನ್ನ ಪುತ್ರಿಯಾಗುವಳೆಂದು ನೆನಪಿಸಿಕೊಂಡಾಗಲೆಲ್ಲಾ ತುಂಬಾ ಹರ್ಷಗೊಳ್ಳುತ್ತಿದ್ದ ಎಂಬಲ್ಲಿಗೆ ವೇದವ್ಯಾಸರ ಶಿವಪುರಾಣದ ಎರಡನೇ ಸಂಹಿತೆಯಾದ ರುದ್ರಸಂಹಿತೆಯಲ್ಲಿನ ಸತೀಖಂಡದ ಹನ್ನೆರಡನೆಯ ಅಧ್ಯಾಯವು ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಸ್ತೆಯ ಮೇಲೆ ಹರಡಿರುವ ತ್ರಿವರ್ಣಧ್ವಜದ ಮೇಲೆ ವಾಹನಗಳು ಚಲಿಸುತ್ತಿರುವ ವಿಡಿಯೊ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಕೈಯಲ್ಲಿ ಪಾಕಿಸ್ತಾನದ ಧ್ವಜ ಹಿಡಿದಿರುವ ಹಲವರು ಘೋಷಣೆ ಕೂಗುವ ಚಿತ್ರಣ 3.8 ನಿಮಿಷದ ವಿಡಿಯೊದಲ್ಲಿ ದಾಖಲಾಗಿದೆ. ಇದು ತಮಿಳುನಾಡಿನ ತಾಂಜಾವೂರಿನಲ್ಲಿ ನಡೆದ ಘಟನೆ ಎಂದು ಉಲ್ಲೇಖಿಸಲಾಗಿದೆ.



ಇದು ಪಾಕಿಸ್ತಾನದ ಕರಾಚಿಗೆ ಸಂಬಂಧಿಸಿದ ವಿಡಿಯೊ ಎಂದು ಇಂಡಿಯಾಟುಡೇ ವರದಿ ಮಾಡಿದೆ. ವಾಹನವೊಂದರ ಮೇಲೆ ಬರೆಯಲಾಗಿರುವ ಹುನಾರ್ ಫೌಂಡೇಷನ್ ಹೆಸರು ಪಾಕಿಸ್ತಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಟನೆಗೆ ಸಂಬಂಧಿಸಿದ್ದಾಗಿದೆ. ವಿಡಿಯೊದಲ್ಲಿ ಕಾಣಿಸುವ ರಿಕ್ಷಾಗಳು ತಮಿಳುನಾಡಿನ ರಿಕ್ಷಾಗಳಿಗೆ ಹೋಲಿಕೆಯಾಗುವುದಿಲ್ಲ. ವಿಡಿಯೊದಲ್ಲಿ ಕಾಣಿಸುವ ಬೀದಿಬದಿಯ ಅಂಗಡಿಗಳ ಕೆಲವು ಹೆಸರುಗಳನ್ನು ಪರಿಶೀಲಿಸಿದಾಗ, ಅವು ಕರಾಚಿಯ ತಾರಿಕ್ ರಸ್ತೆಯಲ್ಲಿರುವ ಅಂಗಡಿಗಳು ಎಂಬುದು ದೃಢಪಟ್ಟಿದೆ ಎಂದು ಇಂಡಿಯಾಟುಡೇ ಹೇಳಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮನಸ್ಸಿಗೆ ಶಿಕ್ಷಣ

ಶೀತವಾತಗಳಾಗೆ ದೇಹಕೌಷಧ ಪಥ್ಯ |
ಚೇತ ಕೆರಳಿರೆ ಕಣ್ಣು ಕಿವಿಗಳಾತುರದಿಂ ||
ಪ್ರೀತಿಯಿಂದದನೊಲಿಸಿ ನೀತೆಯಲಿ ಶಿಕ್ಷಿಸುವು - |
ದಾತುಮದ ನೆಮ್ಮದಿಗೆ – ಮಂಕುತಿಮ್ಮ || 646 ||

ಪದ-ಅರ್ಥ: ಶೀತವಾತಗಳಾಗೆ = ಶೀತ(ಚಳಿ) + ವಾತಗಳು(ವಾಯು) + ಆಗೆ, ದೇಹಕೌಷಧ = ದೇಹಕೆ + ಔಷಧ, ಚೇತ = ಮನಸ್ಸು, ಚೇತನ, ಕೆರಳಿಕೆ = ಕೆರಳಿದರೆ, ಕಿವಿಗಳಾತುರದಿಂ = ಕಿವಿಗಳು + ಆತುರದಿಂ(ಆತುರದಿಂದ), ಪ್ರೀತಿಯಿಂದದನೊಲಿಸಿ = ಪ್ರೀತಿಯಿಂದ + ಅದನು + ಒಲಿಸಿ, ನೀತೆಯಲಿ = ನೀತಿಯಿಂದ, ಶಿಕ್ಷಿಸುವುದಾತುಮದ ಶಿಕ್ಷಿಸುವುದು + ಆತುಮದ(ಆತ್ಮದ).

ವಾಚ್ಯಾರ್ಥ: ದೇಹಕ್ಕೆ ಶೀತ, ವಾತಗಳಾದರೆ ಅದಕ್ಕೆ ಔಷಧಿ, ಪಥ್ಯ ಬೇಕು. ಆದರೆ ಕಣ್ಣು, ಕಿವಿಗಳ ಆತುರದಿಂದ ಚೇತನ ಕೆರಳಿದರೆ, ಪ್ರೀತಿಯಿಂದ ಅವುಗಳನ್ನು ಒಲಿಸಿ, ನೀತಿಯಿಂದ ಶಿಕ್ಷಿಸುವುದು ಆತ್ಮಕ್ಕೆ ನೆಮ್ಮದಿಯನ್ನು ನೀಡುತ್ತದೆ.

ವಿವರಣೆ: ದೇಹಕ್ಕೆ ಶೀತ, ವಾತ ಅಥವಾ ಯಾವುದಾದರೂ ಸಮಸ್ಯೆಯಾದರೆ ಅದಕ್ಕೆ ಔಷಧಿಗಳುಂಟು. ನಾವು ವೈದ್ಯರ ಬಳಿ ಹೋಗುತ್ತೇವೆ. ಅವರು ಕೆಲವು ಪರೀಕ್ಷೆಗಳನ್ನು ಮಾಡುತ್ತಾರೆ. ಅವುಗಳನ್ನು Diagnosis ಅಥವಾ ರೋಗಲಕ್ಷಣ ಪರೀಕ್ಷೆ ಎನ್ನುತ್ತೇವೆ. ಆ ಪರೀಕ್ಷೆಗಳ ಫಲಿತಾಂಶಗಳಿಂದ ದೇಹಕ್ಕೆ ಯಾವ ತೊಂದರೆ ಎಂಬುದನ್ನು ತಿಳಿದು, ಅದಕ್ಕೆ ಸರಿಯಾದ ಔಷಧಿಯನ್ನು ಕೊಡುತ್ತಾರೆ. ಅವುಗಳಿಂದ ರೋಗದಿಂದ ದೇಹ ಮುಕ್ತವಾಗುತ್ತದೆ. ನಮಗೆ ಇನ್ನೊಂದು ತರಹದ ರೋಗವೂ ಅಮರಿಕೊಳ್ಳುತ್ತದೆ. ಆದರೆ ಅವು ನಮ್ಮೊಳಗೆ ಸೇರಿಕೊಂಡಿದ್ದು ಇಂದ್ರಿಯಗಳ ಮೂಲಕ. ಅನಾರೋಗ್ಯವಾಗಿರುವುದು ಮನಸ್ಸಿಗೆ, ಕಣ್ಣು ಏನೋ ನೋಡುತ್ತದೆ, ಮನಸ್ಸು ಅದರಲ್ಲಿ ತೊಡಗಿಸಿಕೊಳ್ಳುತ್ತದೆ. ಸೀತೆ ಮಾಯಾಮೃಗವನ್ನು ಕಂಡಳು, ಬಯಕೆ ಮೂಡಿತು. ರಾವಣ ಸೀತೆಯನ್ನು ನೋಡಿದ, ಮನಸ್ಸು ಸೆಳೆಯಿತು, ಕೊನೆಗೆ ಅವನ ಪ್ರಾಣಹರಣವಾಯಿತು. ಶಂತನು ಮಹಾರಾಜ ಮತ್ಸ್ಯಗಂಧಿಯನ್ನು ಕಂಡ, ಮಹಾಭಾರತದ ದಿಶೆಯೇ ಬದಲಾಯಿತು. ಮಾರ್ಕ ಆ್ಯಂಟನಿ ಕ್ಲಿಯೋಪಾತ್ರಾಳನ್ನು ಕಂಡಗಳಿಗೆಯೇ ರೋಮನ್ ಇತಿಹಾಸ ಪುಟ ತಿರುಗಿಸಿತು. ಇವುಗಳು ಕಣ್ಣು ಮಾಡಿದ ಅನಾಹುತಗಳು. ಅಂತೆಯೇ ಆತುರದ ಕಿವಿ ಕೂಡ ಮನಸ್ಸನ್ನು ಕೆರಳಿಸುತ್ತದೆ. ರಾಮನನ್ನು ಅಷ್ಟು ಆತ್ಯಂತಿಕವಾಗಿ ಪ್ರೀತಿ ಮಾಡುತ್ತಿದ್ದ ಕೈಕೇಯಿ ಮನಮುರಿದುಕೊಂಡದ್ದು ಮಂಥರೆಗೆ ಕಿವಿಗೊಟ್ಟದ್ದರಿಂದ. ಅಗಸನ ಮಾತಿಗೆ ಕಿವಿಗೊಟ್ಟದ್ದು ಜಾನಕಿನ ವನಯಾತ್ರೆಗೆ ನೆಪವಾಯಿತು. ಫ್ರಾಕ್ಲಿನ್ ರೂಸವೆಲ್ಟ್ ಹೇಳುತ್ತಾನೆ. 'Men are prisoners of their own minds' ಮನುಷ್ಯ ತನ್ನದೇ ಮನಸ್ಸಿನ ಸೆರೆಯಾಳು. ಈ ಮನಸ್ಸನ್ನು ಒಲಿಸುವುದು ಒಂದು ಸಾಹಸ. ಅದನ್ನು ಎಷ್ಟು ಒತ್ತಿ ನಿಗ್ರಹಿಸಿ ಹೋಗುತ್ತೇವೋ ಅಷ್ಟೇ ವೇಗದಲ್ಲಿ ಪುಟಿದೆದ್ದು ನಿಲ್ಲುತ್ತದೆ. ಯಾವುದನ್ನು ಮರೆಯಬೇಕೆಂದು ಪ್ರಯತ್ನ ಮಾಡುತ್ತೀರೋ ಅದೇ ಧುತ್ತೆಂದು ಬಂದು ಕಾಡುತ್ತದೆ. ರಸ್ತೆಯ ಮಧ್ಯದಲ್ಲಿ ಹರಿದುಹೋದ ಚೀಲದಿಂದ ಸುರಿದ ಸಾಸುವೆಗಳನ್ನು, ಮತ್ತೆ ತಂದು ಕೂಡಿಸುವ ಸಾಹಸ ಮನಸ್ಸಿನ ಹಿಡಿತ. ಅದಕ್ಕೇ ಒಂದು ಸುಭಾಷಿತ 'ಜಿತಂ ಜಗತ್ತೇನ ಮನೋ ಹಿ ಯೇನ' ಎಂದರೆ 'ಮನಸ್ಸನ್ನು ಗೆದ್ದವನು ಜಗತ್ತನ್ನು ಗೆಲ್ಲುತ್ತಾನೆ' ಎನ್ನುತ್ತದೆ.

ಇಂಥ ಮನಸ್ಸನ್ನು ಒಂದು ಹದಕ್ಕೆ ತರುವ ವಿಧಾನವನ್ನು ಕಗ್ಗ ಹೇಳುತ್ತದೆ. ಮನಸ್ಸಿಗೆ ಪೆಟ್ಟು, ಒತ್ತಡ ಬೇಡ. ಅದನ್ನು ಪ್ರೀತಿಯಿಂದ ನೋಡಿ, ಮೃದುವಾಗಿ ತಟ್ಟಿ ಒಲಿಸಿಕೊಳ್ಳಬೇಕು. ಸತ್ಕರ್ಮಗಳಲ್ಲಿ ಅದನ್ನು ತೊಡಗಿಸಬೇಕು. ನೀತಿಯ ಮಾತುಗಳಿಂದ ಅದಕ್ಕೆ ಬೋಧನೆಯಾಗಬೇಕು. ಅದೇ ಮನಸ್ಸಿಗೆ ಶಿಕ್ಷೆ, ಶಿಕ್ಷಣ. ಅದರಿಂದ ಮನಸ್ಸಿಗೆ, ಜೀವಕ್ಕೆ ನೆಮ್ಮದಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜೂನ್ 9, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ನವಮಿ ಗಂ. 08-22 ನಕ್ಷತ್ರ: ಹಸ್ತ ಗಂ. 28-26 ಯೋಗ: ವ್ಯತೀಪಾತ ಗಂ. 25-49, ಕರಣ: ಕೌಲವ ಗಂ. 08-22, ವೃಷಭ ಮಾಸದ 25 ನೇ ದಿನ.
ರಾಹುಕಾಲ : ಮಧ್ಯಾಹ್ನ 01:30 – 03:00
ಸೂರ್ಯೋದಯ : 06-07 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 09 ಜುಲ್ಹಾಯದ್ ದಿನ ವಿಶೇಷ : ಗಂಗಾ ದಶಹರ
ಅದೃಷ್ಟ ಸಂಖ್ಯೆ : 3, 8

ಮೇಷ: ಆತ್ಮಾಭಿಮಾನವನ್ನು ಸಂರಕ್ಷಿಸಿಕೊಳ್ಳಿ. ಆಧ್ಯಾತ್ಮ ಚಿಂತನೆಯಿಂದ ಜೀವನ ಧೈರ್ಯ ವೃದ್ಧಿ. ವಿವಾದ ಗೊಡವೆಗಳಿಂದ ದೂರ ಉಳಿಯಿರಿ. ವೈದ್ಯಕೀಯ ಕ್ಷೇತ್ರದ ಉನ್ನತ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು.

ವೃಷಭ: ಜಾಹೀರಾತು ಏಜೆನ್ಸಿಯವರಿಗೆ ಬಹಳಷ್ಟು ಏಳಿಗೆ ಹಾಗೂ ಪ್ರಚಾರದ ವಿಚಾರದಲ್ಲಿ ಕೆಲಸ ಮಾಡುವ ಅವಕಾಶ ದೊರೆಯಲಿದೆ. ಆರ್ಥಿಕವಾಗಿಯೂ ಬಹಳ ಉಪಯುಕ್ತ. ಮನೆ ದೇವರಿಗೆ ಹರಕೆ ಸಲ್ಲಿಸುವುದು ನೆನಪಿರಲಿ.

ಮಿಥುನ: ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದು ನಿಮಗೆ ತಿಳಿಯಲಿದೆ. ನೀವು ಪ್ರಗತಿಯ ಹಾದಿಯನ್ನು ಸ್ಪರ್ಶಿಸಲಿದ್ದೀರಿ. ನಿಮ್ಮ ಪ್ರತಿಭೆ ಸಾಮರ್ಥ್ಯ ಈ ದಿನ ಬೆಳಕಿಗೆ ಬರಲಿದೆ. ಮನೆಯ ವಿಸ್ತರಣೆಗಾಗಿ ಖರ್ಚು ಸಂಭವಿಸಬಹುದು.

ಕರ್ಕಾಟಕ: ವೃತ್ತಿಯಲ್ಲಿ ಬದಲಾವಣೆ ಮಾಡುವ ಬಗ್ಗೆ ಹೆಂಡತಿಯೊಡನೆ ಮತ್ತು ಸ್ನೇಹಿತರೊಡನೆ ಚರ್ಚಿಸಿ ತೀರ್ಮಾನಿಸುವುದು ಒಳ್ಳೆಯದು. ಕೆಲಸ ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಇಟ್ಟಂತಹ ಹರಕೆಯನ್ನು ಮರೆಯದಿರಿ.

ಸಿಂಹ: ಹೊಸ ಸ್ಫೂರ್ತಿಯಿಂದ ಕಾರ್ಯ ನಿರ್ವಹಿಸಿ. ನಿಮ್ಮ ಏಕಾಗ್ರತೆಗೆ ಭಂಗಬಾರದು. ವಿದ್ಯಮಾನಗಳನ್ನು ಗಮನಿಸಿ ವೃತ್ತಿ ಪರ ಸಮಾಲೋಚನೆ ನಡೆಸಿ. ಕೊಟ್ಟ ಮಾತಿನಂತೆ ಕೆಲಸ ನೆರವೇರಿಸುವುದರಿಂದ ಹೆಸರು ಗಳಿಸಬಹುದು.

ಕನ್ಯಾ: ಧನಾಗಮನಕ್ಕೆ ಹಲವು ದಾರಿಗಳು ಕಂಡರೂ, ಸರಿಯಾದ ದಾರಿಯ ಆಯ್ಕೆ ನಿಮ್ಮ ವಿವೇಚನೆಗೆ ಬಿಟ್ಟಂತಹ ವಿಚಾರ. ಧಾರ್ಮಿಕ ವ್ಯಕ್ತಿಗಳಿಂದ ನಿಮಗೆ ಅನುಕೂಲವಾಗುತ್ತದೆ. ಭವಿಷ್ಯದ ಜೀವನದ ಯೋಚನೆಗಳು ಬರಲಿದೆ.

ತುಲಾ: ಅಂದುಕೊಂಡಿರುವ ಕೆಲಸಗಳು ಉತ್ತಮವಾಗಿ ನೆರವೇರಿರುವುದರಿಂದ ನೆಮ್ಮದಿ. ಕೌಟುಂಬಿಕ ಜವಾಬ್ದಾರಿಗಳನ್ನು ದಿನದಿಂದ ದಿನಕ್ಕೆ ಕಡಿಮೆ ಮಾಡುವ ಬಗ್ಗೆ ಗಮನಹರಿಸಿ. ವಿಷ್ಣು ಸಹಸ್ರನಾಮ ಪಠಣದಿಂದ ಶುಭವಾಗುವುದು.

ವೃಶ್ಚಿಕ: ಇನ್ನೊಬ್ಬರು ಮಾಡುತ್ತಿರುವ ಕೆಲಸ ಶುಭ ಅಥವಾ ಅಶುಭವಾದರೂ, ಅದರ ಟೀಕೆ-ಟಿಪ್ಪಣಿ ಸರಿಯಲ್ಲ. ಯಂತ್ರೋಪಕರಣಗಳ ಮಾರಾಟದಿಂದ ಲಾಭ. ಆತ್ಮಾಭಿಮಾನಕ್ಕೆ ಚ್ಯುತಿಯಾಗದ ರೀತಿಯಲ್ಲಿ ನಡೆದುಕೊಳ್ಳಿರಿ.

ಧನು: ದೇವತಾನುಗ್ರಹದಿಂದ ಸಕಲ ಅಭೀಷ್ಟವು ಸಿದ್ಧಿಯಾಗಿ ಸಂತೃಪ್ತಿಯಾಗುವುದು. ಮಂಗಳ ಕಾರ್ಯಕ್ಕೆ ಭಾಗಿಯಾಗಲು ದೂರ ಪ್ರಯಾಣ. ಚಲನಚಿತ್ರರಂಗದವರಿಗೆ ಖ್ಯಾತಿ, ಹೊಸ ಹೊಸ ಗೌರವಾನ್ವಿತ ಅವಕಾಶ ದೊರೆಯುವುದು.

ಮಕರ: ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರ. ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಕೂಡ ಆತಂಕ ಬೇಡ. ಆಹಾರದಲ್ಲಿ ಎಣ್ಣೆಯ ಪದಾರ್ಥ ಮತ್ತು ಕಾರದ ಪದಾರ್ಥಗಳ ಮಿತಬಳಕೆ ಒಳ್ಳೆಯದು.

ಕುಂಭ: ಹೊಸ ಆಕಾಂಕ್ಷೆ, ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಂಡು ಮುಂದುವರಿಯುವಿರಿ. ಮಂದಗತಿಯಲ್ಲಿ ಸಾಗುತ್ತಿರುವ ಕೆಲವು ಕೆಲಸಗಳನ್ನು ಶೀಘ್ರವಾಗಿ ಪೂರೈಸಲು ಸಿಬ್ಬಂದಿಗೆ ಒತ್ತಡ ಹೇರಬೇಕಾಗುವುದು.

ಮೀನ: ನಿಮ್ಮ ಕಷ್ಟದ ದಿನಗಳಲ್ಲಿ ಸಹಕರಿಸಿದವರೊಂದಿಗೆ ನಮ್ರತೆಯಿಂದ, ವಿನಯದಿಂದ ಇರುವುದನ್ನು ಮರೆಯಬೇಡಿ. ವೃತ್ತಿಯಲ್ಲಿ ಶತ್ರುಬಾಧೆ ಸಾಧ್ಯತೆ. ನಿಮ್ಮ ದೈಹಿಕ ಮತ್ತು ಧಾರ್ಮಿಕ ಪ್ರಯತ್ನದಿಂದ ಸುಧಾರಿಸಬಹುದು.

ಪದಬಂಧ 4983

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸ್ಲೇಟಿನ ಮೇಲೆ ಬರೆಯುವ ಸಾಧನ (3)
3.ಬಸವಿ ನೋಡಿದ ಜೈನ ದೇವಾಲಯ (3)
5.ವಲಯಕ್ಕೆ ಬಂದಾಗಿನಂದಲೂ ಇಷ್ಟೇ ಹುರುಪು! (5)
7.ವರನಿಗೆ ಕೇಳಿದ ಧ್ವನಿ! (2)
9.ಪ್ರತೀ ವಾರವೂ ನೋಡುವ ನದಿಯ ದಡ (2)
10.ಪಿನಾಕದ ಬಳಿಯಿರುವ ಕೋಗಿಲೆ (2)
12.ನಗರದಲ್ಲಿರುವ ಮನುಷ್ಯ (2)
14.ಅಡಿಪಾಯದ ಮಾದರಿಯಿದು (5)
16.ಹರನಿಂದ ಸಿಕ್ಕಿರುವ ಆಶೀರ್ವಾದ (3)
17.ನಯವಾಗಿ ಹೊಳೆಯುವ ಕಣ್ಣು (3)

ಮೇಲಿಂದ ಕೆಳಕ್ಕೆ
1.ಬರದಲ್ಲಿ ತೋರುತ್ತಿರುವ ಒಣ ಜಂಬ (4)
2.ಹಿತ್ತಿಲಲ್ಲಿರುವ ತೆಳುವಾದ ಸೀರೆ (3)
3.ಬಯಲಲ್ಲಿರುವಾಗ ಮೂಡಿದ ಆಸೆ (3)
4.ಸೂರ್ಯನ ಇನ್ನೊಂದು ಹೆಸರು (4)
6.ಲಕ್ಷಾಧಿಪತಿಯತ್ತ ನೆಟ್ಟಿರುವ ಗುರಿ (2)
8.ತರ್ಕ ಮಾಡುತ್ತಿರುವ ವ್ಯಾಪಾರಿ (3)
9.ಮಾನವಂತನು ಕೈಗೊಂಡ ನಿಶ್ಚಯ (3)
10.ತಂದೆಯ ತಂದೆ (4)
11.ಭವಿಷ್ಯ ಕೇಳುತ್ತಿರುವವ ಸಂಸಾರ ಬಂಧನಕ್ಕೆ ಒಳಗಾದವನು (2)
13.ಬಾಳೆ ಹಣ್ಣಿನಿಂದ ಮಾಡಿರುವ ಖಾದ್ಯ (4)
14.ಅಡಿಕೆ ಹಾಳೆಯಿಂದ ಮಾಡಿರುವ ತಟ್ಟೆ (3)
15.ಮಾನವಂತನಿಗೆ ಮಾಡುತ್ತಿರುವ ಆದರ (3)



4982ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಕಿತಾಪತಿ 5.ಜಾಯಮಾನ
6.ಕುದುಗೋಲು 8.ಮಡಿವಾಳ
12.ವನಸುಮ 14.ಅಭಿಮಾನ
15.ಅನುಕಂಪ 16.ತರಗತಿ

ಮೇಲಿಂದ ಕೆಳಕ್ಕೆ:
1.ಅಜಾತಶತ್ರು 2.ಸಮಾಗಮ
3.ಕಿರುಕುಳ 4.ತಿಕ್ಕಲು
7.ಗೋರಿ 9.ವಾಮನ
10.ಉಷ್ಣಮಾಪಕ 11.ನಾಭಿ
12.ವನಸ್ಪತಿ 13.ಮರುನುಡಿ
14.ಅನೃತ

ಸುಡೊಕು 5369

	2			5		8	4	
8			3		9			
	4			1				7
	3	2				7		6
				7			9	
7	9							5
3	1		9				7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5368 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಷೇರುಪೇಟೆ ವಹಿವಾಟು 215



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,416
ಇಂದಿನ ಅಂತ್ಯ	16,356
▼	60
ದಿನದ ಕನಿಷ್ಠ	16,293

ವಿನಿಮಯ ದರ

$ ಡಾಲರ್	77.68
£ ಪೌಂಡ್	97.63
€ ಯುರೊ	83.01
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹505
12 ಮೊಟ್ಟೆಗೆ	₹66

ಮೈಸೂರು

100 ಮೊಟ್ಟೆಗೆ	₹507

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1615)
ಸೋಯಾ (ರಿಫೈನ್ಡ್)	₹1535 (1525)
ಸೂರ್ಯಕಾಂತಿ (ರಿಫೈನ್ಡ್)	₹1785 (1775)
ಪಾಮೋಲಿನ್	₹1490 (1485)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹400-635
ದ್ವಿತಳಿ (ಬಿ.ವಿ)	₹550-806

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹173
ಆರ್‌ಎಸ್‌ಎಸ್-5	₹165.50
ಗುಡ್ ಲಾಟ್	₹158.50

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹800-1000
ಸಣ್ಣ	₹400-800

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು | Log on to : https://homages.deccanherald.com or Scan QR code to access booking form

ಪ್ರಥಮ ವಾರ್ಷಿಕ ಪುಣ್ಯಸ್ಮರಣೆ

ಕೆ.ಎಸ್. ಜಗದೀಶ್ ರೆಡ್ಡಿ

ಕಸವನಹಳ್ಳಿ

"ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರುವ"

ಇಂತಿ ದುಃಖತಪ್ತರು:

ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗದವರು.

ಚಿರಸ್ಮರಣೆ



ದಿ|| ಕೆ. ಹಿರಣ್ಯಗೌಡರು

ಗಾಂಡ್ಲಹಳ್ಳಿ, ಶ್ರೀನಿವಾಸಪುರ ತಾ|| ಕೋಲಾರ ಜಿಲ್ಲೆ.

ಇಂದಿಗೆ ನೀವು ನಮ್ಮನ್ನಗಲಿ 15 ವರ್ಷಗಳಾದವು ನಿಮ್ಮ ಆಶೀರ್ವಾದ ಸದಾ ನಮ್ಮ ಮೇಲಿರಲಿ ಎಂದು ಆಶಿಸುವ, ತಮ್ಮ ದುಃಖತಪ್ತ ಪತ್ನಿ ಚೌಡಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು.

LOOKING FOR JOB OPPORTUNITY

Refer Classifieds on Wednesday

ಶ್ರದ್ಧಾಂಜಲಿ

ಶ್ರೀಮತಿ ವೆಂಕಟಲಕ್ಷ್ಮಮ್ಮನವರು (ಶ್ರೀಮಾನ್ ಎಲ್.ಕೃಷ್ಣಪ್ಪನವರ ಧರ್ಮಪತ್ನಿ) ಇವರು 8.6.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು 9.6.2022 ರಂದು 03:05ಕ್ಕೆ ರಾಂಪುರ ಗ್ರಾಮದಲ್ಲಿ ನೆರವೇರಿಸಲಾಗುವುದು.

ಇಂತಿ : ಕುಟುಂಬವರ್ಗದವರು

ಮೊಬೈಲ್: 9008857766 | 9741794206

ರಷ್ಯಾ–ಉಕ್ರೇನ್ ಸಂಘರ್ಷದ ಪರಿಣಾಮ: ಆರ್‌ಬಿಐ ಅಂದಾಜು

ಚಿಲ್ಲರೆ ಹಣದುಬ್ಬರ ಶೇ 6.7ಕ್ಕೆ

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪರಿಷ್ಕರಿಸಿದೆ. ಹಣದುಬ್ಬರ ದರವು ಶೇಕಡ 6.7ಕ್ಕೆ ಏರಲಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಏಪ್ರಿಲ್‌ನಲ್ಲಿ ನಡೆದ ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯು, ಚಿಲ್ಲರೆ ಹಣದುಬ್ಬರವು ಶೇ 5.7ರಷ್ಟು ಆಗುವ ಅಂದಾಜು ಮಾಡಲಾಗಿತ್ತು.

'ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಹಣದುಬ್ಬರವು ಜಾಗತಿಕವಾಗಿ ವ್ಯಾಪಿಸಿದ್ದು, ಇದರಿಂದಾಗಿ ಹೊಸ ಸವಾಲುಗಳು ಎದುರಾಗುತ್ತಿವೆ. ಹೀಗಾಗಿ ಹಣದುಬ್ಬರದ ಅಂದಾಜನ್ನು ಶೇ 6.7ಕ್ಕೆ ಹೆಚ್ಚಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಚಿಲ್ಲರೆ ಹಣದುಬ್ಬರ ದರವು ಶೇ 6ನ್ನು ಮೀರದೇ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿ ಆರ್‌ಬಿಐ ಮೇಲಿದೆ. ಆದರೆ, ಕಳೆದ ನಾಲ್ಕು ತಿಂಗಳಿನಿಂದ ಅದು ಶೇ 6ಕ್ಕಿಂತ ಹೆಚ್ಚಿಗೆ ಇದೆ. ಏಪ್ರಿಲ್‌ನಲ್ಲಿ ಶೇ 7.8ಕ್ಕೆ ಏರಿಕೆ ಆಗಿದೆ.

'ರಷ್ಯಾ–ಉಕ್ರೇನ್ ಸಂಘರ್ಷವು ಹೊಸ ಸವಾಲುಗಳನ್ನು ಮುಂದಿಟ್ಟಿದೆ. ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಇನ್ನಷ್ಟು ಹೆಚ್ಚಾಗುವಂತೆ ಮಾಡಿದೆ. ಹೀಗಾಗಿ ಜಾಗತಿಕ ಮಟ್ಟದಲ್ಲಿ ಆಹಾರ, ಇಂಧನ ಮತ್ತು ಸರಕುಗಳ ಬೆಲೆ ಹೆಚ್ಚಾಗುವಂತೆ ಆಗಿದೆ. 2022ರಲ್ಲಿ ಮುಂಗಾರು ವಾಡಿಕೆಯಂತೆ ಇರುವ ಹಾಗೂ ಭಾರತವು ಖರೀದಿಸುವ ಕಚ್ಚಾ ತೈಲದ ಸರಾಸರಿ ಬೆಲೆಯು ಬ್ಯಾರಲ್‌ಗೆ 105 ಡಾಲರ್ ಇರುವ ಅಂದಾಜನ್ನು ಇಟ್ಟುಕೊಂಡು ಚಿಲ್ಲರೆ ಹಣದುಬ್ಬರುವ ಶೇ 6.7ರಷ್ಟು ಇರುವ ಅಂದಾಜು ಮಾಡಲಾಗಿದೆ' ಎಂದು ಗವರ್ನರ್ ಹೇಳಿದ್ದಾರೆ.

ಸದ್ಯದ ಹಣದುಬ್ಬರದ ಪರಿಸ್ಥಿತಿಯ ಅರಿವು ಕೇಂದ್ರ ಸರ್ಕಾರಕ್ಕೆ ಇದೆ. ಬೆಲೆ ಏರಿಕೆಯನ್ನು ನಿಯಂತ್ರಿಸುವ ಸಲುವಾಗಿ ಪೂರೈಕೆ ವ್ಯವಸ್ಥೆಯನ್ನು ಸುಧಾರಿಸಲು ಇನ್ನಷ್ಟು ಕ್ರಮಗಳನ್ನು ತೆಗೆದುಕೊಳ್ಳುವುದು ಸರ್ಕಾರಕ್ಕೆ ಬಿಟ್ಟಿದ್ದು ಎಂದು ದಾಸ್ ಹೇಳಿದ್ದಾರೆ.

ಸವಾಲುಗಳು

- ಗರಿಷ್ಠ ಮಟ್ಟದಲ್ಲಿ ಸರಕುಗಳ ದರ
- ಹಲವು ರಾಜ್ಯಗಳಿಂದ ವಿದ್ಯುತ್ ದರ ಪರಿಷ್ಕರಣೆ
- ಪೂರೈಕೆ ವ್ಯವಸ್ಥೆಯಲ್ಲಿ ಅಡಚಣೆಗಳು
- ಕೋಳಿ ಮತ್ತು ಪಶು ಆಹಾರ ದುಬಾರಿ



ರೆಪೊ ದರ ಏರಿಕೆಯಿಂದ ಠೇವಣಿಗಳ ಮೇಲಿನ ಬಡ್ಡಿ ಹೆಚ್ಚಳದ ನಿರೀಕ್ಷೆ

ಸಣ್ಣ ಹೂಡಿಕೆದಾರರಿಗೆ ಉತ್ತಮ ಅವಕಾಶ

● ವಿಜಯ್ ಜೋಷಿ

ಬೆಂಗಳೂರು: ಐದು ವಾರಗಳಲ್ಲಿ ಎರಡನೆಯ ಬಾರಿಗೆ ಆರ್‌ಬಿಐ ರೆಪೊ ದರ ಜಾಸ್ತಿ ಮಾಡಿದೆ. ಇದರ ಪರಿಣಾಮವಾಗಿ ಬ್ಯಾಂಕ್ ನಿಶ್ಚಿತ ಠೇವಣಿಗಳ (ಎಫ್.ಡಿ.) ಬಡ್ಡಿ ದರ ಜಾಸ್ತಿಯಾಗಬಹುದು ಎಂಬ ನಿರೀಕ್ಷೆ ಮನೆ ಮಾಡಿದೆ.

ಇದರ ಜೊತೆಯಲ್ಲೇ, ಈಗಿನ ಸಂದರ್ಭದಲ್ಲಿ ಸಣ್ಣ ಹೂಡಿಕೆದಾರರಿಗೆ ಹೆಚ್ಚಿನ ಲಾಭ ಪಡೆಯಲು ಇತರ ಆಯ್ಕೆಗಳೂ ಇವೆ ಎಂದು ವೈಯಕ್ತಿಕ ಹಣಕಾಸು ತಜ್ಞರು ಹೇಳಿದ್ದಾರೆ.

'ಬಂಡವಾಳ ಮಾರುಕಟ್ಟೆಗಳು ಈಗಿನ ರೆಪೊ ದರ ಹೆಚ್ಚಳವನ್ನು ನಿರೀಕ್ಷಿಸಿದ್ದವು. 10 ವರ್ಷಗಳ ಅವಧಿಯ ಸರ್ಕಾರಿ ಸಾಲಪತ್ರವು ಈಗ ಶೇಕಡ 7.48ರಷ್ಟು ಲಾಭಾಂಶ ಕೊಡುತ್ತಿದೆ. ಸಣ್ಣ ಹೂಡಿಕೆದಾರರಿಗೆ ಉಳಿತಾಯದ ಹಣ ತೊಡಗಿಸಲು ಇದು ಒಂದು ಒಳ್ಳೆಯ ಅವಕಾಶ' ಎಂದು ಪ್ರೈಮ್ ಇನ್ವೆಸ್ಟರ್ ಡಾಟ್ ಇನ್ ಸಂಸ್ಥೆಯ ಸಹಸಂಸ್ಥಾಪಕಿ ವಿದ್ಯಾ ಬಾಲಾ 'ಪ್ರಜಾವಾಣಿ'ಗೆ ತಿಳಿಸಿದರು.

ಕೇಂದ್ರ ಸರ್ಕಾರದ ಸಾಲಪತ್ರಗಳು ಮಾತ್ರವೇ ಅಲ್ಲದೆ, ರಾಜ್ಯ ಸರ್ಕಾರಗಳು ಹೊರಡಿಸುವ 'ರಾಜ್ಯ ಅಭಿವೃದ್ಧಿ ಸಾಲಪತ್ರ'ಗಳಲ್ಲಿ ಕೂಡ ಹಣ ತೊಡಗಿಸುವುದು ಈಗ ಆಕರ್ಷಕ ಎಂದು ಅವರು ತಿಳಿಸಿದರು.

ಸರ್ಕಾರಿ ಸಾಲಪತ್ರಗಳಲ್ಲಿ ಸಣ್ಣ ಹೂಡಿಕೆದಾರರು ನೇರವಾಗಿ ಹಣ ತೊಡಗಿಸುವುದು ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಆರ್‌ಬಿಐ, 'ರಿಟೇಲ್ ಡೈರೆಕ್ಟ್' ಯೋಜನೆಯನ್ನು ಈಗಾಗಲೇ ರೂಪಿಸಿದೆ. ಅದರ ಮೂಲಕ ಸಾಲಪತ್ರಗಳಲ್ಲಿ ಹೂಡಿಕೆ ಮಾಡಲು ಅವಕಾಶ ಇದೆ.

ಷೇರು ಮಾರುಕಟ್ಟೆಯಲ್ಲಿ ಇನ್ನೂ ಇರುವ ಅಸ್ಥಿರತೆ, ವಿದೇಶಿ ಬಂಡವಾಳದ ಹೊರಹರಿವು ನಿಂತಿಲ್ಲದಿರುವುದನ್ನು ಪರಿಗಣಿಸಿ, ನೇರವಾಗಿ ಷೇರುಗಳಲ್ಲಿ ಹಣ ತೊಡಗಿಸುವವರು ಬಹಳ ಎಚ್ಚರಿಕೆಯಿಂದ ಇರಬೇಕು ಎಂದು ಅವರು ಕಿವಿಮಾತು ಹೇಳಿದರು.

ಸಣ್ಣ ಹೂಡಿಕೆದಾರರು ಸಾಲಪತ್ರ ಆಧಾರಿತ ಅಲ್ಟ್ರಾ ಶಾರ್ಟ್ ಡ್ಯುರೇಷನ್ ಮ್ಯೂಚುವಲ್ ಫಂಡ್‌ಗಳಲ್ಲಿಯೂ ಹಣ ತೊಡಗಿಸಬಹುದು. ಮೂರರಿಂದ ಐದು ವರ್ಷಗಳ ಗುರಿಯನ್ನು ಇರಿಸಿಕೊಂಡು ಇದರಲ್ಲಿ ಹಣ ತೊಡಗಿಸಬೇಕು ಎಂದು ಹಣಕಾಸು ಶಿಕ್ಷಣ ಸಂಸ್ಥೆ ಫಿನ್‌ಸೇಫ್‌ನ ಸಂಸ್ಥಾಪಕಿ ಮೃಣ್ ಅಗರ್ವಾಲ್ ಮಾಹಿತಿ ನೀಡಿದರು.

'ಹೆಚ್ಚು ಸಾಲ ಮಾಡಿರುವ ಕಂಪನಿಗಳು ಹೆಚ್ಚಿನ ಬಡ್ಡಿ ಪಾವತಿಸಬೇಕಾಗುತ್ತದೆ. ಹೀಗಾಗಿ, ಈಗಾಗಲೇ ಕನಿಷ್ಠ ಲಾಭದಲ್ಲಿರುವ ಕಂಪನಿಗಳು ಬಡ್ಡಿ ದರ ಏರಿಕೆಯ ಪರಿಣಾಮವಾಗಿ ನಷ್ಟ ಅನುಭವಿಸುವಂತೆ ಆಗಬಹುದು. ರಿಯಲ್ ಎಸ್ಟೇಟ್, ವಾಹನ ತಯಾರಿಕಾ ಕ್ಷೇತ್ರ, ಬಂಡವಾಳ ಸರಕು ಉತ್ಪಾದನಾ ಕ್ಷೇತ್ರದಲ್ಲಿ ಸಾಲ ಪ್ರಮಾಣ ಹೆಚ್ಚು. ಇಲ್ಲಿ ಹೂಡಿಕೆ ಮಾಡುವವರು ಎಚ್ಚರಿಕೆ ವಹಿಸಬೇಕು' ಎಂದು ಹೂಡಿಕೆ ತಜ್ಞ ಪ್ರಮೋದ ಶ್ರೀಕಾಂತ ದೈತೋಟ ಹೇಳಿದರು.

'ಹೂಡಿಕೆ ಮಾಡಲು ಮೀಸಲಾದ ಹಣದಲ್ಲಿ ಶೇಕಡ 10ರಷ್ಟನ್ನು ಈಗ ಉಳಿತಾಯ ಖಾತೆಯಲ್ಲಿ ಇರಿಸಿಕೊಳ್ಳಿ. ಷೇರು ಮಾರುಕಟ್ಟೆಯಲ್ಲಿ ಕುಸಿತ ನಿಂತು, ಹೂಡಿಕೆಗೆ ಒಳ್ಳೆಯ ಅವಕಾಶ ಬಂದಾಗ ಈ ಹಣವನ್ನು ಬಳಸಿಕೊಳ್ಳಬಹುದು' ಎಂದು ಮಣಿಪಾಲ್ ಅಕಾಡೆಮಿ ಆಫ್ ಬ್ಯಾಂಕಿಂಗ್‌ನ ಪ್ರೊಫೆಸರ್ ವಸಂತ್ ಹೆಗಡೆ ಹೇಳಿದರು.

> ಸಾಲ ಕಡಿಮೆ ಇರುವ ಕಂಪನಿಗಳಲ್ಲಿ ಹೂಡಿಕೆ ಮಾಡಿರುವ ಮ್ಯೂಚುವಲ್ ಫಂಡ್‌ಗಳು ಈಗ ಉತ್ತಮ ಲಾಭ ತಂದುಕೊಡಬಲ್ಲವು
>
> **ಪ್ರಮೋದ ಶ್ರೀಕಾಂತ ದೈತೋಟ,** ಹೂಡಿಕೆ ಸಲಹೆಗಾರ

ಹೂಡಿಕೆಗೆ ತಜ್ಞರ ಸಲಹೆ

- ಸರ್ಕಾರಿ ಸಾಲಪತ್ರಗಳು ಉತ್ತಮ
- ರಾಜ್ಯ ಸರ್ಕಾರಗಳು ಹೊರಡಿಸುವ 'ರಾಜ್ಯ ಅಭಿವೃದ್ಧಿ ಸಾಲಪತ್ರ' (ಎಸ್‌ಡಿಎಲ್) ಕೂಡ ಉತ್ತಮ ಆಯ್ಕೆ
- ಸಾಲ ಹೆಚ್ಚಿರುವ ಕಂಪನಿಗಳ ಷೇರುಗಳಲ್ಲಿ ಹೂಡಿಕೆ; ಇರಲಿ ಎಚ್ಚರಿಕೆ
- ಮಾರುಕಟ್ಟೆಯಲ್ಲಿ ಕುಸಿತ ನಿಂತ ನಂತರ ಹೂಡಿಕೆಗೆ ಸಿಗಲಿದೆ ಅವಕಾಶ

ವೈಯಕ್ತಿಕ ಗೃಹ ಸಾಲ: ಸಹಕಾರಿ ಬ್ಯಾಂಕ್‌ಗಳ ಮಿತಿ 2 ಪಟ್ಟು ಹೆಚ್ಚಳ

ಮುಂಬೈ (ಪಿಟಿಐ): ಸಹಕಾರಿ ಬ್ಯಾಂಕ್‌ಗಳು ನೀಡುವ ವೈಯಕ್ತಿಕ ಗೃಹ ಸಾಲದ ಮೊತ್ತವನ್ನು ಆರ್‌ಬಿಐ ಎರಡು ಪಟ್ಟು ಹೆಚ್ಚಿಸಿದೆ. ಗರಿಷ್ಠ ₹ 1.40 ಕೋಟಿ ವರೆಗೂ ಸಾಲ ನೀಡಬಹುದು ಎಂದು ಹೇಳಿದೆ.

ನಗರ ಸಹಕಾರಿ ಬ್ಯಾಂಕ್‌ಗಳಿಗೆ ಈ ಹಿಂದೆ ₹ 70 ಲಕ್ಷದ ಮಿತಿ ನಿಗದಿಪಡಿಸಲಾಗಿತ್ತು. ಅದನ್ನು ₹ 1.40 ಕೋಟಿಗೆ ಹೆಚ್ಚಿಸಲಾಗಿದೆ. ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳು ₹ 75 ಲಕ್ಷದವರೆಗೆ ಸಾಲ ನೀಡಬಹುದಾಗಿದೆ. ಈ ಹಿಂದೆ ₹ 30 ಲಕ್ಷದ ಮಿತಿ ನಿಗದಿ ಮಾಡಲಾಗಿತ್ತು.

ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳು ವಸತಿ ಯೋಜನೆಗಳನ್ನು ಆರಂಭಿಸಿರುವ ನಿರ್ಮಾಣಗಾರರಿಗೆ ಇನ್ನು ಮುಂದೆ ಸಾಲ ನೀಡಬಹುದಾಗಿದೆ. ಸದ್ಯ ಈ ಅವಕಾಶ ಇರಲಿಲ್ಲ. ವೃದ್ಧರು, ಅಂಗವಿಕಲರ ಅನುಕೂಲಕ್ಕೆ ನಗರ ಗ್ರಾಮೀಣ ಬ್ಯಾಂಕ್‌ಗಳು ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೇವೆಗಳನ್ನು ನೀಡಲು ಸಹ ಆರ್‌ಬಿಐ ಒಪ್ಪಿಗೆ ನೀಡಿದೆ.

ಸೆಕೆಂಡ್ ಹ್ಯಾಂಡ್ ಕಾರು ವಹಿವಾಟಿಗೆ ಪೋರ್ಷೆ

ನವದೆಹಲಿ (ಪಿಟಿಐ): ಭಾರತದಲ್ಲಿ ಸೆಕೆಂಡ್ ಹ್ಯಾಂಡ್ ಕಾರುಗಳ ಮಾರುಕಟ್ಟೆಯನ್ನು ಪ್ರವೇಶಿಸಿರುವುದಾಗಿ ಜರ್ಮನಿಯ ಪೋರ್ಷೆ ಕಂಪನಿಯು ಬುಧವಾರ ತಿಳಿಸಿದೆ.

'ಪೋರ್ಷೆ ಅಪ್ರೂವ್ಡ್' ಕಾರ್ಯಕ್ರಮದ ಅಡಿಯಲ್ಲಿ, ಬಳಸಿದ ಕಾರುಗಳಿಗೆ ಕನಿಷ್ಠ 12 ತಿಂಗಳುಗಳ ಕಾಂಪ್ರಹೆನ್ಸಿವ್ ವಾರಂಟಿ ಜೊತೆಗೆ 24 ಗಂಟೆಗಳ ರೋಡ್‌ಸೈಡ್ ಸರ್ವಿಸ್ ಸಹ ಇರಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಆರ್‌ಬಿಐ: ರೆಪೊ ದರ ಮತ್ತೆ ಏರಿಕೆ

ಒಂದನೇ ಪುಟದಿಂದ...

ಹಣಕಾಸು ನೀತಿಯಿಂದ 'ಹೊಂದಾಣಿಕೆ' ಪದವನ್ನು ಕೈಬಿಡಲಾಗಿದೆ. ಆದರೆ, 'ನಾವು ಹೊಂದಾಣಿಕೆಯ ನಿಲುವನ್ನು ಹೊಂದಿರುತ್ತೇವೆ' ಎಂದು ಕೂಡ ದಾಸ್ ಹೇಳಿದ್ದಾರೆ. ದೇಶದ ಜಿಡಿಪಿ (ಒಟ್ಟು ಆಂತರಿಕ ಉತ್ಪನ್ನ) ಬೆಳವಣಿಗೆ ದರವು ಶೇ 7.2ರಷ್ಟು ಇರಲಿದೆ ಎಂಬ ಅಂದಾಜಿನಲ್ಲಿ ಬದಲಾವಣೆ ಮಾಡಿಲ್ಲ.

ಬುಧವಾರದ ಏರಿಕೆಯ ನಂತರವೂ ರೆಪೊ ದರವು ಕೋವಿಡ್ ಪೂರ್ವದ ಮಟ್ಟಕ್ಕಿಂತ (ಶೇ 5.15) ಕಡಿಮೆ ಇದೆ. 2020ರ ಮಾರ್ಚ್‌ನಿಂದ ಮೇ ನಡುವೆ ಆರ್‌ಬಿಐ ರೆಪೊ ದರವನ್ನು ಶೇ 1.15ರಷ್ಟು ಕಡಿಮೆ ಮಾಡಿತ್ತು.

'ಹಣದುಬ್ಬರದ ಮೇಲೆ ಪರಿಣಾಮ ಕಡಿಮೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಆರ್‌ಬಿಐ ಕೈಗೊಂಡಿರುವ ಕ್ರಮದಿಂದ ಹಣದುಬ್ಬರ ನಿಯಂತ್ರಣಕ್ಕೆ ಬರುವ ಸಾಧ್ಯತೆ ಕಡಿಮೆ ಎಂದು ಕೇಂದ್ರದ ಮಾಜಿ ಹಣಕಾಸು ಕಾರ್ಯದರ್ಶಿ ಎಸ್.ಸಿ. ಗರ್ಗ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಕೃಷಿ ಉತ್ಪನ್ನಗಳು, ಅದರಲ್ಲೂ ಮುಖ್ಯವಾಗಿ ಆಹಾರ ಉತ್ಪನ್ನಗಳು, ಇಂಧನ, ಸಾರಿಗೆ, ಸಂವಹನ ವೆಚ್ಚಗಳು, ಮನೆ ಬಾಡಿಗೆ, ಆರೋಗ್ಯ ಮತ್ತು ಶಿಕ್ಷಣ ಸೇವಾ ವೆಚ್ಚಗಳು ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪ್ರಮುಖವಾಗಿ ತೀರ್ಮಾನಿಸುತ್ತವೆ' ಎಂದು ಅವರು ವಿವರಿಸಿದ್ದಾರೆ.

ಆರ್‌ಬಿಐ ಕೈಗೊಂಡಿರುವ ತೀರ್ಮಾನಗಳು ಸಾಲ ನೀಡುವುದರ ಮೇಲೆ ಪರಿಣಾಮ ಬೀರುತ್ತವೆ. ಚಿಲ್ಲರೆ ಹಣದುಬ್ಬರಕ್ಕೆ ಕಾರಣವಾಗುವ ಉತ್ಪನ್ನಗಳು, ಸೇವೆಗಳ ಬಳಕೆದಾರರು ಹಾಗೂ ಅವುಗಳನ್ನು ನೀಡುವವರು ಸಾಲ ಪಡೆಯುವ ಪ್ರಮಾಣ ಕಡಿಮೆ. ಹೀಗಾಗಿ, ಆರ್‌ಬಿಐ ತೀರ್ಮಾನವು ಹಣದುಬ್ಬರದ ಮೇಲೆ ಪರಿಣಾಮ ಬೀರದು ಎಂದು ಅವರು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕುಮಟ	
ಚಿಪ್ಪು	23599-29089
ಕೋಕ	18019-28899
ಹಳೆಚಾಲಿ	43019-46899
ಹೊಸಚಾಲಿ	33089-36899
ಸಿದ್ದಾಪುರ	
ಬಿಳಿಗೋಟು	24899-31099
ಚಾಲಿ	34899-37309
ಕೋಕ	20099-28399
ಕೆಂಪುಗೋಟು	28599-32099
ರಾಶಿ	44899-48709
ತಟ್ಟಿಬೆಟ್ಟೆ	39099-47699
ಶಿರಸಿ	
ಬೆಟ್ಟೆ	36009-45018
ಬಿಳಿಗೋಟು	16296-30709
ಚಾಲಿ	30699-38101
ರಾಶಿ	34069-48698
ಶಿವಮೊಗ್ಗ	
ಬೆಟ್ಟೆ	50989-52800
ಗೊರಬಲು	17009-37409
ರಾಶಿ	46899-49299
ಸರಕು	58109-76696
ತಿಪಟೂರು ಕೊಬ್ಬರಿ	
ಕನಿಷ್ಠ	13000
ಗರಿಷ್ಠ	14101
ಮಾದರಿ	13000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16300	16200	16450	232.15 ಸೆಂಟ್ಸ್
ಎಸಿ	8960	8600	9075	
ಆರ್‌ಪಿ	9750	10000	10100	ಲಂಡನ್
ಆರ್‌ಸಿ	4850	4500	4650	2109 ಡಾಲರ್ಸ್

ಸೆನ್ಸೆಕ್ಸ್ ಇಳಿಕೆ

ನವದೆಹಲಿ (ಪಿಟಿಐ): ಷೇರುಪೇಟೆಗಳಲ್ಲಿ ಸತತ ನಾಲ್ಕನೇ ದಿನವೂ ವಹಿವಾಟು ಇಳಿಕೆ ಕಂಡಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 214 ಅಂಶ ಕುಸಿಯಿತು.

ಮುಂಬೈ ಧಾರಣೆ

ಶೇಂಗಾ

8-6-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10350-10400
ದಪ್ಪ ಗುಜರಾತ್(ಹೊಸ)	11150-11200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1625)
ಒಂದು ವಾರದ ಡೆಲಿವರಿ	1625 (1620)
ಸೋಯಾ ಕಚ್ಚಾ	1490 (1480)
ಪಾಮ್ ವಾರದ ಡೆಲಿವರಿ	1488 (1483)
ಸೂರ್ಯಕಾಂತಿ ಎಣ್ಣೆ ಕಚ್ಚಾ	1750 (1745)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,900 (50,850)

ಬೆಳ್ಳಿ ಕೆ.ಜಿ 61,700 (62,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

CONNECT ಕ್ಲಾಸಿಫೈಡ್ಸ್

homefirst

ಆದಾಯದ ಪುರಾವೆ ಇಲ್ಲದಿದ್ದರೂ HOME LOAN!

740 6949 900

ತ್ವರಿತ ಸಾಲ ಪ್ರಕ್ರಿಯೆಗಾಗಿ ನಿಮ್ಮ KYC ಅನ್ನು ಸಿದ್ಧವಾಗಿರಿಸಿಕೊಳ್ಳಿ

K+S 1985ರ ರಸಗೊಬ್ಬರ ನಿಯಂತ್ರಣ ಆದೇಶದ ಅಡಿಯಲ್ಲಿ ನಿಗಧಿಪಡಿಸಲಾದ ವಿಶೇಷಣಗಳೊಂದಿಗೆ 100% ನೀರಿನಲ್ಲಿ ಕರಗುವ ರಸಗೊಬ್ಬರಗಳ ಮಿಶ್ರಣ ಮಾರಾಟ.

K+S ಫರ್ಟಿಲೈಸರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, 100% ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಕೆಳಗಿನ ವಿಶೇಷಣಗಳೊಂದಿಗೆ ಮಾರಾಟ ಮಾಡಲು ನಿರ್ಧರಿಸಿದೆ ಎಂದು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಎಲೆಗಳು ಮತ್ತು ದ್ರವ ರಸಗೊಬ್ಬರಗಳು	ಎನ್.	ಪಿ.	ಕೆ.	ಎಸ್.	ಸಿಎ.
soluNOP®	13	-	45	-	
soluMAP®	12	61	-	-	
soluMKP®	-	52	34	-	
soluPKa®	-	60	20	-	
soluSOP®	-	-	50	17.5	
soluAMS®	20.5	-	-	23	
soluCN®	15.5	-	-	-	18.5
soluNPK®	13	40	13	-	
soluNPK®	19	19	19	-	
soluNPK®	16	08	24	-	

eXSOmicros®B Boron 20% Micronutrient Fertilizer | eXSOmicros®Zn Zinc-EDTA 12% CHELATED Micronutrient Fertilizer

ಅನ್ವಯ ಮತ್ತು ಪ್ರಯೋಜನಗಳ ಕುರಿತು ಹೆಚ್ಚಿನ ಮಾಹಿತಿಗೆ ದಯವಿಟ್ಟು K+S ಫರ್ಟಿಲೈಸರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಕರ್ನಾಟಕ ಮಾರಾಟ ತಂಡವನ್ನ ಸಂಪರ್ಕಿಸಿ

ಇವರಿಂದ,
K+S Fertilizers (India) Pvt. Ltd.
Office No.411, 4th Floor, Good Earth Business Bay, Sector 58, Gurgaon, Haryana, Pincode: 122098

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

✓ ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

✓ ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

Marketing & Sales

WANTED SALES Person / Staff Location - Jayanagar /Malleshwaram Contact 9844187234 Sanjay Jewellers

General

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು, ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ). 8884686861, 8884686860.

Security & Detectives

REPUTED SECURITY Agency Requires Security Guards, Security Supervisors, Field Officers, Area/ Training/ Operations Manager. Contact: 9886349781/ 8073668816

Wanted

WANTED MARRIED hindu couple husband as driver not more than 40 years and wife as Cook for a family of 5 at Bangalore Good salary Accommodation and food Police verification will be made Call 9741900909

ಭವಿಷ್ಯ

Astrology

★||ಶ್ರೀಹುಲಿಗೆಮ್ಮ ಚೌಡೇಶ್ವರಿ ಜ್ಯೋತಿಷ್ಯರು||★ ಸ್ತ್ರೀಪುರುಷ ವಶೀಕರಣ ಸಂಭೋಗ ವಶೀಕರಣ ಇನ್ನುಯಾವುದೇ ಘೋರ ನಿಗೂಢ ಗುಪ್ತಕಠಿಣ ಸಮಸ್ಯೆಗಳಿಗೆ 11ನಿಮಿಷಗಳಲ್ಲಿ ಶಾಶ್ವತ ಪರಿಹಾರ ನಂಬಿ ಕರೆಮಾಡಿ 9606735267

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Marathahalli

COMMERCIAL Building Space for rent at (Madhuloka building, next to Nandana hotel, near vims hospital, Outer Ring Road, Marathahalli), Near (landmark; Radisson blu hotel, Marathahalli) - 1st Floor available for rent (Size 2328.57) Sq. Ft. Tel: 9844441088. WhatsApp ;- 9164019777.

Sites

Airport Road

BDA BIAAPA approved Corner Sites for Sale 14 kms Before Airport 500 meters from Stone Hill School Direct Owner 7337616557 8904050690

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 17.06.2022 8ದಿನಗಳು ಡಾರ್ಜಲಿಂಗ್, ಗ್ಯಾಂಗಟಕ್, ನಾಂಚಿ, ಮಿರಿಕ್, ಲಾಚೆನ್, 05.07.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ(ಅಮರಕಂಟಕ, ಮಯ್ಯಾರ್, ಚಿತ್ರಕೂಟ, ಕಲ್ಯಂಜರ್ ಸಹಿತ), 05.07.2022 13ದಿನಗಳು ಚಂಡೀಗಢ್, ಸಿಮ್ಲಾ, ಮನಾಲಿ, 5ದೇವಿಯರು, ವೈಷ್ಣೋದೇವಿ, ಡಾಲ್‌ಹೌಸಿ, ಜಮ್ಮು, ಅಮೃತಸರ್, ಕುರುಕ್ಷೇತ್ರ, 22.07.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ (ಮುಕ್ತಿನಾಥ ಸಹಿತ). 22.07.2022 10ದಿನಗಳು ಅಖಂಡ ಗುಜರಾತ್ ರಾಜ್ಯಪ್ರವಾಸ.(ವಲ್ಲಭಭಾಯಿ ಪ್ರತಿಮೆ, ನಿಷ್ಕಳಂಕ, ಡಿಯು ಸಹಿತ) 8073824856/ 9206979202/ 6366322639

15.08.2022 7 ದಿನಗಳ ಕಾಶಿ, ಗಯಾ, ಅಯೋಧ್ಯ 15.09.2022 35 ದಿನಗಳ ಉತ್ತರ ಭಾರತ. 05.09.2022 ಚಾರ್‌ಧಾಮ್. 22.08.2022 11 ದಿನಗಳ ಮುಕ್ತಿನಾಥ್ ನೇಪಾಳ. 14.07.2022 ಅಮರನಾಥ ಯಾತ್ರೆ ಪ್ರವಾಸಗಳಿಗಾಗಿ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ 080-26574131 26573421 9964108171

ಶ್ರೀರಾಜರಾಜೇಶ್ವರಿ ಟೂರ್ಸ್ 9743895346 9739618243, 22.6.2022 5ದಿನ ತಮಿಳುನಾಡು. 3.7.22 8ದಿನ ಶಿರಡಿ ಪಂಚಜ್ಯೋತಿರ್ಲಿಂಗ. 7.8.22 7ದಿನ ಕಾಶಿ, ಅಯೋಧ್ಯ, ನೈಮಿಶಾರಣ್ಯ 18.9.22 14ದಿನ ಚಾರ್ಧಾಮ್ 6.10.22 12ದಿನ ನಾರ್ತ್‌ಈಸ್ಟ್

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD | ಪ್ರಜಾವಾಣಿ

Classifieds EDUCATION SPECIAL

SPECIAL RATES FOR Admission Notice, Education Success, Congratulation Ads

For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ https://homages.deccanherald.com ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರವಾದಿ ಮಹಮ್ಮದರ ವಿರುದ್ಧ ಅವಹೇಳನಕಾರಿ ಹೇಳಿಕೆ: ಭಾರತೀಯ ಸಂಪಾದಕರ ಕೂಟ ಬೇಸರ

'ಕೆಲ ಸುದ್ದಿವಾಹಿನಿಗಳದ್ದು ಹೊಣೆಗೇಡಿ ನಡೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಲವು ಸಮುದಾಯಗಳು ಮತ್ತು ಅವರ ಧಾರ್ಮಿಕ ನಂಬಿಕೆಗಳ ವಿರುದ್ಧ ನೀಡಲಾದ ಅವಹೇಳನಕಾರಿ ಹೇಳಿಕೆಗೆ ಕೆಲವು ರಾಷ್ಟ್ರೀಯ ಸುದ್ದಿವಾಹಿನಿಗಳು ಅವಕಾಶ ಮಾಡಿಕೊಟ್ಟಿದ್ದು ಹೊಣೆಗೇಡಿ ನಡೆಯಾಗಿದೆ ಎಂದು ಭಾರತೀಯ ಸಂಪಾದಕರ ಕೂಟವು ಹೇಳಿದೆ.

ಪ್ರವಾದಿ ಮಹಮ್ಮದರ ಕುರಿತು ಬಿಜೆಪಿಯ ನೂಪುರ್ ಶರ್ಮಾ ಅವರು ನೀಡಿದ್ದ ಅವಹೇಳನಕಾರಿ ಹೇಳಿಕೆ ಮತ್ತು ಆನಂತರದ ಘಟನೆಗಳ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಂಪಾದಕರ ಕೂಟವು, ಈ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದೆ. ಕೂಟವು, ಈ ಕುರಿತು ಬುಧವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ.

'ಕೆಲವು ರಾಷ್ಟ್ರೀಯ ಸುದ್ದಿವಾಹಿನಿಗಳ ಈ ಹೊಣೆಗೇಡಿ ನಡೆಯಿಂದ ತೀವ್ರ ಬೇಸರವಾಗಿದೆ. ಆಡಳಿತಾರೂಢ ಪಕ್ಷದ ವಕ್ತಾರರು ನೀಡಿದ ಹೇಳಿಕೆಯಿಂದ ಕಾನ್ಪುರದಲ್ಲಿ ಗಲಭೆ ನಡೆದಿದೆ. ಇಂತಹ ಹೇಳಿಕೆಯಿಂದ ಹಲವು ದೇಶಗಳು, ಅಸಾಧಾರಣ ಮತ್ತು ಆಕ್ರೋಶದ ಪ್ರತಿಕ್ರಿಯೆ ನೀಡಿವೆ. ಮಾನವ ಹಕ್ಕುಗಳು ಮತ್ತು ಧಾರ್ಮಿಕ ಸ್ವಾತಂತ್ರ್ಯ ಕುರಿತಾದ ಭಾರತದ ಬದ್ಧತೆಯನ್ನು ಆ ದೇಶಗಳು ಪ್ರಶ್ನಿಸಿವೆ' ಎಂದು ಕೂಟವು ಹೇಳಿದೆ.

'ಜಾತ್ಯತೀತತೆಗೆ ಸಂಬಂಧಿಸಿದಂತೆ ದೇಶದ ಸಾಂವಿಧಾನಿಕ ಬದ್ಧತೆ, ಪತ್ರಕರ್ತರಿಗೆ ಇರಬೇಕಾದ ನೈತಿಕತೆ ಮತ್ತು ಕೋಮುವಾದದ ಸಂದರ್ಭದಲ್ಲಿ ಅನುಸರಿಸಬೇಕೆಂದು ಭಾರತೀಯ ಪತ್ರಿಕಾ ಮಂಡಳಿ ಹೊರಡಿಸಿದ್ದ ಮಾರ್ಗಸೂಚಿಗಳನ್ನು ಈ ಸುದ್ದಿವಾಹಿನಿಗಳು ಗಮನದಲ್ಲಿ ಇರಿಸಿಕೊಳ್ಳಬೇಕಿತ್ತು. ಆಗ, ದೇಶಕ್ಕೆ ಈ ರೀತಿಯ ಮುಜುಗರ ಆಗುವುದನ್ನು ತಡೆಯಬಹುದಾಗಿತ್ತು' ಎಂದು ಕೂಟವು ಹೇಳಿದೆ.

'ಆದರೆ, ಕೆಲವು ಸುದ್ದಿವಾಹಿನಿಗಳು ತಮ್ಮ ವೀಕ್ಷಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಮತ್ತು ಆ ಮೂಲಕ ಲಾಭವನ್ನು ಹೆಚ್ಚಿಸಿಕೊಳ್ಳುವ ಆಸೆಯಿಂದ ಹೀಗೆ ಮಾಡಿವೆ. ತನ್ನ ಕೇಳುಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ರೇಡಿಯೊ ರವಾಂಡ ಪ್ರಸಾರ ಮಾಡಿದ್ದ ಕಾರ್ಯಕ್ರಮದಿಂದ ಆಫ್ರಿಕಾದಲ್ಲಿ ನರಮೇಧ ನಡೆದಿತ್ತು. ಈ ವಾಹಿನಿಗಳ ನಡೆಯೂ ರೇಡಿಯೊ ರವಾಂಡದಿಂದಲೇ ಸ್ಫೂರ್ತಿ ಪಡೆದಂತಿದೆ' ಎಂದು ಕೂಟವು ಆರೋಪಿಸಿದೆ.

'ಕೆಲವು ರಾಷ್ಟ್ರೀಯ ಸುದ್ದಿವಾಹಿನಿಗಳು ವಿಭಜಕ ಮತ್ತು ವಿಷಪೂರಿತ ಧನಿಗಳಿಗೆ ತಮ್ಮ ವೇದಿಕೆಯಲ್ಲಿ ಸಮ್ಮತಿ ನೀಡುವ ಮೂಲಕ ದೇಶದ ವಿವಿಧ ಕೋಮುಗಳ ನಡುವಣ ಅಂತರ ಹೆಚ್ಚುವಂತೆ ಮಾಡಿವೆ. ಅಂತಹ ವಾಹಿನಿಗಳು ಒಂದು ಕ್ಷಣ ನಿಂತು, ತಾವು ಏನು ಮಾಡಿದ್ದೇವೆ ಎಂಬುದನ್ನು ಅವಲೋಕಿಸಬೇಕು ಎಂದು ನಾವು ಆಗ್ರಹಿಸುತ್ತೇವೆ' ಎಂದು ಕೂಟವು ಒತ್ತಾಯಿಸಿದೆ. 'ಪ್ರಸಾರ ಮತ್ತು ಮಾಧ್ಯಮ ಮೇಲ್ವಿಚಾರಣ ಮಂಡಳಿಗಳು ಇನ್ನು ಮುಂದೆ ಇಂತಹವು ಮರುಕಳಿಸುವದನ್ನು ತಡೆಯಬೇಕು' ಎಂದು ಕೂಟವು ಆಗ್ರಹಿಸಿದೆ.

ಮಾಧ್ಯಮಗಳಿರುವುದು ಸಂವಿಧಾನ ಮತ್ತು ಕಾನೂನುಗಳನ್ನು ಬಲಪಡಿಸಲು, ಬದಲಿಗೆ ಅವುಗಳನ್ನು ಹೊಣೆಗೇಡಿಗಳಂತೆ ಅವುಗಳನ್ನು ಮೀರುವುದಕ್ಕಲ್ಲ

ಭಾರತೀಯ ಸಂಪಾದಕರ ಕೂಟ

ಕೂಟ ಹೇಳಿದ್ದು...

- ವೀಕ್ಷಕರ ಸಂಖ್ಯೆ ಹೆಚ್ಚಳಕ್ಕಾಗಿ ಇಂತಹ ನಡೆ
- ಅವಲೋಕನ ಮಾಡಿಕೊಳ್ಳಲು ವಾಹಿನಿಗಳಿಗೆ ಕರೆ

ಬೆದರಿಕೆ ಪತ್ರ ವೈರಲ್

ಪ್ರವಾದಿ ಮಹಮ್ಮದರ ವಿರುದ್ಧ ಹೇಳಿಕೆ ನೀಡಿದ್ದಕ್ಕೆ ಪ್ರತಿಯಾಗಿ ದೇಶದ ಪ್ರಮುಖ ನಗರಗಳಲ್ಲಿ ಆತ್ಮಾಹುತಿ ಬಾಂಬ್ ದಾಳಿ ನಡೆಸುತ್ತೇವೆ ಎಂದು ಅಲ್ ಖೈದಾ ಬೆದರಿಕೆ ಒಡ್ಡಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಅಲ್ ಖೈದಾ ಹೊರಡಿಸಿದೆ ಎನ್ನಲಾದ ಬೆದರಿಕೆ ಪತ್ರದ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. 'ಪ್ರವಾದಿ ಮಹಮ್ಮದರ ವಿರುದ್ಧ ಹೇಳಿಕೆ ನೀಡಿದ ಹಿಂದೂ ಉಗ್ರರ ವಿರುದ್ಧ ಸೇಡು ತೀರಿಸಿಕೊಳ್ಳುತ್ತೇವೆ. ದೆಹಲಿ, ಮುಂಬೈ, ಅಹಮದಾಬಾದ್ ಸೇರಿ ಭಾರತದ ಪ್ರಮುಖ ನಗರಗಳಲ್ಲಿ ಆತ್ಮಾಹುತಿ ಬಾಂಬ್ ದಾಳಿ ನಡೆಸುತ್ತೇವೆ' ಎಂದು ಪತ್ರದಲ್ಲಿ ಬೆದರಿಕೆ ಒಡ್ಡಲಾಗಿದೆ. ಪತ್ರವನ್ನು ಯಾರು, ಯಾರಿಗೆ ಕಳುಹಿಸಿದ್ದಾರೆ ಎಂಬುದು ಇನ್ನೂ ಪತ್ತೆಯಾಗಿಲ್ಲ. ಸರ್ಕಾರವೂ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ದೆಹಲಿ ಸೇರಿದಂತೆ ಪ್ರಮುಖ ನಗರಗಳಲ್ಲಿ ಭದ್ರತೆ ಬಿಗಿಗೊಳಿಸಲು ರಾಜ್ಯಗಳಿಗೆ ಸೂಚನೆ ನೀಡಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯದ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ' ಎಂದು ರಾಯಿಟರ್ಸ್ ಹೇಳಿದೆ.

ನೂಪುರ್‌ಗೆ ಆನ್‌ಲೈನ್‌ನಲ್ಲಿ ಬೆಂಬಲ

ಉಚ್ಚಾಟನೆಗೊಂಡಿರುವ ಬಿಜೆಪಿ ವಕ್ತಾರೆ ನೂಪುರ್ ಶರ್ಮಾ ವಿರುದ್ಧ ಮುಸ್ಲಿಂ ದೇಶಗಳು ತಿರುಗುಬಿದ್ದಿದ್ದರೆ, ಭಾರತದ ಬಲಪಂಥೀಯ ಸದಸ್ಯರು ಆನ್‌ಲೈನ್‌ನಲ್ಲಿ ಬೆಂಬಲ ಸೂಚಿಸಿದ್ದಾರೆ. #ಶೇಮ್‌ಲೆಸ್‌ಬಿಜೆಪಿ, #ಐಸಪೋರ್ಟ್‌ನೂಪುರ್‌ಶರ್ಮಾ ಹೆಸರಿನ ಹ್ಯಾಷ್‌ಟ್ಯಾಗ್‌ಗಳು ಟ್ವಿಟರ್‌ನಲ್ಲಿ ಟ್ರೆಂಡ್ ಆಗಿವೆ. ಕೆಲವು ಸ್ಥಳೀಯ ಬಿಜೆಪಿ ಮುಖಂಡರು ನೂಪುರ್ ವಿರುದ್ಧದ ಕ್ರಮದ ಬಗ್ಗೆ ಫೇಸ್‌ಬುಕ್‌ನಲ್ಲಿ ತಮ್ಮ ಅಸಮಾಧಾನ ಹೊರಹಾಕಿದ್ದಾರೆ. ಇನ್ನೂ ಕೆಲವು ಬೆಂಬಲಿಗರು ಬಿಜೆಪಿ ತೆಗೆದುಕೊಂಡ ನಿಲುವು ದುರ್ಬಲವಾಗಿದೆ ಎಂದು ಭಾವಿಸಿದ್ದಾರೆ.

ಬಿಜೆಪಿ ಮುಖಂಡ ಕಪಿಲ್ ಮಿಶ್ರಾ ಅವರು ನೂಪುರ್ ಅವರನ್ನು ಬೆಂಬಲಿಸಿ ಟ್ವೀಟ್ ಮಾಡಿದ್ದಾರೆ. ಸಂಸದ ಮಹೇಶ್ ಜೇಠ್ಮಲಾನಿ ಅವರು ನೂಪುರ್ ಅವರು ಮೂಲಭೂತವಾದಿ ರಾಜಕಾರಣಿ ಅಲ್ಲ ಎಂದಿದ್ದಾರೆ. 'ನೂಪುರ್ ಅವರು ಪ್ರಚೋದನೆಗೆ ಒಳಗಾಗಿ ಅಸೂಕ್ಷ್ಮ ಹೇಳಿಕೆ ನೀಡಿದ್ದಾರೆ' ಎಂದು ಜೇಠ್ಮಲಾನಿ ಟ್ವೀಟ್ ಮಾಡಿದ್ದಾರೆ

ಬಿಜೆಪಿ ನಾಯಕರ ಮೌನ: ನೂಪುರ್ ಶರ್ಮಾ ಹಾಗೂ ನವೀನ್ ಕುಮಾರ್ ಜಿಂದಾಲ್ ವಿರುದ್ಧ ಬಿಜೆಪಿ ಕ್ರಮ ತೆಗೆದುಕೊಂಡ ಬಳಿಕ, ಪ್ರವಾದಿ ಪ್ರಕರಣದಲ್ಲಿ ಹೇಳಿಕೆ ನೀಡಲು ಬಿಜೆಪಿ ನಾಯಕರು ಹಿಂದೇಟು ಹಾಕುತ್ತಿದ್ದಾರೆ. ಈ ಪ್ರಕರಣದಲ್ಲಿ ಮಾತನಾಡದಂತೆ ಬಿಜೆಪಿಯಿಂದ ಯಾವುದೇ ಮಾರ್ಗಸೂಚಿ ಬಂದಿಲ್ಲ. ಆದರೂ, ವಕ್ತಾರರ ವಿರುದ್ಧ ಪಕ್ಷ ತೆಗೆದುಕೊಂಡಿರುವ ಶಿಸ್ತುಕ್ರಮದ ಕುರಿತು ಹೇಳಿಕೆ ನೀಡುವುದರಿಂದ ಮುಖಂಡರು ಹಿಂದೆ ಸರಿಯುತ್ತಿದ್ದಾರೆ.

ಬಿಜೆಪಿ ಮುಖಂಡನ ಬಂಧನ

ಕಾನ್ಪುರ: ಕಾನ್ಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸ್ಥಳೀಯ ಬಿಜೆಪಿ ಮುಖಂಡ ಹಾಗೂ ಇತರೆ 12 ಜನರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ. ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ 51ಕ್ಕೆ ಏರಿಕೆಯಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಾಕಿದ ಆರೋಪದಲ್ಲಿ, ಬಿಜೆಪಿ ಯುವಮೋರ್ಚಾದ ಮಾಜಿ ಜಿಲ್ಲಾ ಕಾರ್ಯದರ್ಶಿ ಹರ್ಷಿತ್ ಶ್ರೀವಾಸ್ತವ್ ಅವರನ್ನು ಬಂಧಿಸಲಾಗಿದೆ ಎಂದು ಎಡಿಜಿಪಿ ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ. ಪೊಲೀಸರು ಪ್ರಕಟಿಸಿದ್ದ ಪೋಸ್ಟರ್‌ನಲ್ಲಿ ಭಾವಚಿತ್ರ ಇದ್ದ 16 ವರ್ಷದ ಹುಡುಗನೊಬ್ಬ ಪೊಲೀಸ್ ಠಾಣೆಗೆ ಶರಣಾಗಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಖೀರ್ ಭವಾನಿ ಮೇಳ: ಕಾಶ್ಮೀರಿ ಪಂಡಿತರು ಭಾಗಿ

ಕಾಶ್ಮೀರದ ಗಂದರ್‌ಬಾಲ್‌ನ ಪ್ರಸಿದ್ಧ ರಾಗ್ನ್ಯಾ ದೇವಿ ದೇವಸ್ಥಾನದಲ್ಲಿ ಬುಧವಾರ ನಡೆದ ವಾರ್ಷಿಕ ಖೀರ್ ಭವಾನಿ ಮೇಳದಲ್ಲಿ ಜಮ್ಮು ಭಾಗದ ಕಾಶ್ಮೀರಿ ಪಂಡಿತರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ತುಲ್ಮುಲ್ಲಾ (ಜಮ್ಮು–ಕಾಶ್ಮೀರ) (ಪಿಟಿಐ): ಬಿಗಿ ಭದ್ರತೆಯ ನಡುವೆ ಬುಧವಾರ ಕಾಶ್ಮೀರ ಪಂಡಿತ ಸಮುದಾಯದ ನೂರಾರು ಯಾತ್ರಾರ್ಥಿಗಳು ಇಲ್ಲಿನ ಗಂದರ್‌ಬಾಲ್‌ನ ಪ್ರಸಿದ್ಧ ರಾಗ್ನ್ಯಾ ದೇವಿ ದೇವಸ್ಥಾನದಲ್ಲಿ ವಾರ್ಷಿಕ ಖೀರ್ ಭವಾನಿ ಮೇಳದಲ್ಲಿ ಪಾಲ್ಗೊಂಡು ಪೂಜೆ ಸಲ್ಲಿಸಿದರು.

ಕಣಿವೆ ರಾಜ್ಯದಲ್ಲಿ ಇತ್ತೀಚೆಗೆ ಹಿಂದೂಗಳನ್ನು ಗುರಿಯಾಗಿಸಿಕೊಂಡು ನಡೆಸಲಾಗುತ್ತಿರುವ ಹತ್ಯೆಯ ಕಾರಣ, ಯಾತ್ರಾರ್ಥಿಗಳಿಗೆ ಬಿಗಿ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿತ್ತು. ಕೋವಿಡ್ ಕಾರಣದಿಂದಾಗಿ ಎರಡು ವರ್ಷಗಳ ಕಾಲ ಮೇಳ ನಡೆದಿರಲಿಲ್ಲ.

ಬರಿಗಾಲಿನಲ್ಲಿ ದೇಗುಲಕ್ಕೆ ತೆರಳಿದ ಭಕ್ತರು ಗುಲಾಬಿ ದಳಗಳನ್ನು ಸಮರ್ಪಿಸಿ ಪ್ರಾರ್ಥನೆ ಸಲ್ಲಿಸಿದರು. ದೇಗುಲದ ಆವರಣದೊಳಗಿನ ಪವಿತ್ರ ಬುಗ್ಗೆಯಲ್ಲಿ ಹಾಲು ಮತ್ತು ಕಡುಬಿನ ನೈವೇದ್ಯ ಸಮರ್ಪಿಸಿದರು. ದೇಗುಲದ ಕೆಳಗೆ ಹರಿಯುವ ಪವಿತ್ರ ಬುಗ್ಗೆಯಲ್ಲಿನ ನೀರಿನ ಬಣ್ಣವು ಕಣಿವೆಯ ಭವಿಷ್ಯವನ್ನು ಸೂಚಿಸುತ್ತದೆ ಎಂಬ ನಂಬಿಕೆ ಭಕ್ತರದ್ದು.

'ಈ ಬಾರಿ ನೀರಿನ ಬಣ್ಣವು ಹಾಲಿನ ಬಣ್ಣದ್ದಾಗಿತ್ತು. ಇದು ಮುಂಬರುವ ದಿನಗಳಲ್ಲಿ ಕಾಶ್ಮೀರಕ್ಕೆ ಒಳ್ಳೆಯದಾಗುವ ಮುನ್ಸೂಚನೆ' ಎಂದು ಭಕ್ತ ವಿವೇಕ್ ಭಟ್ ಭರವಸೆಯನ್ನು ವ್ಯಕ್ತಪಡಿಸಿದರು.

ಪೋಕ್ಸೊ ಪ್ರಕರಣ: ನಿರೀಕ್ಷಣಾ ಜಾಮೀನು ನಿರಾಕರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ದಾಖಲಾಗಿರುವ ಪ್ರಕರಣದಲ್ಲಿ ಆರೋಪಿಯೊಬ್ಬನಿಗೆ ನಿರೀಕ್ಷಣಾ ಜಾಮೀನು ನೀಡಲು ಬುಧವಾರ ನಿರಾಕರಿಸಿರುವ ಸುಪ್ರೀಂ ಕೋರ್ಟ್, 'ಇಂತಹದ್ದನ್ನೆಲ್ಲ ಸಹಿಸುವುದಿಲ್ಲ' ಎಂದು ಎಚ್ಚರಿಕೆ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಅನಿರುದ್ಧ ಬೋಸ್ ಅವರಿದ್ದ ರಜಾಕಾಲದ ಪೀಠವು, ಕಲ್ಕತ್ತಾ ಹೈಕೋರ್ಟ್ ಈ ವರ್ಷದ ಮೇನಲ್ಲಿ ಜಾಮೀನು ನಿರಾಕರಿಸಿ ನೀಡಿರುವ ಆದೇಶದ ವಿರುದ್ಧದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿತು. ಆರೋಪಿ ಕೋರಿದ್ದ ನಿರೀಕ್ಷಣಾ ಜಾಮೀನು ಮನವಿಯನ್ನು ಪೀಠ ತಿರಸ್ಕರಿಸಿತು.

ಪಶ್ಚಿಮ ಬಂಗಾಳದಲ್ಲಿ ಚಿಕ್ಕ ಹುಡುಗಿಯ ಆಕ್ಷೇಪಾರ್ಹ ಛಾಯಾಚಿತ್ರವನ್ನು ತೆಗೆದು, ನಂತರ ಆಕೆಗೆ ಬೆದರಿಕೆ ಹಾಕಿರುವ ಸಂಬಂಧ ಆಪಾದಿತನ ವಿರುದ್ಧ ಐಪಿಸಿ ಮತ್ತು ಪೋಕ್ಸೊ ಕಾಯ್ದೆಯಡಿ ಕಳೆದ ಅಕ್ಟೋಬರ್‌ನಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಚೀನಾ: ಅಪಾಯದ ಮಾಹಿತಿ ನೀಡಿದರೆ ಬಹುಮಾನ

ಬೀಜಿಂಗ್ (ಎಎಫ್‌ಪಿ): ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದಂತೆ ಯಾವುದೇ ಬೆದರಿಕೆ ಅಥವಾ ಅಪಾಯ ಇರುವ ಬಗ್ಗೆ ಮಾಹಿತಿ ನೀಡುವ ತನ್ನ ದೇಶದ ನಾಗರಿಕರಿಗೆ ಸುಮಾರು 1,00,000 ಯೆನ್ (₹11,61,427) ನಗದು ಬಹುಮಾನ ನೀಡುವುದಾಗಿ ಚೀನಾ ಸರ್ಕಾರ ತಿಳಿಸಿದೆ.

ಈ ಕುರಿತು ಮಾಹಿತಿ ನೀಡಿರುವ ಚೀನಾದ ಸರ್ಕಾರಿ ಸ್ವಾಮ್ಯದ ಲೀಗಲ್ ಡೇಲಿ ಪತ್ರಿಕೆ, 'ರಾಷ್ಟ್ರೀಯ ಭದ್ರತೆಗೆ ಅಪಾಯ ಇರುವ ಬಗ್ಗೆ ಮಾಹಿತಿ ನೀಡಿದ ಹಾಗೂ ಇಂತಹ ಪ್ರಕರಣಗಳನ್ನು ತಡೆಯಲು ಅಥವಾ ನಿವಾರಿಸಲು ಮಾರ್ಗಸೂಚಿಗಳಿಗೆ ಅನುಗುಣವಾಗಿ ಸಹಾಯ ಮಾಡುವ ನಾಗರಿಕರಿಗೆ ಅವರ ಪಾತ್ರಕ್ಕೆ ಅನುಗುಣವಾಗಿ ಪ್ರಮಾಣಪತ್ರ ಸಹಿತ ಬಹುಮಾನ ನೀಡಲಾಗುವುದು' ಎಂದು ತಿಳಿಸಿದೆ.

ಭದ್ರತೆಯ ಉಲ್ಲಂಘನೆಗೆ ಸಂಬಂಧಿಸಿದಂತೆ ಮಾಹಿತಿ ನೀಡುವವರಿಗೆ ಚೀನಾದ ಭದ್ರತಾ ಸಚಿವಾಲಯ ಹಲವು ವರ್ಷಗಳಿಂದ ನಗದು ಬಹುಮಾನ ನೀಡುತ್ತಾ ಬಂದಿದೆ. ಆದರೆ, ಜನರಲ್ಲಿ ಈ ಚಟುವಟಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಭದ್ರತಾ ಸಚಿವಾಲಯವು ಹೊಸ ಮಾರ್ಗಸೂಚಿಗಳನ್ನು ಜಾರಿಗೆ ತಂದಿದೆ ಎಂದು ಲೀಗಲ್ ಡೇಲಿ ವರದಿ ಮಾಡಿದೆ.

'ಉಕ್ರೇನ್‌ಗೆ 210 ಸೈನಿಕರ ಶವ ಹಸ್ತಾಂತರ'

ಪ್ರಜಾವಾಣಿ ವಾರ್ತೆ

ಕೀವ್ (ಎಪಿ): ಉಕ್ರೇನಿನ ಬಂದರು ನಗರ ಮರಿಯುಪೋಲ್‌ನಲ್ಲಿನ ದೈತ್ಯ ಉಕ್ಕಿನ ಸ್ಥಾವರ ಅಜೋವ್‌ಸ್ಟಾಲ್ ರಕ್ಷಿಸಲು ರಷ್ಯಾ ಪಡೆಗಳ ವಿರುದ್ಧ ಹೋರಾಡಿ ಮಡಿದ 210 ಉಕ್ರೇನ್ ಯೋಧರ ಶವಗಳನ್ನು ರಷ್ಯಾ ಈವರೆಗೆ ಉಕ್ರೇನ್‌ಗೆ ಹಸ್ತಾಂತರಿಸಿದೆ.

ನಾಶವಾದ ಈ ಬಂದರು ನಗರ ಈಗ ರಷ್ಯಾ ನಿಯಂತ್ರಣದಲ್ಲಿದೆ. ಸ್ಥಾವರದ ಅವಶೇಷಗಡಿ ಇನ್ನೂ ಎಷ್ಟು ಶವಗಳಿರಬಹುದೆಂಬುದು ನಿರ್ದಿಷ್ಟವಾಗಿ ತಿಳಿದುಬಂದಿಲ್ಲ. ಆದರೆ, ಒಂದು ವಾರದಿಂದ ಯೋಧರ ಶವಗಳನ್ನು ರಷ್ಯಾ ಹಸ್ತಾಂತರಿಸುತ್ತಿದೆ ಎಂದು ಉಕ್ರೇನ್ ಸೇನೆಯ ಗಪ್ತದಳ ಹೇಳಿದೆ.

ಸೆವೆರೊಡೊನೆಟ್ಸ್ಕ್, ಲುಹಾನ್ಸ್ಕ್‌ನ ಸಂಪೂರ್ಣ ನಿಯಂತ್ರಣ ಸಾಧಿಸಲು ರಷ್ಯಾ ಭೀಕರ ದಾಳಿ ಮುಂದುವರಿಸಿದೆ. ಉಕ್ರೇನ್ ಪಡೆಗಳೂ ತೀವ್ರ ಪ್ರತಿರೋಧ ತೋರುತ್ತಿವೆ. ಹಾರ್ಕಿವ್‌ನಲ್ಲಿ ರಷ್ಯಾದ ಶೆಲ್ ದಾಳಿಗೆ ಐವರು ನಾಗರಿಕರು ಮೃತಪಟ್ಟಿದ್ದಾರೆ. ಬಾಖ್‌ಮಟ್ ಮೇಲೆ ರಷ್ಯಾ ನಡೆಸಿದ ವಾಯು ದಾಳಿಗೆ ಹಲವು ಶಾಲೆಗಳು ಮತ್ತು ಜನವಸತಿ ಕಟ್ಟಗಳು ಧ್ವಂಸಗೊಂಡಿವೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ.

'ರಷ್ಯಾ ಪಡೆಗಳು ಲುಹಾನ್ಸ್ಕ್‌ನ ಶೇ 97ರಷ್ಟು ಪ್ರದೇಶದ ಮೇಲೆ ನಿಯಂತ್ರಣ ಸಾಧಿಸಿವೆ. ಡೊನೆಟ್‌ಸ್ಕ್ ಮತ್ತು ಲುಹಾನ್ಸ್ಕ್ ಒಳಗೊಂಡ ಕೈಗಾರಿಕಾ ನಗರ ಡಾನ್‌ಬಾಸ್ ಅನ್ನು ಪಡೆಗಳು ಸಂಪೂರ್ಣ ವಶಪಡಿಸಿಕೊಳ್ಳುವ ಗುರಿ ಸಾಧಿಸುವ ಸನಿಹದಲ್ಲಿವೆ' ಎಂದು ರಷ್ಯಾದ ರಕ್ಷಣಾ ಸಚಿವ ಸೆರ್ಗೈ ಶೋಯಿಗು ತಿಳಿಸಿದ್ದಾರೆ.

'ಆಕ್ರಮಣ ಆರಂಭವಾದಾಗಿನಿಂದ ಈವರೆಗೆ ರಷ್ಯಾದ 31,500 ಸೈನಿಕರನ್ನು ಹತ್ಯೆಗೈದಿದ್ದು, ಯುದ್ಧವಿಮಾನ, ಹೆಲಿಕಾಪ್ಟರ್ ಸೇರಿದಂತೆ ಹಲವು ಶಸ್ತ್ರಾಸ್ತ್ರಗಳನ್ನು ನಾಶಪಡಿಸಿ, ರಷ್ಯಾ ಸೇನೆಗೆ ಭಾರಿ ನಷ್ಟ ಮಾಡಿದ್ದೇವೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಬುಧವಾರ ತಿಳಿಸಿದ್ದಾರೆ.

'ರಷ್ಯಾದ ಆಕ್ರಮಣದಿಂದ ಧ್ವಂಸಗೊಂಡಿರುವ ನಗರಗಳು, ಮೂಲಸೌಕರ್ಯಗಳ ಮರುನಿರ್ಮಾಣ ಹಾಗೂ ಸೇನೆಯ ಮರು ಸಂಘಟನೆಗೆ ನಮ್ಮ ಸರ್ಕಾರ ದೇಣಿಗೆ ಸಂಗ್ರಹಿಸುತ್ತಿದೆ' ಎಂದು ಅವರು ಹೇಳಿದ್ದಾರೆ.

ಭಾರತ–ವಿಯೆಟ್ನಾಂ: ಮಿಲಿಟರಿ ಒಪ್ಪಂದ

ಹನೋಯಿ (ಪಿಟಿಐ): ಭಾರತ ಮತ್ತು ವಿಯೆಟ್ನಾಂ ದ್ವಿಪಕ್ಷೀಯ ಮಿಲಿಟರಿ ಸಹಕಾರ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿವೆ. ಈ ಮೂಲಕ ಇದೇ ಮೊದಲ ಬಾರಿಗೆ ವಿಯೆಟ್ನಾಂ ಬೇರೊಂದು ದೇಶದೊಂದಿಗೆ ಮಿಲಿಟರಿ ಸಹಕಾರ ಪ್ರಕ್ರಿಯೆಯನ್ನು ಸರಳಗೊಳಿಸುವ ಒಪ್ಪಂದ ಮಾಡಿಕೊಂಡಿದೆ.

ಇದೇ ವೇಳೆ ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧವನ್ನು ವೃದ್ಧಿಸುವ ಹಲವು ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಪಿಣರಾಯಿ ರಾಜೀನಾಮೆಗೆ ಆಗ್ರಹ

ತಿರುವನಂತಪುರ/ಪಾಲಕ್ಕಾಡ್ (ಪಿಟಿಐ): ಚಿನ್ನ ಕಳ್ಳಸಾಗಣೆ ಪ್ರಕರಣದ ಪ್ರಮುಖ ಆರೋಪಿ ಸ್ವಪ್ನಾ ಸುರೇಶ್ ಅವರು ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಅವರ ಕುಟುಂಬದ ವಿರುದ್ಧ ಮಾಡಿರುವ ಹೊಸ ಆರೋಪಗಳು ಕೇರಳ ರಾಜಕೀಯದಲ್ಲಿ ಬುಧವಾರ ಬಿರುಗಾಳಿಯನ್ನೇ ಎಬ್ಬಿಸಿದವು.

ಸ್ವಪ್ನಾ ಸುರೇಶ್ ಅವರು ಬೆಳಿಗ್ಗೆ ಮಾಡಿದ ಆರೋಪಗಳಿಂದಾಗಿ ರಾಜಕೀಯ ಕೆಸರೆರಚಾಟ ಆರಂಭವಾಯಿತಲ್ಲದೇ, ವಿರೋಧ ಪಕ್ಷಗಳು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ರಾಜೀನಾಮೆಗೆ ಒತ್ತಾಯಿಸಿದವು. ಆದರೆ, ಸಿಪಿಎಂನ ಹಿರಿಯ ನಾಯಕ ಮತ್ತು ಎಲ್‌ಡಿಎಫ್‌ನ ಸಂಚಾಲಕ ಇ.ಪಿ.ಜಯರಾಜನ್ ಅವರು ವಿರೋಧ ಪಕ್ಷಗಳ ಬೇಡಿಕೆಯನ್ನು ತಳ್ಳಿಹಾಕಿದರು.

ಆರೋಪಗಳೇನು?: ಪಾಲಕ್ಕಾಡ್‌ನಲ್ಲಿರುವ ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸ್ವಪ್ನಾ, 'ತನ್ನ ಜೀವಕ್ಕೆ ಬೆದರಿಕೆಯೇ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ವಿರುದ್ಧದ ಈ ಆರೋಪಗಳಿಗೆ ಕಾರಣ. ಇದರಿಂದ ಹಿಂದೆ ರಾಜಕೀಯ ಅಥವಾ ವೈಯಕ್ತಿಕ ಕಾರ್ಯಸೂಚಿ ಇಲ್ಲ' ಎಂದರು.

ಹೈದರಾಬಾದ್‌ನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ

ಎಐಎಂಐಎಂ ಶಾಸಕನ ಪುತ್ರನ ಬಂಧನ

ಹೈದರಾಬಾದ್ (ಪಿಟಿಐ): ಇಲ್ಲಿನ ಜುಬಿಲಿ- ಬಂಜಾರಾ ಹಿಲ್ಸ್ ಪ್ರದೇಶದಲ್ಲಿ ಇತ್ತೀಚೆಗೆ ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣದ ಆರು ಆರೋಪಿಗಳನ್ನು ಬಂಧಿಸಲಾಗಿದೆ. ಈ ಪೈಕಿ ಐವರು ಬಾಲಾರೋಪಿಗಳು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ಆರನೇ ಆರೋಪಿಯಾಗಿ ಎಐಎಂಐಎಂ ಶಾಸಕನ ಪುತ್ರನನ್ನು (ಬಾಲಾರೋಪಿ) ಪ್ರಕರಣದಲ್ಲಿ ಹೆಸರಿಸಲಾಗಿದ್ದು, ಆತನನ್ನೂ ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಕರಣದ ಆರೋಪಿ, ಸಾದುದ್ದೀನ್ ಮಲಿಕ್ ಅವರನ್ನು ಪೊಲೀಸ್ ಕಸ್ಟಡಿಗೆ ನೀಡಿ ಸ್ಥಳೀಯ ಕೋರ್ಟ್ ಆದೇಶಿಸಿದೆ.

ಐವರು ಆರೋಪಿಗಳ ವಿರುದ್ಧ ಭಾರತೀಯ ದಂಡಸಂಹಿತೆಯ ಸೆಕ್ಷನ್ 376 ಡಿ (ಸಾಮೂಹಿಕ ಅತ್ಯಾಚಾರ), 323 (ಆಘಾತ ಉಂಟುಮಾಡಲು ಕಾರಣರಾಗುವುದು), 366 (ಅಪಹರಣ) ಹಾಗೂ ಪೋಕ್ಸೊ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಘಟನೆಯ ವಿಡಿಯೊ ಚಿತ್ರೀಕರಿಸಿದ ಆರೋಪದಲ್ಲಿ ಐಟಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

'ಐವರು ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದ್ದು, ಶಿಕ್ಷೆಯು 20 ವರ್ಷಗಳಿಗಿಂತ ಕಡಿಮೆ ಇರಲಾರದು. ಪ್ರಕರಣದ ವಿಚಾರಣೆಗಾಗಿ ವಿಶೇಷ ನ್ಯಾಯಾಲಯ ರಚಿಸಲಾಗುವುದು. ಆರೋಪಿಗಳ ವಿರುದ್ಧ ಪ್ರಬಲ ಸಾಕ್ಷ್ಯವಿದೆ' ಎಂದು ಹೈದರಾಬಾದ್ ಪೊಲೀಸ್ ಆಯುಕ್ತ ಸಿ.ವಿ. ಆನಂದ್ ತಿಳಿಸಿದ್ದಾರೆ.

ಬಾಲಕಿಯ ಮೇಲಿನ ಸಾಮೂಹಿಕ ಅತ್ಯಾಚಾರಕ್ಕೆ ಆರೋಪಿಗಳು ಬಳಸಿದ ವಾಹನವು (ಎಂಪಿವಿ) ಸರ್ಕಾರಿ ವಾಹನ ಎಂಬುದಾಗಿ ತೋರುತ್ತದೆ ಎಂದು ಆಯುಕ್ತರು ಹೇಳಿದ್ದಾರೆ.

ಆರನೇ ಆರೋಪಿಯು ಅತ್ಯಾಚಾರದಲ್ಲಿ ಭಾಗಿಯಾಗಿಲ್ಲವಾದರೂ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ ಎನ್ನಲಾಗಿದೆ. ಆತನ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 354 (ಮಹಿಳೆಯ ವಿರುದ್ಧ ಅಪರಾಧ ಪ್ರಕರಣ) ಹಾಗೂ ಪೋಕ್ಸೊ ಕಾಯ್ದೆಯ ಸೆಕ್ಷನ್ ಅಡಿ ಪ್ರಕರಣ ದಾಖಲಿಸಲಾಗಿದೆ. ಆತನಿಗೂ 5–7 ವರ್ಷ ಜೈಲು ಶಿಕ್ಷೆಯಾಗುವ ಸಾಧ್ಯತೆ ಇದೆ ಎಂದು ಪೊಲೀಸರು ಹೇಳಿದ್ದಾರೆ.

ಘಟನೆಗೆ ಸಂಬಂಧಿಸಿದ ಫೋಟೊ ಮತ್ತು ವಿಡಿಯೊಗಳನ್ನು ಬಿಜೆಪಿ ಬಿಡುಗಡೆ ಮಾಡಿದ ಬಳಿಕವಷ್ಟೇ 6ನೇ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂಬ ಆರೋಪಗಳನ್ನು ಪೊಲೀಸ್ ಆಯುಕ್ತರು ನಿರಾಕರಿಸಿದ್ದಾರೆ.

ಬಿಹಾರ: ಚಲಿಸುತ್ತಿದ್ದ ಬಸ್‌ನಲ್ಲಿ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ಬೇತಿಯಾ (ಬಿಹಾರ) (ಪಿಟಿಐ): ಬಿಹಾರದಲ್ಲಿ ಮಂಗಳವಾರ ಚಲಿಸುತ್ತಿದ್ದ ಬಸ್‌ನಲ್ಲಿ 17 ವರ್ಷದ ಬಾಲಕಿ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಚಾಲಕ, ನಿರ್ವಾಹಕ, ಕ್ಲಿನರ್ ಸೇರಿದಂತೆ ನಾಲ್ವರನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ. ಬಸ್ ವಶಕ್ಕೆ ಪಡೆಯಲಾಗಿದೆ.

'ಪೂರ್ವ ಚಂಪಾರಣ್ ಜಿಲ್ಲೆಯ ಮೊತಿಹಾರಿ ಬಸ್ ನಿಲ್ದಾಣದಲ್ಲಿ ಬೇತಿಯಾ ಕಡೆಗೆ ಹೋಗುವ ಬಸ್ ಹತ್ತಿದೆ. ಬಸ್‌ನಲ್ಲಿ ನೀಡಿದ ಪಾನೀಯ ಕುಡಿದ ನಂತರ ಆಕೆ ಪ್ರಜ್ಞಾಹೀನಳಾದೆ. ನಂತರ ನನ್ನ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಯಿತು' ಎಂದು ಸಂತ್ರಸ್ತೆ ತಿಳಿಸಿದ್ದಾಳೆ.

ಸಂಗ್ರಹಿಸಿದ ಸಾಕ್ಷ್ಯಗಳ ವಿಶ್ಲೇಷಣೆಗಾಗಿ ವಿಧಿವಿಜ್ಞಾನ ತಜ್ಞರನ್ನು ಕರೆಸಲಾಗಿದೆ ಎಂದು ಪೊಲೀಸ್ ಅಧಿಕಾರಿ ಮುಕುಲ್ ಪಾಂಡೆ ತಿಳಿಸಿದ್ದಾರೆ.

ಆರೋಪಿಗಳು ಆಕೆಯನ್ನು ಬಸ್ ಒಳಗೆ ಕೂಡಿ ಹಾಕಿ ಪರಾರಿಯಾಗಿದ್ದರು. ದಾರಿಯಲ್ಲಿ ಹೋಗುತ್ತಿದ್ದವರು ಬಾಗಿಲು ತೆರೆದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಸಂತ್ರಸ್ತೆ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ಪೋಕ್ಸೊ ಅಡಿ ಪ್ರಕರಣ ದಾಖಲಾಗಿದೆ.

ಸಂಕ್ಷಿಪ್ತ ಸುದ್ದಿ

ಮೂರು ರಾಕೆಟ್‌ಗಳ ಉಡಾವಣೆಗೆ ಸಿದ್ಧತೆ

ಕ್ಯಾನ್‌ಬೆರಾ (ಎಪಿ) ನಾಸಾ ಅಮೆರಿಕದ ಹೊರಗಿನ ಉತ್ತರ ಆಸ್ಟ್ರೇಲಿಯಾದ ವಾಣಿಜ್ಯ ಬಾಹ್ಯಾಕಾಶ ನೆಲೆಯಿಂದ ಇದೇ ತಿಂಗಳು ಮೊದಲ ಬಾರಿಗೆ ಸಂಶೋಧನಾ ರಾಕೆಟ್ ಉಡಾವಣೆ ಮಾಡಲಿದೆ.

ಉತ್ತರ ಪ್ರಾಂತ್ಯದ ಗಣಿಗಾರಿಕೆ ಪಟ್ಟಣ ನ್ಹುಲುನ್‌ಬೈ ಬಳಿಯ ದೇಶಿಯ ಮಾಲೀಕತ್ವದ ಅರ್ನ್‌ಹೆಮ್ ಬಾಹ್ಯಾಕಾಶ ಕೇಂದ್ರದಿಂದ ಮೂರು ಸಬ್ ಆರ್ಬಿಟಲ್ ಸೌಂಡಿಂಗ್ ರಾಕೆಟ್‌ಗಳನ್ನು ಜೂನ್ 26, ಜುಲೈ 4 ಮತ್ತು 12ರಂದು ಉಡಾವಣೆ ಮಾಡಲಾಗುವುದು ಎಂದು ನಾಸಾ ಮತ್ತು ಉಡಾವಣಾ ನೆಲೆ ಈಕ್ವಟೋರಿಯಲ್ ಲಾಂಚ್ ಆಸ್ಟ್ರೇಲಿಯಾ ತಿಳಿಸಿದೆ.

ಬಲೂಚಿಸ್ತಾನದಲ್ಲಿ ಕಂದಕಕ್ಕೆ ಉರುಳಿದ ವ್ಯಾನ್: 22 ಸಾವು

ಕರಾಚಿ: ಪ್ರಯಾಣಿಕರನ್ನು ಕರೆದುಕೊಂಡು ಹೋಗುತ್ತಿದ್ದ ವ್ಯಾನ್‌ವೊಂದು ನೂರಾರು ಅಡಿ ಆಳದ ಕಂದಕಕ್ಕೆ ಉರುಳಿದ ಪರಿಣಾಮ ಐವರು ಮಕ್ಕಳು ಸೇರಿದಂತೆ 22 ಮಂದಿ ಮೃತಪಟ್ಟಿರುವ ಘಟನೆ ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಬುಧವಾರ ನಡೆದಿದೆ.

ಕಿಲ್ಲಾ ಸೈಫುಲ್ಲಾ ಬಳಿಯ ಅಖ್ತರ್‌ಜೈ ಪರ್ವತದ ಸೂಕ್ಷ್ಮ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿದ ವಾಹನವು ಕಂದಕಕ್ಕೆ ಉರುಳಿದೆ.

ವಾಹನದಲ್ಲಿದ್ದ ಸುಮಾರು 23 ಮಂದಿ ಝೋಬ್ ಪಟ್ಟಣದಿಂದ ಲೊರಾಲಿಯಾಗೆ ಪ್ರಯಾಣಿಸುತ್ತಿದ್ದರು ಎಂದು ಝೋಬ್ ಜಿಲ್ಲೆಯ ಜಿಲ್ಲಾಧಿಕಾರಿ ಮಹಮ್ಮದ್ ಖಾಸಿಂ ತಿಳಿಸಿದ್ದಾರೆ.

'ವಾಹನವು ಅಖ್ತರ್‌ಜೈ ಪರ್ವತದ ತುದಿಯಿಂದ ಕೆಳಗೆ ಬಿದ್ದಿದೆ. ಆಳವಾದ ಕಂದಕದಲ್ಲಿ ಸಿಲುಕಿದ್ದ ಮೃತದೇಹಗಳನ್ನು ಹರಸಾಹಸಪಟ್ಟು ಹೊರಗೆ ತೆಗೆಯಲಾಗಿದೆ'ಎಂದೂ ಅವರು ಹೇಳಿದ್ದಾರೆ.

ಬ್ಯಾಡ್ಮಿಂಟನ್: ಸಿಂಧು, ಸೇನ್ ಶುಭಾರಂಭ

ಪಿ.ವಿ.ಸಿಂಧು– ಎಎಫ್‌ಪಿ ಚಿತ್ರ

ಜಕಾರ್ತ, (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಇಂಡೋನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ ಸಿಂಧು 18–21, 21–5, 21–11ರಿಂದ ಡೆನ್ಮಾರ್ಕ್‌ನ ಲಿನೆ ಕ್ರಿಸ್ಟೊಫರ್ಸನ್ ಸವಾಲು ಮೀರಿದರು. 51 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಮೊದಲ ಗೇಮ್ ಸೋತ ಭಾರತದ ಆಟಗಾರ್ತಿ ನಂತರ ಪ್ರಾಬಲ್ಯ ಮೆರೆದರು.

ಲಕ್ಷ್ಯ ಸೇನ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 21-10, 21-18ರಿಂದ ಡೆನ್ಮಾರ್ಕ್‌ನ ಹ್ಯಾನ್ಸ್ ಕ್ರಿಸ್ಟಿಯನ್ ಸೋಲ್ಬರ್ಗ್ ವಿಟಿಂಗಸ್ ಅವರನ್ನು ಮಣಿಸಿದರು. ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಆಕರ್ಷಿ ಕಶ್ಯಪ್ 12-21, 11-21ರಿಂದ ಅಮೆರಿಕದ ಬಿವೆನ್ ಜಾಂಗ್ ಎದುರು ಎಡವಿದರು. ಪುರುಷರ ಸಿಂಗಲ್ಸ್‌ನಲ್ಲಿ ಸಮೀರ್ ವರ್ಮಾ, ಮಿಶ್ರ ಡಬಲ್ಸ್ ವಿಭಾಗದಲ್ಲಿ ಇಶಾನ್ ಭಟ್ನಾಗರ್– ತನಿಶಾ ಕ್ರಾಸ್ಟೊ ಜೋಡಿ ಸೋಲು ಕಂಡರು.

ಸುನಿಲ್ ಚೆಟ್ರಿ ಮಿಂಚು; ಭಾರತಕ್ಕೆ ಜಯ

ಕೋಲ್ಕತ್ತ (ಪಿಟಿಐ): ನಾಯಕ ಸುನಿಲ್ ಚೆಟ್ರಿ ತಂದಿತ್ತ ಎರಡು ಗೋಲುಗಳ ನೆರವಿನಿಂದ ಭಾರತ ತಂಡ ಏಷ್ಯನ್ ಕಪ್ ಫುಟ್‌ಬಾಲ್ ಅರ್ಹತಾ ಹಂತದ ಮೊದಲ ಪಂದ್ಯದಲ್ಲಿ ಕಾಂಬೋಡಿಯಾ ವಿರುದ್ಧ ಜಯ ಸಾಧಿಸಿತು.

ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಭಾರತ 2–0 ರಲ್ಲಿ ಗೆದ್ದಿತು. ಚೆಟ್ರಿ ಅವರು 13 ಹಾಗೂ 59ನೇ ನಿಮಿಷಗಳಲ್ಲಿ ಗೋಲು ತಂದಿತ್ತರು. 127ನೇ ಪಂದ್ಯ ಆಡಿದ ಚೆಟ್ರಿ, ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ತಮ್ಮ ಗೋಲುಗಳ ಸಂಖ್ಯೆಯನ್ನು 82ಕ್ಕೆ ಹೆಚ್ಚಿಸಿಕೊಂಡರು. ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ (117) ಮತ್ತು ಅರ್ಜೆಂಟೀನದ ಲಯೊನೆಲ್ ಮೆಸ್ಸಿ (86) ಬಳಿಕ 3ನೇ ಸ್ಥಾನದಲ್ಲಿ ಚೆಟ್ರಿ ಇದ್ದಾರೆ.

ಕೊಠಡಿ ಹಂಚಿಕೊಳ್ಳುವಂತೆ ಬಲವಂತ; ಸೈಕ್ಲಿಸ್ಟ್ ಆರೋಪ

ಸೈಕ್ಲಿಂಗ್ ಕೋಚ್ ಒಪ್ಪಂದ ರದ್ದು

ನವದೆಹಲಿ (ಪಿಟಿಐ): ಭಾರತ ಸೈಕ್ಲಿಂಗ್ ತಂಡದ ಮುಖ್ಯ ಕೋಚ್ ಆರ್.ಕೆ.ಶರ್ಮ ಅವರೊಂದಿಗಿನ ಒಪ್ಪಂದವನ್ನು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಬುಧವಾರ ರದ್ದುಗೊಳಿಸಿದೆ.

ಸ್ಲೊವೇನಿಯದಲ್ಲಿ ಭಾರತ ತಂಡದ ತರಬೇತಿ ಶಿಬಿರದ ವೇಳೆ ಶರ್ಮ ಅವರು 'ಅನುಚಿತ ವರ್ತನೆ' ತೋರಿದ್ದಾರೆ ಎಂದು ಮಹಿಳಾ ಸೈಕ್ಲಿಸ್ಟ್ ಆರೋಪಿಸಿದ್ದರು. ಆ ಬಗ್ಗೆ ತನಿಖೆ ನಡೆಸಲು ಸಾಯ್ ಸಮಿತಿಯನ್ನು ನೇಮಕ ಮಾಡಿತ್ತು. ತನಿಖಾ ಸಮಿತಿಯ ಪ್ರಾಥಮಿಕ ವರದಿ ಆಧಾರದಲ್ಲಿ ಈ ನಿರ್ಧಾರ ತೆಗೆದುಕೊಂಡಿದೆ.

'ಸೈಕ್ಲಿಸ್ಟ್ ನೀಡಿದ್ದ ದೂರಿನ ಬಗ್ಗೆ ವಿಚಾರಣೆಗೆ ತನಿಖಾ ಸಮಿತಿ ನೇಮಕ ಮಾಡಲಾಗಿತ್ತು. ಸೈಕ್ಲಿಸ್ಟ್ ಮಾಡಿರುವ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿವೆ. ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾದ ಶಿಫಾರಸಿನಂತೆ ಕೋಚ್ ಜತೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಒಪ್ಪಂದವನ್ನು ತಕ್ಷಣದಿಂದಲೇ ರದ್ದುಗೊಳಿಸಲಾಗಿದೆ' ಎಂದು ಸಾಯ್ ಪ್ರಕಟಣೆ ತಿಳಿಸಿದೆ.

'ಹೋಟೆಲ್‌ನ ಒಂದು ಕೊಠಡಿಯಲ್ಲಿ ಇಬ್ಬರ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಕೊಠಡಿಯನ್ನು ನನ್ನೊಂದಿಗೆ ಹಂಚಿಕೊಳ್ಳುವಂತೆ ಕೋಚ್ ಬಲವಂತ ಮಾಡಿದ್ದರು. ಇಲ್ಲದಿದ್ದರೆ ತಂಡದಿಂದ ಕೈಬಿಡುವುದಾಗಿ ಬೆದರಿಕೆ ಹಾಕಿದ್ದರು' ಎಂದು ಸೈಕ್ಲಿಸ್ಟ್ ತಮ್ಮ ದೂರಿನಲ್ಲಿ ತಿಳಿಸಿದ್ದರು.

ತಂಡ ವಾಪಸ್: ಸ್ಲೊವೇನಿಯದಲ್ಲಿ ತರಬೇತಿಯಲ್ಲಿ ಪಾಲ್ಗೊಂಡಿದ್ದ ಭಾರತ ಸೈಕ್ಲಿಸ್ಟ್‌ಗಳ ಇಡೀ ತಂಡವನ್ನು ಸಾಯ್ ವಾಪಸ್ ಕರೆಸಿಕೊಂಡಿದೆ. ಕೋಚ್ ವಿರುದ್ಧ ಆರೋಪ ಮಾಡಿದ್ದ ಸೈಕ್ಲಿಸ್ಟ್‌ಅನ್ನು ಈ ಹಿಂದೆಯೇ ವಾಪಸ್ ಕರೆಸಿಕೊಳ್ಳಲಾಗಿತ್ತು.

ತರಬೇತಿ ಶಿಬಿರ ಮತ್ತು ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಭಾರತ ತಂಡ ಮೇ 15 ರಂದು ಸ್ಲೊವೇನಿಯಕ್ಕೆ ತೆರಳಿತ್ತು. ನಿಗದಿತ ವೇಳಾಪಟ್ಟಿಯಂತೆ ಜೂನ್ 14 ರಂದು ವಾಪಸಾಗಬೇಕಿತ್ತು.

ಖೇಲೊ ಇಂಡಿಯಾ: ದಾಖಲೆ ಬರೆದ ರಾಜ್ಯದ ಈಜುಪಟುಗಳು

ಬೆಂಗಳೂರು: ಈಜುಕೊಳದಲ್ಲಿ ಮಿಂಚಿದ ಕರ್ನಾಟಕದ ಅನೀಶ್ ಗೌಡ, ಹಷಿಕಾ ರಾಮಚಂದ್ರ ಮತ್ತು ನೀನಾ ವೆಂಕಟೇಶ್ ಅವರು ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಹರಿಯಾಣದ ಪಂಚಕುಲಾದಲ್ಲಿ ನಡೆಯುತ್ತಿರುವ ಕೂಟದ ಬಾಲಕರ 200 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ 1 ನಿಮಿಷ 53.17 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಈ ವಿಭಾಗದಲ್ಲಿ ಸಂಭವ್ ಕಂಚು ಗೆದ್ದರು. ಹಷಿಕಾ (2 ನಿ. 7.84) ಬಾಲಕಿಯರ 200 ಮೀ. ವಿಭಾಗದಲ್ಲಿ ಮತ್ತು ನೀನಾ (28.50 ಸೆ.) 50 ಮೀ. ಬಟರ್‌ಫ್ಲೈ ವಿಭಾಗದಲ್ಲಿ ದಾಖಲೆ ಬರೆದರು. ಬಾಲಕಿಯರ 100 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಎಸ್. ಲಾಕ್ಷ್ಯಾ ಚಿನ್ನ, ಸಾನ್ವಿ ರಾವ್ ಬೆಳ್ಳಿ ಮತ್ತು ಲಿನೇಶಾ ಎ.ಕೆ. ಕಂಚು ಗೆದ್ದರು. ಬಾಲಕರ 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ವಿದಿತ್ ಶಂಕರ್ ಕಂಚು, ಬಾಲಕಿಯರ 800 ಮೀ. ಫ್ರೀಸ್ಟೈಲ್‌ನಲ್ಲಿ ಶಿರಿನ್ ಕಂಚು ಗೆದ್ದರು.

ಉನ್ನತಿ ಅಯ್ಯಪ್ಪ ಬಾಲಕಿಯರ 100 ಮೀಟರ್ಸ್ ಹರ್ಡಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಅವರು 14 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಬಾಲಕಿಯರ ಹೈಜಂಪ್‌ನಲ್ಲಿ ಸಿಂಚನಾ ಎಂ.ಎಸ್. (1.73 ಮೀ.) ಮತ್ತು ಪಾವನಾ ನಾಗರಾಜ್ (1.70 ಮೀ.) ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಕೊರಳೊಡ್ಡಿದರು. ಬಾಲಕಿಯರ ಜಾವೆಲಿನ್ ಥ್ರೋನಲ್ಲಿ ರಮಶ್ರೀ ಜೈನ್ (51.37 ಮೀ.) ಬೆಳ್ಳಿ ಜಯಿಸಿದರು. ಬಾಲಕರ ಟ್ರಿಪಲ್ ಜಂಪ್‌ನಲ್ಲಿ ಅಖಿಲೇಶ್ (15.24 ಮೀ.) ಬೆಳ್ಳಿ ತಮ್ಮದಾಗಿಸಿಕೊಂಡರು.

ಸೈಮನ್ ಕೋಚ್

ಬೆಂಗಳೂರು: ಇಂಗ್ಲೆಂಡ್‌ನ ಮಾಜಿ ಫುಟ್‌ಬಾಲ್ ಆಟಗಾರ ಸೈಮನ್ ಗ್ರೇಸನ್ ಅವರು ಬೆಂಗಳೂರು ಎಫ್‌ಸಿ ತಂಡದ ನೂತನ ಕೋಚ್ ಆಗಿ ನೇಮಕಗೊಂಡಿದ್ದಾರೆ. 2022–23ರ ಇಂಡಿಯನ್ ಸೂಪರ್ ಲೀಗ್ ಋತುವಿನ ಆರಂಭಕ್ಕೆ ಮುನ್ನ ಈ ನೇಮಕ ಆಗಿದೆ. ಎರಡು ವರ್ಷಗಳ ಅವಧಿಗೆ ಅವರೊಂದಿಗೆ ಒಪ್ಪಂದ ನಡೆದಿದೆ.

ಎರಡು ದಶಕಗಳ ವೃತ್ತಿ ಜೀವನಕ್ಕೆ ತೆರೆ ಎಳೆದ ಭಾರತ ತಂಡದ ನಾಯಕಿ

ಕ್ರಿಕೆಟ್ 'ರಾಣಿ' ಮಿಥಾಲಿ ರಾಜ್

ನವದೆಹಲಿ (ಪಿಟಿಐ): ಮಹಿಳಾ ಕ್ರಿಕೆಟ್ ಕಂಡಂತಹ ಶ್ರೇಷ್ಠ ಆಟಗಾರ್ತಿಯರಲ್ಲಿ ಒಬ್ಬರಾದ ಮಿಥಾಲಿ ರಾಜ್, ಅಂತರರಾಷ್ಟ್ರೀಯ ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ಬುಧವಾರ ನಿವೃತ್ತಿ ಪ್ರಕಟಿಸಿದರು. ಇದರೊಂದಿಗೆ ಎರಡು ದಶಕಗಳಿಗೂ ಹೆಚ್ಚು ಕಾಲ ಭಾರತದ ಮಹಿಳಾ ಕ್ರಿಕೆಟ್‌ನಲ್ಲಿ ಪ್ರಜ್ವಲಿಸಿದ ನಕ್ಷತ್ರವೊಂದು ತೆರೆಮರೆಗೆ ಸರಿದಂತಾಗಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನ ಎಲ್ಲ ಮಾದರಿಗಳಲ್ಲಿ ಒಟ್ಟಾರೆಯಾಗಿ ಅತಿಹೆಚ್ಚು ರನ್‌ಗಳನ್ನು ಕಲೆಹಾಕಿದ ಬ್ಯಾಟರ್ ಎಂಬ ದಾಖಲೆಯೂ ಸೇರಿದಂತೆ, ಹಲವು ಪ್ರಥಮಗಳನ್ನು ತಮ್ಮ ಹೆಸರಿನಲ್ಲಿ ಬರೆಯಿಸಿಕೊಂಡಿರುವ ಮಿಥಾಲಿ ಅವರು 'ಟ್ವೀಟ್' ಮೂಲಕ ತಮ್ಮ ನಿವೃತ್ತಿ ನಿರ್ಧಾರ ತಿಳಿಸಿದ್ದಾರೆ.

ಆಕ್ರಮಣ ಮತ್ತು ರಕ್ಷಣಾತ್ಮಕ ಆಟವನ್ನು ಮೈಗೂಡಿಸಿಕೊಂಡು ಇನಿಂಗ್ಸ್ ಕಟ್ಟುತ್ತಿದ್ದ ಮಿಥಾಲಿ, ಭಾರತದ ಹಲವಾರು ಗೆಲುವುಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸುದೀರ್ಘ ವೃತ್ತಿಜೀವನದಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದ್ದರು. ಹಲವು ಮಧುರ ನೆನಪುಗಳನ್ನು ಕಟ್ಟಿಕೊಂಡು ಅವರು ಇದೀಗ ವೃತ್ತಿಜೀವನಕ್ಕೆ ತೆರೆಎಳೆದಿದ್ದಾರೆ.

'ಕಳೆದ ಹಲವು ವರ್ಷಗಳಿಂದ ನನಗೆ ಪ್ರೀತಿ ಹಾಗೂ ಬೆಂಬಲ ನೀಡಿದ ನಿಮಗೆಲ್ಲರಿಗೂ ಅನಂತ ಧನ್ಯವಾದಗಳು. ನಿಮ್ಮೆಲ್ಲರ ಹಾರೈಕೆ ಹಾಗೂ ಬೆಂಬಲದೊಂದಿಗೆ ನಾನು ಎರಡನೇ ಇನಿಂಗ್ಸ್‌ನತ್ತ ಮುಖ ಮಾಡುತ್ತಿದ್ದೇನೆ' ಎಂದು ಮಿಥಾಲಿ ಹೇಳಿದ್ದಾರೆ.

> **ಭಾರತದ ಕ್ರಿಕೆಟ್‌ಗೆ ನಿಮ್ಮ ಕೊಡುಗೆ ಅಪಾರ. ಶ್ರೀಮಂತ ಪರಂಪರೆಯೊಂದನ್ನು ನೀವು ಬಿಟ್ಟು ಹೋಗುತ್ತಿದ್ದೀರಿ. ನಿಮಗೆ ಅಭಿನಂದನೆಗಳು. ಜೀವನದ ಹೊಸ ಇನಿಂಗ್ಸ್‌ಗೆ ಶುಭವಾಗಲಿ**
> ಬಿಸಿಸಿಐ

> **ಕ್ರಿಕೆಟ್‌ನಿಂದ ನಿವೃತ್ತಿಯಾಗಲು ಇದು ಸೂಕ್ತ ಸಮಯವೆಂದು ನನಗನಿಸುತ್ತಿದೆ. ಪ್ರತಿಭಾನ್ವಿತ ಆಟಗಾರ್ತಿಯನ್ನೊಳಗೊಂಡಿರುವ ಭಾರತ ಮಹಿಳಾ ಕ್ರಿಕೆಟ್ ತಂಡದ ಭವಿಷ್ಯ ಉಜ್ವಲವಾಗಿದೆ.**
> ಮಿಥಾಲಿ ರಾಜ್

ಮಿಥಾಲಿ ರಾಜ್– ಪಿಟಿಐ ಚಿತ್ರ

39 ವರ್ಷದ ಮಿಥಾಲಿ 232 ಏಕದಿನ ಮತ್ತು 89 ಟ್ವೆಂಟಿ–20 ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿದ್ದಾರೆ. ಸುದೀರ್ಘ ವೃತ್ತಿಜೀವನದಲ್ಲಿ ಅವರಿಗೆ 12 ಟೆಸ್ಟ್ ಪಂದ್ಯಗಳನ್ನು ಮಾತ್ರ ಆಡುವ ಅವಕಾಶ ದೊರೆತಿದೆ. ಆದರೆ ಟೆಸ್ಟ್‌ನಲ್ಲಿ ದ್ವಿಶತಕ ಗಳಿಸಿದ ಭಾರತದ ಏಕೈಕ ಆಟಗಾರ್ತಿ ಎಂಬ ಹಿರಿಮೆ ಒಲಿದಿದೆ.

ತಂಡದ ನಾಯಕಿಯಾಗಿಯೂ ಛಾಪು ಮೂಡಿಸಿದ್ದ ಮಿಥಾಲಿ, ಏಕದಿನ ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ತಂಡವನ್ನು 2005 ಮತ್ತು 2017ರಲ್ಲಿ ಫೈನಲ್‌ವರೆಗೂ ಮುನ್ನಡೆಸಿದ್ದರು. 2017ರ ವಿಶ್ವಕಪ್‌ನಲ್ಲಿ ಮಿಥಾಲಿ ನಾಯಕತ್ವದ ತಂಡ ನೀಡಿದ್ದ ಪ್ರದರ್ಶನ, ಭಾರತದ ಮಹಿಳಾ ಕ್ರಿಕೆಟ್‌ನ ದಿಶೆಯನ್ನೇ ಬದಲಿಸಿತ್ತು.

ತಮ್ಮ 16ನೇ ವಯಸ್ಸಿನಲ್ಲಿ ಮೊದಲ ಬಾರಿಗೆ ಭಾರತ ತಂಡದ ಪರವಾಗಿ ಕಣಕ್ಕಿಳಿದಿದ್ದರು. 1999ರಲ್ಲಿ ಐರ್ಲೆಂಡ್ ವಿರುದ್ಧದ ಏಕದಿನ ಪಂದ್ಯದೊಂದಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಜೀವನ ಆರಂಭವಾಗಿತ್ತು. ಈ ವರ್ಷ ಮಾರ್ಚ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಹಣಾಹಣಿಯೇ ಅವರ ಕೊನೆಯ ಪಂದ್ಯ. ಆ ಪಂದ್ಯದಲ್ಲಿ 68 ರನ್ ಗಳಿಸಿದ್ದರು. ಟೆಸ್ಟ್, ಏಕದಿನ ಮತ್ತು ಟ್ವೆಂಟಿ–20 ಕ್ರಿಕೆಟ್‌ನಲ್ಲಿ ಒಟ್ಟಾರೆ 10,868 ರನ್‌ಗಳನ್ನು ಮಿಥಾಲಿ ಕಲೆಹಾಕಿದ್ದಾರೆ. ಮಹಿಳಾ ಕ್ರಿಕೆಟ್‌ನಲ್ಲಿ 10 ಸಾವಿರಕ್ಕಿಂತ ಅಧಿಕ ರನ್‌ಗಳನ್ನು ಕಲೆಹಾಕಿರುವುದು ಮಿಥಾಲಿ ಮತ್ತು ಇಂಗ್ಲೆಂಡ್‌ನ ಚಾರ್ಲೊಟ್ ಎಡ್ವರ್ಡ್ಸ್ (10,273) ಮಾತ್ರ.

2019 ರಲ್ಲೇ ಅವರು ಟಿ–20 ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

'ಕಳೆದ 23 ವರ್ಷಗಳು ನನ್ನ ಜೀವನದಲ್ಲಿ ಸವಾಲು, ಸಂತೃಪ್ತಿ ಮತ್ತು ಸಂಭ್ರಮ ತುಂಬಿದ ವಸಂತಗಳಾಗಿದ್ದವು. ನನ್ನ ಸುದೀರ್ಘ ಪಯಣದಲ್ಲಿ ಸಾಕಷ್ಟು ಏಳು ಬೀಳುಗಳನ್ನು ಕಂಡಿದ್ದೇನೆ. ಎಲ್ಲ ಪಯಣಗಳಿಗೂ ಕೊನೆ ಎಂಬುದಿದೆ. ಅದೇ ರೀತಿ ನನ್ನ ಕ್ರಿಕೆಟ್ ಪಯಣ ಇಲ್ಲಿಗೆ ಕೊನೆಯಾಗಿದೆ' ಎಂದು ಭಾವುಕರಾಗಿ ಬರೆದುಕೊಂಡಿದ್ದಾರೆ.

ನೃತ್ಯದಿಂದ ಕ್ರಿಕೆಟ್‌ನತ್ತ

ಚಿಕ್ಕ ವಯಸ್ಸಿನಲ್ಲಿ ಮಿಥಾಲಿಗೆ ನೃತ್ಯದಲ್ಲಿ ಆಸಕ್ತಿಯಿತ್ತು. ಬಾಲಕಿಯಾಗಿದ್ದಾಗ ಮತ್ತು ಹದಿಹರೆಯದಲ್ಲಿ ನೃತ್ಯ ಅಭ್ಯಾಸ ಮಾಡುತ್ತಿದ್ದರು. ಭರತನಾಟ್ಯದಲ್ಲಿ ಹೆಸರು ಗಳಿಸಬೇಕೆಂಬುದು ಅವರ ಬಯಕೆಯಾಗಿತ್ತು. ಆದರೆ ಅನಿರೀಕ್ಷಿತವಾಗಿ ಕ್ರಿಕೆಟ್ ಕ್ಷೇತ್ರಕ್ಕೆ ಕಾಲಿಟ್ಟು, ಎತ್ತರದ ಸಾಧನೆ ಮಾಡಿದರು.

ಸಾಧನೆ...

- ಆರು ಏಕದಿನ ವಿಶ್ವಕಪ್ ಟೂರ್ನಿಗಳಲ್ಲಿ ಆಡಿದ ಸಾಧನೆ
- ಏಕದಿನ ಕ್ರಿಕೆಟ್‌ನಲ್ಲಿ ಸತತ ಏಳು ಅರ್ಧಶತಕ ಗಳಿಸಿದ ವಿಶ್ವದಾಖಲೆ
- ಅತಿಹೆಚ್ಚು ಏಕದಿನ ಪಂದ್ಯಗಳಲ್ಲಿ (155) ತಂಡ ಮುನ್ನಡೆಸಿದ ಶ್ರೇಯ
- ಏಕದಿನ ಕ್ರಿಕೆಟ್‌ನಲ್ಲಿ ಶತಕ ಗಳಿಸಿದ ಅತಿಕಿರಿಯ ಆಟಗಾರ್ತಿ (16 ವರ್ಷ, 205 ದಿನ)
- ಟೆಸ್ಟ್‌ನಲ್ಲಿ ದ್ವಿಶತಕ ಗಳಿಸಿದ ಅತಿಕಿರಿಯ ಆಟಗಾರ್ತಿ (19 ವರ್ಷ, 254 ದಿನ)
- ಏಕದಿನ ಕ್ರಿಕೆಟ್‌ನಲ್ಲಿ ಅತ್ಯಧಿಕ ಅರ್ಧಶತಕ (64)

ದಾಖಲೆಯ ಹೊಸ್ತಿಲಲ್ಲಿ ಭಾರತ

ಇಂದಿನಿಂದ ಟಿ20: ಪಂತ್ ಬಳಗಕ್ಕೆ ದಕ್ಷಿಣ ಆಫ್ರಿಕಾ ಸವಾಲು

ನವದೆಹಲಿ (ಪಿಟಿಐ): ಭಾರತ ತಂಡವು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಹೊಸದೊಂದು ದಾಖಲೆಯ ಹೊಸ್ತಿಲಲ್ಲಿ ನಿಂತಿದೆ.

ಚುಟುಕು ಮಾದರಿಯ ಕ್ರಿಕೆಟ್‌ನಲ್ಲಿ ಭಾರತವು ಸತತ 12 ಪಂದ್ಯಗಳನ್ನು ಗೆದ್ದಿದೆ. ಗುರುವಾರ ದಕ್ಷಿಣ ಆಫ್ರಿಕಾ ಎದುರು ಆರಂಭವಾಗಲಿರುವ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಜಯಿಸಿದರೆ, ಸತತ ಸಾರ್ವಕಾಲಿಕ ದಾಖಲೆ ನಿರ್ಮಾಣವಾಗುವುದು. 13 ಪಂದ್ಯಗಳಲ್ಲಿ ಸತತ ಜಯಗಳಿಸಿದ ತಂಡವಾಗಲಿದೆ.

ಅಲ್ಲದೇ ಇದೇ ಅಕ್ಟೋಬರ್‌ನಲ್ಲಿ ಟಿ20 ವಿಶ್ವಕಪ್ ಟೂರ್ನಿ ನಡೆಯಲಿರುವುದರಿಂದ ಪೂರ್ವಾಭ್ಯಾಸದ ವೇದಿಕೆಯಾಗಿಯೂ ಈ ಸರಣಿ ಮಹತ್ವ ಪಡೆದುಕೊಂಡಿದೆ. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ವಿಶ್ರಾಂತಿ ಪಡೆದಿದ್ದಾರೆ. ಹಂಗಾಮಿ ನಾಯಕ ಕೆ.ಎಲ್. ರಾಹುಲ್ ಗಾಯಗೊಂಡು ಹೊರಬಿದ್ದ ಕಾರಣ ರಿಷಭ್ ಪಂತ್ ತಂಡವನ್ನು ಮುನ್ನಡೆಸುವರು. ಐಪಿಎಲ್‌ನಲ್ಲಿ ಆಡಿ ಬಂದಿರುವ ಯುವ ಆಟಗಾರರು ಮತ್ತು ಆರ್‌ಸಿಬಿಯಲ್ಲಿ ಮಿಂಚಿದ್ದ ದಿನೇಶ್ ಕಾರ್ತಿಕ್ ತಂಡದಲ್ಲಿದ್ದಾರೆ. ಈ ಬಳಗವನ್ನು ಸಮರ್ಥವಾಗಿ ದುಡಿಸಿಕೊಳ್ಳುವತ್ತ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಚಿತ್ತ ನೆಟ್ಟಿದ್ದಾರೆ.

ಐಪಿಎಲ್ ಚಾಂಪಿಯನ್ ಗುಜರಾತ್ ಟೈಟನ್ಸ್ ನಾಯಕ ಹಾರ್ದಿಕ್ ಪಾಂಡ್ಯ ತಂಡದಲ್ಲಿದ್ದಾರೆ. ಗಾಯಗೊಂಡಿರುವ ಆಲ್‌ರೌಂಡರ್ ರವೀಂದ್ರ ಜಡೇಜ ಅವರ ಸ್ಥಾನವನ್ನು ಹಾರ್ದಿಕ್ ತುಂಬುವ ನಿರೀಕ್ಷೆ ಇದೆ. ವೇಗಿ ಉಮ್ರಾನ್ ಮಲಿಕ್ ಪದಾರ್ಪಣೆ ಮಾಡುವ ನಿರೀಕ್ಷೆ ಇದೆ. ಸ್ಪಿನ್ ತಾರೆಯರಾದ ಯಜುವೇಂದ್ರ ಚಾಹಲ್, ರವಿ ಬಿಷ್ಣೋಯಿ ಮತ್ತು ಅಕ್ಷರ್ ಪಟೇಲ್ ಅವರಲ್ಲಿ ಒಬ್ಬರಿಗೆ ಆಡುವ ಬಳಗದಲ್ಲಿ ಸ್ಥಾನ ಸಿಗಬಹುದು.

ತೆಂಬಾ ಬವುಮಾ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡಕ್ಕೂ ಇದು ಪ್ರಮುಖ ಸರಣಿಯಾಗಿದೆ. ಐಪಿಎಲ್‌ನಲ್ಲಿ ಮಿಂಚಿದ್ದ ಕ್ವಿಂಟನ್ ಡಿಕಾಕ್, ಡೇವಿಡ್ ಮಿಲ್ಲರ್, ಮರ್ಕರಂ, ಕಗಿಸೊ ರಬಾಡ ಅವರು ತಂಡದ ಶಕ್ತಿಯಾಗಿದ್ದಾರೆ. ಐದು ಪಂದ್ಯಗಳ ಸರಣಿಯಲ್ಲಿ ಜಯಿಸುವ ಛಲದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಹಾರ್ದಿಕ್ ಪಾಂಡ್ಯ ಮತ್ತು ರಿಷಭ್ ಪಂತ್–ಪಿಟಿಐ ಚಿತ್ರ

ಬಲಾಬಲ

ಪಂದ್ಯಗಳು 17	
ಭಾರತ ಜಯ	9
ದ.ಆಫ್ರಿಕಾ ಜಯ	6
ಫಲಿತಾಂಶವಿಲ್ಲ	2

ಮನೀಷ್ ಪಾಂಡೆ ಪಡೆ ಕನಸು ಭಗ್ನ

ರಣಜಿ ಟ್ರೋಫಿ: ಸೆಮಿಗೆ ಉತ್ತರಪ್ರದೇಶ ಲಗ್ಗೆ; ಕರಣ್ ಅಮೋಘ ಬ್ಯಾಟಿಂಗ್

• ಗಿರೀಶ ದೊಡ್ಡಮನಿ

ಬೆಂಗಳೂರು: ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವ ಕರ್ನಾಟಕದ ತಂಡದ ಕನಸು ತವರಿನಂಗಳದಲ್ಲಿಯೇ ಕಮರಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ತನ್ನ ಮೊದಲ ಇನಿಂಗ್ಸ್‌ನ ಬ್ಯಾಟಿಂಗ್‌ನಲ್ಲಿ ಮಾಡಿದ್ದ ತಪ್ಪನ್ನು ಎರಡನೇ ಇನಿಂಗ್ಸ್‌ನಲ್ಲಿ ತಿದ್ದಿಕೊಂಡ ಉತ್ತರಪ್ರದೇಶ 5 ವಿಕೆಟ್‌ಗಳಿಂದ ಜಯ ಸಾಧಿಸಿ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು. ನಾಯಕ ಕರಣ್ ಶರ್ಮಾ (ಅಜೇಯ 93) ಗೆಲುವಿನ ರೂವಾರಿಯಾದರು.

ಆದರೆ, ಮೊದಲ ಇನಿಂಗ್ಸ್‌ನಲ್ಲಿ 98 ರನ್‌ಗಳ ಮಹತ್ವದ ಮುನ್ನಡೆ ಗಳಿಸಿದ್ದ ಮನೀಷ್ ಪಾಂಡೆ ಬಳಗವು ಎರಡನೇ ಇನಿಂಗ್ಸ್‌ನಲ್ಲಿ ಮಾಡಿದ ಕಳಪೆ ಬ್ಯಾಟಿಂಗ್‌ಗೆ ದಂಡ ತೆತ್ತಿತು. ಎರಡನೇ ಇನಿಂಗ್ಸ್‌ನಲ್ಲಿ ಕೇವಲ 114 ರನ್ ಗಳಿಸಿತು. ಇದರಿಂದಾಗಿ 213 ರನ್‌ಗಳ ಗುರಿ ಬೆನ್ನಟ್ಟಿದ ಉತ್ತರಪ್ರದೇಶ ಶಿಸ್ತು, ತಾಳ್ಮೆ ಮತ್ತು ಯೋಜನಾಬದ್ಧ ಬ್ಯಾಟಿಂಗ್ ಮೂಲಕ 65.2 ಓವರ್‌ಗಳಲ್ಲಿ ಗೆದ್ದಿತು.

ಭಾರತ ತಂಡದಲ್ಲಿ ಆಡಿರುವ ಅನುಭವಿ ಮಯಂಕ್ ಅಗರವಾಲ್, ಮನೀಷ್, ಕರುಣ್ ನಾಯರ್ ಸೇರಿದಂತೆ ಪ್ರಮುಖ ಬ್ಯಾಟರ್‌ಗಳ ವೈಫಲ್ಯ ತಂಡವನ್ನು ಕಾಡಿತು.

ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ253 ರನ್‌ಗಳಿಸಿತ್ತು ಮತ್ತು ಉತ್ತರಪ್ರದೇಶ ತಂಡವನ್ನು 155 ರನ್‌ಗಳಿಗೆ ಕಟ್ಟಿಹಾಕಿತ್ತು. ವೇಗಿಗಳಾದ ರೋನಿತ್ ಮೋರೆ, ವಿದ್ವತ್ ಕಾವೇರಪ್ಪ ಮತ್ತು ವೈಶಾಖ್ ವಿಜಯಕುಮಾರ್ ಅವರ ಬೌಲಿಂಗ್‌ಗೆ ಉತ್ತರಪ್ರದೇಶ ಕುಸಿದಿತ್ತು. ಎರಡನೇ ಇನಿಂಗ್ಸ್‌ನಲ್ಲಿಯೂ ವೈಶಾಖ್ (47ಕ್ಕೆ3) ಕರ್ನಾಟಕಕ್ಕೆ ಉತ್ತಮ ಆರಂಭವನ್ನೇ ನೀಡಿದರು. ಅದರಿಂದಾಗಿ ಎದುರಾಳಿ ತಂಡವು 96 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆದರೆ, ಛಲದ ಆಟವಾಡಿದ ಪ್ರಿಯಂ ಗರ್ಗ್ (52; 60ಎ, 4X6, 6X2), ಕರಣ್ ಹಾಗೂ ಕೊನೆಯಲ್ಲಿ ಪ್ರಿನ್ಸ್ ಯಾದವ್ (33; 73ಎ) ಕರ್ನಾಟಕದ ಬೌಲಿಂಗ್ ಪಡೆಯ ಪ್ರಯತ್ನಗಳನ್ನು ವಿಫಲಗೊಳಿಸಿದರು.

ಮಂಗಳವಾರ ದಿನದಾಟದ ಕೊನೆಗೆ ಕರ್ನಾಟಕವು ಎರಡನೇ ಇನಿಂಗ್ಸ್‌ನಲ್ಲಿ 8 ವಿಕೆಟ್‌ಗಳಿಗೆ 100 ರನ್ ಗಳಿಸಿತ್ತು. ಮೂರನೇ ದಿನದ ಬೆಳಿಗ್ಗೆ ಈ ಮೊತ್ತಕ್ಕೆ ಮತ್ತು 14 ರನ್ ಸೇರಿದಾಗ ಉಳಿದೆರಡು ವಿಕೆಟ್‌ಗಳು ಪತನವಾದವು. ಇನಿಂಗ್ಸ್ ಆರಂಭಿಸಿದ ಉತ್ತರಪ್ರದೇಶ ರನ್ ಗಳಿಸಲು ಗಡಿಬಿಡಿ ಮಾಡಲಿಲ್ಲ. ಊಟದ ವಿರಾಮಕ್ಕೆ 53 ರನ್ ಗಳಿಸಿತು. ಈ ಅವಧಿಯಲ್ಲಿ ಎರಡು ವಿಕೆಟ್ ಗಳಿಸಿದ್ದ ವೈಶಾಖ್ ವಿಜಯಕುಮಾರ್ ಭರವಸೆ ಮೂಡಿಸಿದ್ದರು. ಆದರೆ, ಚಹಾ ವಿರಾಮದ ಹೊತ್ತಿಗೆ ಚಿತ್ರಣ ಬದಲಾಗಿತ್ತು. ಆದರೆ ಪ್ರಿಯಂ ಮತ್ತು ಕರಣ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 59 ರನ್‌ಗಳನ್ನು ಪೇರಿಸಿದರು. ಆಫ್‌ಸ್ಪಿನ್ನರ್ ಗೌತಮ್ ಬೌಲಿಂಗ್‌ನಲ್ಲಿ ಪ್ರಿಯಂ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು. ರಿಂಕು ಸಿಂಗ್ ಮತ್ತು ಧ್ರುವ್ ಚಾಂದ್ ಅವರ ವಿಕೆಟ್‌ಗಳನ್ನು ವಿದ್ವತ್ ಮತ್ತು ವೈಶಾಖ್ ಗಳಿಸಿದರೂ ಕರಣ್ ಆಟಕ್ಕೆ ತಡೆಯೊಡ್ಡಲು ಸಾಧ್ಯವಾಗಲಿಲ್ಲ. ಅವರು ಪ್ರಿನ್ಸ್ ಅವರೊಂದಿಗೆ ಮುರಿಯದ ಆರನೇ ವಿಕೆಟ್ ಜತೆಯಾಟದಲ್ಲಿ 99 ರನ್‌ಗಳನ್ನು ಸೇರಿಸಿದರು.

ಉತ್ತರಪ್ರದೇಶಕ್ಕೆ ಮೊದಲ ಜಯ: ರಣಜಿ ಟ್ರೋಫಿ ಟೂರ್ನಿಯಲ್ಲಿ ಉತ್ತರಪ್ರದೇಶ ತಂಡವು ಮೊದಲ ಜಯ ಸಾಧಿಸಿತು. ಇದುವರೆಗೆ ಉಭಯ ತಂಡಗಳು 14 ಬಾರಿ ಮುಖಾಮುಖಿಯಾಗಿವೆ. ಅದರಲ್ಲಿ ಕರ್ನಾಟಕವು ನಾಲ್ಕು ಬಾರಿ ಜಯಿಸಿತ್ತು. ಒಂಬತ್ತು ಪಂದ್ಯಗಳು ಡ್ರಾ ಆಗಿದ್ದವು.

ಕರಣ್ ಶರ್ಮಾ ಬ್ಯಾಟಿಂಗ್– ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

'ಬ್ಯಾಟಿಂಗ್ ವೈಫಲ್ಯ ಸೋಲಿಗೆ ಕಾರಣ'

'ತಮ್ಮನ್ನೂ ಸೇರಿದಂತೆ ತಂಡದಲ್ಲಿರುವ ಅನುಭವಿ ಬ್ಯಾಟರ್‌ಗಳು ಚೆನ್ನಾಗಿ ಆಡದೇ ಇರುವುದು ಸೋಲಿಗೆ ಕಾರಣವಾಯಿತು. ಈ ಸೋಲಿನಿಂದ ಕಲಿಯುವುದು ಬಹಳಷ್ಟಿದೆ. ಎರಡನೇ ಇನಿಂಗ್ಸ್‌ನಲ್ಲಿ ಅವಸರ ಪಟ್ಟು ವಿಕೆಟ್ ಕಳೆದುಕೊಂಡೆವು. ಒಂಟಿ ರನ್ ಓಡುವ ಕೆಟ್ಟ ನಿರ್ಧಾರದಿಂದ ರನೌಟ್ ಆದೆ' ಎಂದು ಕರ್ನಾಟಕ ತಂಡದ ನಾಯಕ ಮನೀಷ್ ಪಾಂಡೆ ಪಂದ್ಯದ ನಂತರ ಹೇಳಿದರು.

ಶರತ್‌ಗೆ ಗಾಯ; ಅಂಪೈರ್ ಗೊಂದಲ

ಬುಧವಾರ ಬೆಳಿಗ್ಗೆ ಕರ್ನಾಟಕದ ವಿಕೆಟ್‌ಕೀಪರ್ ಶರತ್ ಶ್ರೀನಿವಾಸ್ ಅವರ ಕೈಗೆ ಚೆಂಡು ಬಡಿದು ಗಾಯವಾಯಿತು. ಬಲಗೈ ಬೆರಳಿನ ಮೂಳೆಮುರಿತಕ್ಕೊಳಗಾದ ಅವರು ಪೆವಿಲಿಯನ್‌ಗೆ ಮರಳಿದರು.

ಅವರ ಬದಲಿಗೆ ಬದಲೀ ವಿಕೆಟ್‌ಕೀಪರ್ ಬಿ.ಆರ್.ಶರತ್ ಕಣಕ್ಕಿಳಿದರು. ಆದರೆ, ಅಂಪೈರ್ ನಿತಿನ್ ಪಂಡಿತ್ ಮತ್ತು ಯಶವಂತ್ ಬರ್ಡೆ ಅವರು ಒಪ್ಪಲಿಲ್ಲ. 11ರ ತಂಡದಲ್ಲಿರುವವರೇ ಕೀಪಿಂಗ್ ಮಾಡಬೇಕು ಎಂದು ಸೂಚಿಸಿದರು. ಇದರಿಂದಾಗಿ ಮನೀಷ್ ಪಾಂಡೆ ಕೀಪಿಂಗ್ ಮಾಡಿದರು. ಎರಡು ಓವರ್‌ಗಳ ನಂತರ ಮತ್ತೆ ಬಿ.ಆರ್. ಶರತ್ ಅವರಿಗೇ ಕೀಪಿಂಗ್ ಮಾಡಲು ಅವಕಾಶ ನೀಡಲಾಯಿತು. ಬದಲೀ ಕೀಪರ್ ನಿಯಮದ ಕುರಿತ ಗೊಂದಲವೇ ಇದಕ್ಕೆ ಕಾರಣ ಎಂದು ಮೂಲಗಳು ತಿಳಿಸಿವೆ.

ಕರಣ್‌ಗೆ ನೆರವಾದ ರಾಹುಲ್ ಸಲಹೆಗಳು: ಉತ್ತರಪ್ರದೇಶ ತಂಡಕ್ಕೆ ಇದೇ ಮೊದಲ ಬಾರಿ ನಾಯಕತ್ವ ವಹಿಸಿರುವ 23 ವರ್ಷದ ಕರಣ್ ಶರ್ಮಾ ಕರ್ನಾಟಕ ಎದುರಿನ ರಣಜಿ ಕ್ವಾರ್ಟರ್‌ಫೈನಲ್‌ನಲ್ಲಿ ತಮ್ಮ ತಂಡದ ಜಯದ ರೂವಾರಿಯೂ ಆದರು. ಅಜೇಯ 93 ರನ್ ಗಳಿಸಿದ ಅವರ ಶಾಂತಚಿತ್ತ ಮತ್ತು ಏಕಾಗ್ರತೆಯ ಆಟ ಗಮನ ಸೆಳೆಯಿತು.

'ಐಪಿಎಲ್‌ನಲ್ಲಿ ಲಖನೌ ಸೂಪರ್‌ಜೈಂಟ್ಸ್‌ನಲ್ಲಿದ್ದಾಗ ಕೆ.ಎಲ್. ರಾಹುಲ್ ಅವರಿಂದ ಬಹಳಷ್ಟು ಅಂಶಗಳನ್ನು ಕಲಿತೆ. ಪಂದ್ಯಕ್ಕೂ ಮೊದಲು ಮಾಡಿಕೊಳ್ಳು ಸಿದ್ಧತೆ, ಪಂದ್ಯಕ್ಕೂ ಮುನ್ನ ಮತ್ತು ಪಂದ್ಯದ ವೇಳೆ ನಿರ್ಧಾರ ತೆಗೆದುಕೊಳ್ಳುವ ರೀತಿ ಮತ್ತು ಮಾನಸಿಕವಾಗಿ ಸದೃಢವಾಗಿರುವ ತಂತ್ರಗಳನ್ನು ಕಲಿತೆ. ರಣಜಿ ಟ್ರೋಫಿಯಲ್ಲಿ ತಂಡದ ನಾಯಕತ್ವ ವಹಿಸಲು ಅವೆಲ್ಲವೂ ನೆರವಾದವು' ಎಂದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್ ಕರ್ನಾಟಕ 253 (84 ಓವರ್‌ಗಳಲ್ಲಿ)
ಉತ್ತರಪ್ರದೇಶ 155 (37.3 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್
ಕರ್ನಾಟಕ 114 (39 ಓವರ್‌ಗಳಲ್ಲಿ)
ಶರತ್ ಔಟಾಗದೆ 23 (57ಎ, 4X2), ರೋನಿತ್ ಸಿ ಧ್ರುವ ಬಿ ಯಶ್ 0 (1ಎ), ವಿದ್ವತ್ ಸಿ ಸಮರ್ಥ್ ಬಿ ಯಶ್ 0 (7ಎ)
ಇತರೆ 20 (ಬೈ 8, ಲೆಗ್‌ಬೈ 9, ನೋಬಾಲ್ 3)
ವಿಕೆಟ್ ಪತನ: 9–105 (ರೋನಿತ್ ಮೋರೆ; 34.4), 10–114 (ವಿದ್ವತ್ ಕಾವೇರಪ್ಪ; 36.6)
ಬೌಲಿಂಗ್: ಯಶ್ ದಯಾಳ್ 9–0–35–2, ಅಂಕಿತ್ ರಜಪೂತ್ 8–2–15–2, ಪ್ರಿನ್ಸ್ ಯಾದವ್ 4–2–6–1, ಸೌರಭ್ ಕುಮಾರ್ 16–4–36–3, ಶಿವಂ ಮಾವಿ 2–0–5–1
ಉತ್ತರಪ್ರದೇಶ 5ಕ್ಕೆ213 (65.2 ಓವರ್‌ಗಳಲ್ಲಿ)
ಸಮರ್ಥ್ ಸಿ ಸಿದ್ಧಾರ್ಥ್ ಬಿ ವೈಶಾಖ್ 14 (44ಎ, 4X2), ಆರ್ಯನ್ ಸಿ (ಬದಲಿ) ಬಿ.ಆರ್. ಶರತ್ ಬಿ ವೈಶಾಖ್ 1 (21ಎ), ಪ್ರಿಯಂ ಸಿ ಶ್ರೇಯಸ್ ಬಿ ಗೌತಮ್ 52 (60ಎ, 4X6, 6X2), ಕರಣ್ ಅಜೇಯ 93 (163ಎ, 4X13, 6X1), ರಿಂಕು ಬಿ ವಿದ್ವತ್ 4 (7ಎ, 4X1), ಧ್ರುವ್ ಸಿ (ಬದಲಿ) ಬಿ.ಆರ್. ಶರತ್ ಬಿ ವೈಶಾಖ್ 9 (25ಎ, 4X1), ಪ್ರಿನ್ಸ್ ಔಟಾಗದೆ 33 (73ಎ, 4X3, 6X1)
ಇತರೆ 7 (ಬೈ 6, ನೋಬಾಲ್ 1)
ವಿಕೆಟ್ ಪತನ: 1–15 (ಆರ್ಯನ್ ಜುಯಾಲ್;8.2), 2–28 (ಸಮರ್ಥ್ ಸಿಂಗ್; 14.5), 3–87 (ಪ್ರಿಯಂ ಗರ್ಗ್; 28.6), 4–96 (ರಿಂಕು ಸಿಂಗ್;31.2), 5–114 (ಧ್ರುವ ಜುರೇಲ್; 41.5)
ಬೌಲಿಂಗ್: ವೈಶಾಖ್ ವಿಜಯಕುಮಾರ್ 17–5–47–3, ರೋನಿತ್ 10–2–27–0, ವಿದ್ವತ್ 13.2–3–46–1, ಶ್ರೇಯಸ್ 8–0–38–0, ಗೌತಮ್ 17–3–49–1.

ಫಲಿತಾಂಶ: ಉತ್ತರಪ್ರದೇಶ ತಂಡಕ್ಕೆ 5 ವಿಕೆಟ್‌ಗಳ ಜಯ. ಸೆಮಿಫೈನಲ್‌ಗೆ ಪ್ರವೇಶ.

ಹರ್ಮನ್‌ಪ್ರೀತ್ ಕೌರ್ ನಾಯಕಿ

ನವದೆಹಲಿ (ಪಿಟಿಐ): ಶ್ರೀಲಂಕಾ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಗೆ ಭಾರತ ಮಹಿಳಾ ತಂಡವನ್ನು ಹರ್ಮನ್ ಪ್ರೀತ್ ಕೌರ್ ಮುನ್ನಡೆಸಲಿದ್ದಾರೆ.

ಮಿಥಾಲಿ ರಾಜ್ ಅವರು ನಿವೃತ್ತಿ ನಿರ್ಧಾರ ಪ್ರಕಟಿಸಿದ್ದರಿಂದ ಹರ್ಮನ್‌ಪ್ರೀತ್‌ಗೆ ಈ ಜವಾಬ್ದಾರಿ ಲಭಿಸಿದೆ. ಇದೀಗ ಏಕದಿನ ತಂಡಕ್ಕೂ ನೇತೃತ್ವ ವಹಿಸಲಿದ್ದಾರೆ.

ವೇಗದ ಬೌಲರ್ ಜೂಲನ್ ಗೋಸ್ವಾಮಿ ಅವರನ್ನು ತಂಡದಿಂದ ಕೈಬಿಡಲಾಗಿದೆ.

ಏಕದಿನ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಯಸ್ತಿಕಾ ಭಾಟಿಯಾ (ವಿಕೆಟ್ ಕೀಪರ್), ಎಸ್.ಮೇಘನಾ, ದೀಪ್ತಿ ಶರ್ಮ, ಪೂನಂ ಯಾದವ್, ರಾಜೇಶ್ವರಿ ಗಾಯಕ್ವಾಡ್, ಸಿಮ್ರಾನ್ ಬಹಾದೂರ್, ರಿಚಾ ಘೋಷ್, ಪೂಜಾ ವಸ್ತ್ರಕರ್, ಮೇಘನಾ ಸಿಂಗ್, ರೇಣುಕಾ ಸಿಂಗ್, ತಾನ್ಯಾ ಭಾಟಿಯಾ, ಹರ್ಲೀನ್ ಡಿಯೊಲ್.

ದೇಶಿ ಕ್ರಿಕೆಟ್‌ಪ್ರೇಮಿಗಳಿಗೆ ನಿರಾಶೆ

ಆಲೂರಿನ ಕ್ರೀಡಾಂಗಣದಲ್ಲಿ ಕಳೆದ ಮೂರು ದಿನಗಳಿಂದ ಕರ್ನಾಟಕ ತಂಡವನ್ನು ಅವಿರತವಾಗಿ ಹುರಿದುಂಬಿಸಿದ ಕ್ರಿಕೆಟ್‌ಪ್ರೇಮಿಗಳ ದಂಡು ಬುಧವಾರ ಸಂಜೆ ನಿರಾಶೆಗೊಂಡಿತು. ಪಂದ್ಯಗಳನ್ನು ವೀಕ್ಷಿಸಲು ಮೈದಾನದೊಳಗೆ ಪ್ರೇಕ್ಷಕರನ್ನು ಆಯೋಜಕರು ಬಿಟ್ಟಿರಲಿಲ್ಲ. ಆದರೂ 25–30 ಜನರು ಕನ್ನಡ ಧ್ವಜ ಹಿಡಿದು ಕಂಪೌಂಡ್ ಏರಿ ಇಡೀ ದಿನ ಕರ್ನಾಟಕ ತಂಡದ ಪರ ಘೋಷಣೆ ಕೂಗುತ್ತ, ತಮ್ಮ ನೆಚ್ಚಿನ ಆಟಗಾರರ ಹೆಸರು ಕೂಗಿದ್ದರು. 3ನೇ ದಿನದಾಟದ ಊಟದ ವಿರಾಮದವರೆಗೂ ಉತ್ಸಾಹದಿಂದ ಇದ್ದರು. ರಾಜ್ಯ ತಂಡ ಸೋಲಿನತ್ತ ಸಾಗುತ್ತಿದ್ದಂತೆ ಅಭಿಮಾನಿಗಳು ಹತಾಶರಾಗಿ ಕುಳಿತರು.

ಒಂದೇ ಇನಿಂಗ್ಸ್; 9 ಅರ್ಧಶತಕ ದಾಖಲೆ

ಬೆಂಗಳೂರು: ರಣಜಿ ಟ್ರೋಫಿ ಟೂರ್ನಿ ಪಂದ್ಯದ ಒಂದೇ ಇನಿಂಗ್ಸ್‌ನಲ್ಲಿ ಒಂಬತ್ತು ಬ್ಯಾಟರ್‌ಗಳು ಅರ್ಧಶತಕಗಳನ್ನು ಗಳಿಸಿದ ಹೊಸ ದಾಖಲೆಯನ್ನು ಬಂಗಾಳ ತಂಡವು ನಿರ್ಮಿಸಿತು.

ಜಸ್ಟ್ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಕ್ವಾರ್ಟರ್ ಫೈನಲ್‌ನಲ್ಲಿ ಬಂಗಾಳ ತಂಡದ ಮೊದಲ ಕ್ರಮಾಂಕದಿಂದ ಒಂಬತ್ತನೇ ಕ್ರಮಾಂಕದ ಬ್ಯಾಟರ್‌ಗಳು ಅರ್ಧಶತಕದ ಗಡಿ ದಾಟಿದರು. ಜಾರ್ಖಂಡ್ ಎದುರಿನ ಮೊದಲ ಇನಿಂಗ್ಸ್‌ನಲ್ಲಿ ಒಂಬತ್ತನೇ ಬ್ಯಾಟರ್ ಆಕಾಶ್ ದೀಪ್ 18 ಎಸೆತಗಳಲ್ಲಿ ಅಜೇಯ 53 ರನ್ ಗಳಿಸುವುದರೊಂದಿಗೆ ಈ ದಾಖಲೆ ನಿರ್ಮಾಣವಾಯಿತು. ಅದರಲ್ಲಿ ಎಂಟು ಸಿಕ್ಸರ್‌ಗಳಿದ್ದವು.

1893ರಲ್ಲಿ ಆಸ್ಟ್ರೇಲಿಯಾ ಬಳಗದ ಎಂಟು ಮಂದಿ ಇಂಗ್ಲೆಂಡ್‌ನ ಆಕ್ಸ್‌ಫರ್ಡ್ ಮತ್ತು ಕೆಂಬ್ರಿಜ್ ವಿವಿ ವಿರುದ್ಧ ಅರ್ಧಶತಕಗಳನ್ನು ದಾಖಲಿಸಿದ್ದರು.

ಸಂಕ್ಷಿಪ್ತ ಸ್ಕೋರು: ಜಸ್ಟ್ ಕ್ರಿಕೆಟ್ ಮೈದಾನ: ಮೊದಲ ಇನಿಂಗ್ಸ್–ಬಂಗಾಳ: 218.4 ಓವರ್‌ಗಳಲ್ಲಿ 7ಕ್ಕೆ773 ಡಿಕ್ಲೇರ್ಡ್ (ಮನೋಜ್ ತಿವಾರಿ 73, ಅಭಿಷೇಕ್ ಪೊರೆಲ್ 68, ಶಾಬಾಜ್ ಅಹಮದ್ 78, ಸಯಾನ್ ಮಂಡಲ್ ಔಟಾಗದೆ 53, ಆಕಾಶದೀಪ್ ಔಟಾಗದೆ 53, ಸುಶಾಂತ್ ಮಿಶ್ರಾ 140ಕ್ಕೆ3, ನದೀಪ್ 175ಕ್ಕೆ2) ಜಾರ್ಖಂಡ್: 43 ಓವರ್‌ಗಳಲ್ಲಿ 5ಕ್ಕೆ139 (ನಜೀಮ್ ಸಿದ್ಧಿಕಿ 53, ಸೌರಭ್ ತಿವಾರಿ 33, ಸಯಾನ್ ಮಂಡಲ್ 32ಕ್ಕೆ3, ಶಾಬಾಜ್ ಅಹಮದ್ 5ಕ್ಕೆ2)
ಆಲೂರು ಕ್ರೀಡಾಂಗಣ: ಮೊದಲ ಇನಿಂಗ್ಸ್: ಮುಂಬೈ: 166.4 ಓವರ್‌ಗಳಲ್ಲಿ 8ಕ್ಕೆ 647, ಉತ್ತರಾಖಂಡ: 41.1ಓವರ್‌ಗಳಲ್ಲಿ 114 (ಶಮ್ಸ್ ಮಲಾನಿ 39ಕ್ಕೆ5, ಮೋಹಿತ್ ಅವಸ್ತಿ 22ಕ್ಕೆ2), ಎರಡನೇ ಇನಿಂಗ್ಸ್: ಮುಂಬೈ: 58 ಓವರ್‌ಗಳಲ್ಲಿ 3ಕ್ಕೆ261 (ಪೃಥ್ವಿ ಶಾ 72, ಯಶಸ್ವಿ ಜೈಸ್ವಾಲ್ 103, ಆದಿತ್ಯ ತರೆ 57).

ಮೊದಲ ಇನಿಂಗ್ಸ್: ಪಂಜಾಬ್: 219, ಮಧ್ಯಪ್ರದೇಶ: 154.5 ಓವರ್‌ಗಳಲ್ಲಿ 397 (ಶುಭಂ ಶರ್ಮಾ 102, ಅಕ್ಷತ್ 69, ರಜತ್ ಪಾಟೀದಾರ್ 85 ವಿನಯ್ ಚೌಧರಿ 83ಕ್ಕೆ5). ಎರಡನೇ ಇನಿಂಗ್ಸ್: ಪಂಜಾಬ್:71.3 ಓವರ್‌ಗಳಲ್ಲಿ 219 (ಅಭಿಷೇಕ್ ಶರ್ಮಾ 47, ಅನ್ಮೋಲ್‌ಪ್ರೀತ್ 47, ಪುನೀತ್ ದಾತೆ 48ಕ್ಕೆ3, ಅನುಭವ್ 40ಕ್ಕೆ3)

ಆನಂದ್‌ಗೆ ಜಯ

ಸ್ಟಾವೆಂಜರ್, ನಾರ್ವೆ (ಪಿಟಿಐ): ವಿಶ್ವನಾಥನ್ ಆನಂದ್ ಅವರು ನಾರ್ವೆ ಚೆಸ್ ಟೂರ್ನಿಯ ಏಳನೇ ಸುತ್ತಿನಲ್ಲಿ ಅಜರ್‌ಬೈಜಾನ್‌ನ ತೈಮೂರ್ ರಜಬೊವ್ ಅವರನ್ನು ಮಣಿಸಿದರು.

ಏಳು ಸುತ್ತುಗಳ ಬಳಿಕ 13 ಪಾಯಿಂಟ್ಸ್ ಹೊಂದಿರುವ ಭಾರತದ ಗ್ರ್ಯಾಂಡ್‌ಮಾಸ್ಟರ್ ಎರಡನೇ ಸ್ಥಾನ ಕಾಪಾಡಿಕೊಂಡಿದ್ದಾರೆ. ಬುಧವಾರ ನಡೆದ ಆನಂದ್– ರಜಬೊವ್ ನಡುವಿನ ಕ್ಲಾಸಿಕಲ್ ಪಂದ್ಯ 42 ನಡೆಗಳ ಬಳಿಕ ಡ್ರಾದಲ್ಲಿ ಕೊನೆಗೊಂಡಿತು. ಫಲಿತಾಂಶ ನಿರ್ಣಯಿಸಲು ನಡೆದ ಆರ್ಮಗೆಡನ್ ಗೇಮ್‌ನಲ್ಲಿ ಆನಂದ್ 25 ನಡೆಗಳಲ್ಲಿ ಜಯ ಸಾಧಿಸಿದರು.

ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ 13.5 ಪಾಯಿಂಟ್ಸ್‌ಗಳೊಂದಿಗೆ ಅವರು ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.